ಸಂಪುಟ: 05 ಸಂಚಿಕೆ: 142 ಪುಟಗಳು: 08 ಸೋಮವಾರ 04 ಆಗಸ್ಟ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


**ಮುಂಜಾನೆ ಮಾತು**

ನಮಗೆಲ್ಲರಿಗೂ ಸಮಾನ ಪ್ರತಿಭೆ ಇಲ್ಲ. ಆದರೆ, ನಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಲು ನಮಗೆಲ್ಲರಿಗೂ ಸಮಾನ ಅವಕಾಶವಿದೆ.

# ರಾಜ್ಯಾಧ್ಯಕ್ಷ ಆಯ್ಕೆ ಪ್ರಕ್ರಿಯೆ ಶುರು: ಅವಿರೋಧ ಆಯ್ಕೆಗೆ ಆದ್ಯತೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನಕ್ಕೆ ವರಿಷ್ಠರು ಯಾರನ್ನು ಆಯ್ಕೆ ಮಾಡಬಹುದು ಎನ್ನುವ ಗೊಂದಲ ಇನ್ನೂ ಮುಂದುವರಿದಿದೆ. ರೆಬೆಲ್ ಟೀಂ ಹೈಕಮಾಂಡ್ ನಾಯಕರನ್ನ ಭೇಟಿ ಮಾಡಿ ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದಿದ್ದರೆ, ಮತ್ತೊಂದೆಡೆ ವಿಜಯೇಂದ್ರ ಅವರನ್ನೇ ಮುಂದುವರಿಸಬೇಕೆಂದು ಮತ್ತೊಂದು ಬಣ ಬಿಗಿಪಟ್ಟು ಹಿಡಿದಿದೆ. ಹೀಗಾಗಿ ಬೇರೆ ಹಲವು ರಾಜ್ಯಗಳಲ್ಲಿ ಅಧ್ಯಕ್ಷರ ಘೋಷಣೆಯಾಗಿದ್ದರೂ, ಕರ್ನಾಟಕ, ಉತ್ತರ ಪ್ರದೇಶ, ಗುಜರಾತ್ ಮುಂತಾದ ರಾಜ್ಯಗಳಲ್ಲಿ ಇನ್ನೂ ಹೆಸರು ಘೋಷಣೆಯಾಗದೇ ವಿಳಂಬವಾಗಿತ್ತು. ಈ ನಡುವೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೊಸ ಅಪ್ಡೇಟ್ ಕೊಟ್ಟಿದ್ದು, ವಿಳಂಬವಾಗಿದ್ದ ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆ




ಮತ್ತೆ ಶುರುವಾಗಿದೆ. ರಾಜ್ಯ ಬಿಜೆಪಿ ಘಟಕಕ್ಕೆ ಅವಿರೋಧವಾಗಿ ಅಧ್ಯಕ್ಷರ ಆಯ್ಕೆ ಆಗಲಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಧಾರವಾಡದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿ.ಸೋಮಣ್ಣ ಅಥವಾ ಬಿ.ವೈ.ವಿಜಯೇಂದ್ರ ಸೇರಿ ಯಾರೇ ಆಗಲಿ. ರಾಜ್ಯ ಬಿಜೆಪಿ ಘಟಕಕ್ಕೆ ಅವಿರೋಧವಾಗಿ ಅಧ್ಯಕ್ಷರ ಆಯ್ಕೆ ಆಗಲಿದೆ. ಎಲ್ಲಾ ರಾಜ್ಯಗಳಲ್ಲೂ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಅದರ ಜೊತೆ ನಮ್ಮ ರಾಜ್ಯ ಬಿಜೆಪಿಗೂ ಅಧ್ಯಕ್ಷ ಆಯ್ಕೆ ಆಗಲಿದೆ ಎಂದು ಹೇಳಿದರು. ವಿ.ಸೋಮಣ್ಣ ರಾಜ್ಯ ಬಿಜೆಪಿ ಅಧ್ಯಕ್ಷರಾಗಬೇಕೆಂಬ ಬಗ್ಗೆ ಪ್ರತಿಕ್ರಿಯಿಸಿರುವ ಜೋಶಿ, ವಿ.ಸೋಮಣ್ಣ ಏನು ಹೇಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ರಾಷ್ಟ್ರೀಯ ನಾಯಕರು ಅದರ ಬಗ್ಗೆ ವಿಚಾರ ಮಾಡುತ್ತಾರೆ. ಈ ಬಾರಿ ನಾಮಿನೇಟ್ ಮಾಡಲ್ಲ. ಅವಿರೋಧವಾಗಿ ಈ ಬಾರಿ ಆಯ್ಕೆ ನಡೆಯಲಿದೆ. ಸೋಮಣ್ಣ ಆಗಲಿ ಅಥವಾ ವಿಜಯೇಂದ್ರ ಯಾರೇ ಆಗಲಿ. ಅವರ ಬಗ್ಗೆ ರಾಷ್ಟ್ರೀಯ ನಾಯಕರು ತೀರ್ಮಾನ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು.

**ಅಧ್ಯಕ್ಷ ಗಾದಿಗೆ ಬಿರುಸಿನ ಪೈಪೋಟಿ**

ವಿಜಯೇಂದ್ರ, ಸೋಮಣ್ಣ ಎಲ್ಲಿಯೂ ಅಧ್ಯಕ್ಷ ನಾನೇ ಎಂದು ಹೇಳಿಲ್ಲ. ಯಾರನ್ನೇ ಮಾಡಬೇಕೆಂದರೂ ಸಹ ರಾಷ್ಟ್ರೀಯ ನಾಯಕರೇ ತೀರ್ಮಾನ ಮಾಡುತ್ತಾರೆ. ದೇಶದಲ್ಲಿ ರಾಜ್ಯಾಧ್ಯಕ್ಷ ಆಯ್ಕೆ ಆಗುತ್ತಿದೆ. ಹಲವು ಚುನಾವಣಾ ಕಾರಣಗಳಿಂದ ಆಯ್ಕೆ ತಡವಾಗಿತ್ತು. ಇದೀಗ ಮತ್ತೆ ಕಾರ್ಯ ಆರಂಭವಾಗಲಿದೆ ಎಂದು ತಿಳಿಸಿದರು. ಮುಂದಿನ ಕರ್ನಾಟಕ ಬಿಜೆಪಿ ಅಧ್ಯಕ್ಷರು ಯಾರು ಎಂದು ಸದ್ಯ ಇಡೀ ಕಮಲ ಪಾಳೆಯದಲ್ಲಿ ಬಿಸಿ ಬಿಸಿ ಚರ್ಚೆಯಾಗುತ್ತಿದೆ. ಆದ್ರೆ ಇದಕ್ಕೆ ಸ್ಪಷ್ಟವಾದ ಉತ್ತರ ಮಾತ್ರ ಸಿಗುತ್ತಿಲ್ಲ, ಕಳೆದ 6–7 ತಿಂಗಳಿನಿಂದ ಅಧ್ಯಕ್ಷರ ಆಯ್ಕೆಯ ಕಸರತ್ತು ನಡೆಯುತ್ತಲೇ ಇದೆ. ಆದ್ರೆ ಅಂತಿಮ ಮುದ್ರೆ ಮಾತ್ರ ಬೀಳುತ್ತಿಲ್ಲ, ಮೊದಲು ಜುಲೈನಲ್ಲಿ ಅಧ್ಯಕ್ಷರ ಹೆಸರು ಘೋಷಣೆ ಆಗುತ್ತೆ ಎಂದು ಹೇಳಲಾಗಿತ್ತು, ಆದಾದ ಬಳಿಕ ಪ್ರಧಾನಿ ಮೋದಿಯವರು ವಿದೇಶ ಪ್ರವಾಸ ಮುಗಿಸಿ ಬಂದ ಬಳಿಕ ಹೆಸರು ಘೋಷಣೆಯಾಗುತ್ತೆ ಎನ್ನಲಾಗಿತ್ತು. ಆದರೆ ರಾಷ್ಟ್ರೀಯ ಅಧ್ಯಕ್ಷ ಆಯ್ಕೆ ವಿಳಂಬವಾಗಿದ್ದರಿಂದ ಕರ್ನಾಟಕ ಅಧ್ಯಕ್ಷ ಆಯ್ಕೆ ಪ್ರತಿಕ್ರಿಯೆ ಸಹ ಅಲ್ಲಿಗೆ ಸ್ಟಾಪ್ ಆಗಿತ್ತು. ಆದ್ರೆ, ಇದೀಗ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದಂತೆ ಮತ್ತೆ ರಾಜ್ಯಾಧ್ಯಕ್ಷ ಆಯ್ಕೆ ಪ್ರಕ್ರಿಯೆ ಶುರುವಾಗಲಿದ್ದು, ಕರ್ನಾಟಕ ಬಿಜೆಪಿ ಅಧ್ಯಕ್ಷ ಪಟ್ಟ ಯಾರಿಗೆ ಒಲಿಯಲಿದೆ ಎನ್ನುವ ಕುತೂಹಲಕ್ಕೆ ಕಾರಣವಾಗಿದೆ.



ಮುಂದಿನ ಅಧ್ಯಕ್ಷರು ಯಾರಾಗಬಹುದು ಎನ್ನುವ ವಿಚಾರದಲ್ಲಿ ರಾಜ್ಯ ಬಿಜೆಪಿ ಘಟಕದಲ್ಲಿ ದಿನಕ್ಕೊಂದು ಹೆಸರುಗಳು ಮುನ್ನಲೆಗೆ ಬರುತ್ತಿದೆ. ಮಾಜಿ ಸಿಎಂ ಯಡಿಯೂರಪ್ಪನವರ ಪುತ್ರ ಬಿವೈ ವಿಜಯೇಂದ್ರ ಅವರ ಹೆಸರು ಮಂಚೂಣಿಯಲ್ಲಿದ್ದರೂ, ಇನ್ನೂ ಹೆಸರು ಪ್ರಕಟವಾಗದೇ ಇರುವ ಹಿನ್ನಲೆಯಲ್ಲಿ, ಇದರಲ್ಲೂ ಗೊಂದಲವಿದೆ ಎಂದು ಹೇಳಲಾಗುತ್ತಿದೆ.

## ಬೆಂಗಳೂರು ಟ್ರಾಫಿಕ್ ಜಾಮ್‌ಗೆ ಸಿಗ್ತಿಲ್ಲ ಪರಿಹಾರ

• ಉದಯವಾಹಿನಿ, ಬೆಂಗಳೂರು

ಬ್ರ್ಯಾಂಡ್ ಬೆಂಗಳೂರು ಇದೀಗ ಟ್ರಾಫಿಕ್ ಬೆಂಗಳೂರು ಆಗಿದೆ. ಸಿಲಿಕಾನ್ ಸಿಟಿ, ಗ್ರೀನ್ ಸಿಟಿ ಎಂದೆಲ್ಲಾ ವಿಶೇಷಣಗಳಿಂದ ಗುರುತಿಸಿಕೊಂಡಿರುವ ಬೆಂಗಳೂರು ಇದೀಗ ಟ್ರಾಫಿಕ್ ಸಿಟಿ ಆಗಿದೆ. ಬೆಂಗಳೂರು ಟ್ರಾಫಿಕ್ ಸಮಸ್ಯೆಗೆ ನಾನಾ ಕಾರಣಗಳು ಇವೆ. ಈ ಪೈಕಿ ರಸ್ತೆ ಅಕ್ಕ ಪಕ್ಕದಲ್ಲಿ ಕೆಟ್ಟು ನಿಂತ ವಾಹನಗಳು ಒಂದು ಕಾರಣವಾಗಿದೆ. ಬೆಂಗಳೂರಿನ ಹಲವು ರಸ್ತೆಗಳಲ್ಲಿ ಅನಾಮಿಕ ವ್ಯಕ್ತಿಗಳು ವಾಹನಗಳನ್ನು ನಿಲ್ಲಿಸಿದ್ದಾರೆ. ವರ್ಷಾನುಗಟ್ಟಲೆ ಈ ವಾಹನಗಳು ಅಲ್ಲೇ ನಿಂತಿರುತ್ತವೆ. ಇದರ ವಾರಸುದಾರರು ಕೂಡಾ ಯಾರು ಕಂಡು ಬರುತ್ತಿಲ್ಲ. ಇದರಿಂದ ಹಲವು ಪ್ರದೇಶಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದೆ. ಈ ಬಗ್ಗೆ ಕಳೆದ ವಿಧಾನಸಭೆ ಅಧಿವೇಶನದಲ್ಲಿ ಬಿಜೆಪಿ ಶಾಸಕರಾದ ಸುರೇಶ್ ಕುಮಾರ್ ಅವರು ಗಮನ ಸೆಳೆದಿದ್ದರು. ಸಮಸ್ಯೆ ಸರಿಪಡಿಸುವಂತೆಯೂ ಮನವಿ ಮಾಡಿದ್ದರು. ಇದಕ್ಕೆ ಉತ್ತರ ಕೊಟ್ಟಿದ್ದ ಸರ್ಕಾರ ಸಮಸ್ಯೆ ಬಗೆಹರಿಸುವ ಭರವಸೆಯನ್ನು ನೀಡಿತ್ತು.

## ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ ನಿಖಿಲ್ ಕುಮಾರಸ್ವಾಮಿ ಏನಂದ್ರು

• ಉದಯವಾಹಿನಿ, ಬೆಂಗಳೂರು

ಜೆಡಿಎಸ್ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆಯಾಗಿರುವ ಬಗ್ಗೆ ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡರ ಕುಟುಂಬದಿಂದ ಮೊದಲ ಪ್ರತಿಕ್ರಿಯೆ ಬಂದಿದೆ. ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಈ ಬಗ್ಗೆ ಮಾತನಾಡಿದ್ದಾರೆ. ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ಅವರಿಗೆ ನ್ಯಾಯಾಲಯ ಶುಕ್ರವಾರವೇ ದೋಷಿ ಎಂದು ಘೋಷಿಸಿತ್ತು. ಶನಿವಾರ ಜೀವಾವಧಿ ಶಿಕ್ಷೆ ವಿಧಿಸಿತ್ತು. ಈ ಬಗ್ಗೆ ಕುಟುಂಬಸ್ಥರು ಯಾರೂ ಪ್ರತಿಕ್ರಿಯೆ ನೀಡಿರಲಿಲ್ಲ. ಸದ್ಯ ಹಿರಿಯೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿಖಿಲ್ ಪ್ರತಿಕ್ರಿಯೆ ನೀಡಿದ್ದಾರೆ. ಪ್ರಜ್ವಲ್ ರೇವಣ್ಣಗೆ ಶಿಕ್ಷೆ ಪ್ರಕಟ ಜೆಡಿಎಸ್ ಪಕ್ಷಕ್ಕೆ ಡ್ಯಾಮೇಜ್ ಆಗುತ್ತಾ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ನಿಖಿಲ್ ಕುಮಾರಸ್ವಾಮಿ, ನ್ಯಾಯಾಲಯ, ನ್ಯಾಯಾಧೀಶರ ತೀರ್ಪಿಗೆ ಎಲ್ಲರೂ ತಲೆಬಾಗಬೇಕು ಎಂದು ಹೇಳಿದರು. ಮುಂದುವರೆದು, ಪ್ರಜ್ವಲ್ ರೇವಣ್ಣ ಆರೋಪಿ ಎಂದು ತಿಳಿದ ಕೂಡಲೇ ಜೆಡಿಎಸ್ ವರಿಷ್ಠರು ಅವರನ್ನು ಪಕ್ಷದಿಂದ ಅಮಾನತ್ತಿನಟ್ಟಿದ್ದರು ಎಂದು ತಿಳಿಸಿದರು.

## ಸಾಂಗ್ಲಿ ಪ್ರವಾಹಕ್ಕೆ ಮಹಾರಾಷ್ಟ್ರವೇ ಹೊಣೆ: ಸಚಿವ ಎಂ.ಬಿ.ಪಾಟೀಲ

• ಉದಯವಾಹಿನಿ, ಬೆಂಗಳೂರು

ಮಹಾರಾಷ್ಟ್ರ ಸರ್ಕಾರವು ಕೊಯ್ನಾ, ರಾಜಾಪುರ ಅಣೆಕಟ್ಟೆಗಳಿಂದ ದಿಢೀರ್ ಎಂದು ಅಪಾರ ಪ್ರಮಾಣದ ನೀರು ಹೊರಬಿಡುವುದರಿಂದಲೇ ಸಾಂಗ್ಲಿ, ಸತಾರಾ, ಕೊಲ್ಲಾಪುರ ಜಿಲ್ಲೆಯಲ್ಲಿ ಪ್ರವಾಹ ತಲೆದೋರುತ್ತದೆ ಎಂದು ಅಲ್ಲಿನ ಸರ್ಕಾರ ರಚಿಸಿದ್ದ ತಜ್ಞರ ಸಮಿತಿಯೇ ಹೇಳಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ. ಮಹಾರಾಷ್ಟ್ರದ ಜಲಸಂಪನ್ಮೂಲ ಇಲಾಖೆಯ ನಿವೃತ್ತ ಪ್ರಧಾನ ಕಾರ್ಯದರ್ಶಿ ನಂದಕುಮಾರ್ ವಡ್ಡರೆ ಅವರು ಸಲ್ಲಿಸಿದ್ದ ತಜ್ಞರ ವರದಿಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ. 'ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆ ಸೇರಿದಂತೆ ಹಲವೆಡೆಗಳಲ್ಲಿ 2019ರಲ್ಲಿ ಪ್ರವಾಹ ಉಂಟಾಗಿತ್ತು. ಭವಿಷ್ಯದಲ್ಲಿ ಪ್ರವಾಹವನ್ನು ತಡೆಯಲು ಏನು ಮಾಡಬೇಕೆಂದು ಸೂಚಿಸುವಂತೆ ತಿಳಿಸಿ ಮಹಾರಾಷ್ಟ್ರ ಸರ್ಕಾರವು ವಡ್ಡರೆ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿತ್ತು. 2020ರಲ್ಲಿ ಸಮಿತಿಯು ವರದಿ ಸಲ್ಲಿಸಿತ್ತು' ಎಂದು ಮಾಹಿತಿ ನೀಡಿದ್ದಾರೆ. 'ಸಾಂಗ್ಲಿ ಮತ್ತು ಕೊಲ್ಲಾಪುರದಲ್ಲಿ ಪ್ರವಾಹ ಉಂಟಾಗಲು ಕರ್ನಾಟಕದ ಆಲಮಟ್ಟಿ ಮತ್ತು ಹಿಪ್ಪರಗಿ ಜಲಾಶಯಗಳ ಹಿನ್ನೀರು ಕಾರಣವಲ್ಲ ಎಂದರು.

## 'ಆಪರೇಷನ್ ಅಖಾಲ್' ಮೂಲಕ ಹೊಸಕಿಹಾಕಿದ ಸೇನೆ

# ಮೂವರು ಉಗ್ರರು ಉಡೀಸ್



**ಕಾಶ್ಮೀರದಲ್ಲಿ ಮುಂದುವರೆದ ಉಗ್ರ ಬೇಟೆ ಮತ್ತೆ ಮೂವರು ಉಗ್ರರನ್ನು ಹತ್ಯೆಗೈದ ಭಾರತೀಯ ಸೇನೆ..!**

**ರಾತ್ರಿಯಿಂದಲೂ ಗುಂಡಿನ ಚಕಮಕಿ ಮೂರು ದಿನದಲ್ಲಿ 6 ಉಗ್ರರ ಹತ್ಯೆ**

**ಕಾಶ್ಮೀರದ ಕುಲ್ಗಾಮ್‌ನಲ್ಲಿ ಎನ್‌ಕೌಂಟರ್**

**ಆಪರೇಷನ್ ಶಿವಶಕ್ತಿ**

ಜು.9ರಂದು, ಶಿವಶಕ್ತಿ ಎಂಬ ಹೆಸರಿನ ಮತ್ತೊಂದು ಕಾರ್ಯಾಚರಣೆ ನಡೆಸಲಾಗಿತ್ತು. ಸೇನೆಯು ಇನ್ನೂ ಇಬ್ಬರು ಭಯೋತ್ಪಾದಕರನ್ನು ನಿರ್ಮೂಲನೆ ಮಾಡಿತ್ತು. ಏ.22ರ ದಾಳಿಯ ನಂತರ ಸುಮಾರು 20 ಉನ್ನತ ಮಟ್ಟದ ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲಾಗಿದೆ. ಇದಲ್ಲದೆ, ಮೇ 6ರಿಂದ 7ರ ನಡುವೆ ಪಾಕಿಸ್ತಾನದಲ್ಲಿ ನಡೆದ ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ 100ಕ್ಕೂ ಹೆಚ್ಚು ಭಯೋತ್ಪಾದಕರನ್ನು ಭದ್ರತಾ ಪಡೆಗಳು ಕೊಂದಿದ್ದವು.

**ಭಯೋತ್ಪಾದಕ ವಿರೋಧಿ ಕಾರ್ಯಾಚರಣೆ!**

ಅಖಾಲ್ ಕಾಡಿನ ದಟ್ಟ ಗಿಡಗಂಟೆಗಳು ಮತ್ತು ಕಠಿಣ ಭೂಪ್ರದೇಶವು ಕಾರ್ಯಾಚರಣೆ ಸವಾಲಿನದ್ದಾಗಿಸಿದೆ. ರಾತ್ರಿಯ ಗುಂಡಿನ ಕಾಳಗದ ಸಂದರ್ಭದಲ್ಲಿ ದೃಷ್ಟಿಗೋಚರತೆ ಕಡಿಮೆಯಿರುವುದರಿಂದ, ಭದ್ರತಾ ಪಡೆಗಳು ಡ್ರೋನ್ ಗಸ್ತು, ರಾತ್ರಿ ದೃಷ್ಟಿ ಉಪಕರಣಗಳು ಮತ್ತು ಥರ್ಮಲ್ ಇಮೇಜಿಂಗ್ ಸಾಧನಗಳನ್ನು ಬಳಸಿಕೊಂಡಿವೆ. ಎಲ್ಲಾ ಸಂಭಾವ್ಯ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಸೀಲ್ ಮಾಡಲು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮಹಾನಿರ್ದೇಶಕ ನಳಿನ್ ಪ್ರಭಾತ್ ಘಟನಾಸ್ಥಳಕ್ಕೆ ಭೇಟಿ ನೀಡಿ, ಕಾರ್ಯಾಚರಣೆಯ ಪರಿಶೀಲನೆ ನಡೆಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಮೂರನೇ ಪ್ರಮುಖ ಭಯೋತ್ಪಾದಕ ವಿರೋಧಿ ಕಾರ್ಯಾಚರಣೆಯಾಗಿದೆ.

• ಉದಯವಾಹಿನಿ, ನವದೆಹಲಿ

ಜಮ್ಮು ಮತ್ತು ಕಾಶ್ಮೀರದಲ್ಲಿ ಈ ವರ್ಷದ ಅತಿದೊಡ್ಡ ಭಯೋತ್ಪಾದನಾ ನಿಗ್ರಹ ವ್ಯಾಯಾಮಗಳಲ್ಲಿ ಒಂದಾದ ಆಪರೇಷನ್ ಅಖಲ್ ಭಾನುವಾರ ಮೂರನೇ ದಿನಕ್ಕೆ ಕಾಲಿಟ್ಟಾಗ ಮೂವರು ಭಯೋತ್ಪಾದಕರು ಸಾವನ್ನಪ್ಪಿದ್ದಾರೆ ಅಷ್ಟೇ ಅಲ್ಲದೆ ಒಬ್ಬ ಸೈನಿಕ ಗಾಯಗೊಂಡಿದ್ದಾರೆ. ಭದ್ರತಾ ಪಡೆಗಳು ಮೂವರನ್ನು ಹೊಡೆದುರುಳಿಸಿದ ನಂತರ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಕೊಲ್ಲಲ್ಪಟ್ಟ ಒಟ್ಟು ಭಯೋತ್ಪಾದಕರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ. ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಅಖಲ್ ಅರಣ್ಯ ಪ್ರದೇಶದಲ್ಲಿ ರಾತ್ರಿಯಿಡೀ ಸ್ಫೋಟಗಳು ಮತ್ತು ಗುಂಡಿನ ಸದ್ದುಗಳು ಮುಂದುವರೆದವು. ಜಮ್ಮು ಮತ್ತು ಕಾಶ್ಮೀರ ಪೊಲೀಸರು, ಸೇನೆ ಮತ್ತು ಸಿಆರ್‌ಪಿಎಫ್‌ನ ಜಂಟಿ ತಂಡ ಮತ್ತು ಭಯೋತ್ಪಾದಕರ ನಡುವಿನ ಎನ್ಕೌಂಟರ್ ಇನ್ನೂ ನಡೆಯುತ್ತಿದೆ.

ಭಯೋತ್ಪಾದಕರ ಉಪಸ್ಥಿತಿಯ ಬಗ್ಗೆ ಗುಪ್ತಚರ ಮಾಹಿತಿ ಪಡೆದ ನಂತರ ಭದ್ರತಾ ಪಡೆಗಳು ಅಖಲ್ ಅರಣ್ಯದಲ್ಲಿ ಶೋಧ ಕಾರ್ಯಾಚರಣೆ ಪ್ರಾರಂಭಿಸಿದವು. ಅರಣ್ಯದಲ್ಲಿ ಅಡಗಿದ್ದ ಭಯೋತ್ಪಾದಕರ ಗುಂಪೊಂದು ಭದ್ರತಾ ಪಡೆಗಳ ಮೇಲೆ ಗುಂಡು ಹಾರಿಸಿದ ನಂತರ ಎನ್ಕೌಂಟರ್ ಆರಂಭ ಆಯಿತು. ಆರಂಭಿಕ ಗುಂಡಿನ ಚಕಮಕಿಯ ನಂತರ ಕಾರ್ಯಾಚರಣೆ ನಿಲ್ಲಿಸಲಾಯಿತು.

**1** ಜಮ್ಮು ಮತ್ತು ಕಾಶ್ಮೀರದಲ್ಲಿ ಅಖಲ್ ಕಾರ್ಯಾಚರಣೆಯ 3ನೇ ದಿನದಂದು ಮೂವರು ಭಯೋತ್ಪಾದಕರು ಕೊಲ್ಲಲ್ಪಟ್ಟಿದ್ದಾರೆ, ಒಬ್ಬ ಸೈನಿಕನಿಗೆ ಗಾಯ

**2** ಕುಲ್ಗಾಮ್ ಜಿಲ್ಲೆಯ ಅಖಲ್ ಅರಣ್ಯದಲ್ಲಿ ಮೂರು ದಿನಗಳಿಂದ ನಿರಂತರ ಗುಂಡಿನ ದಾಳಿ

**3** ಭದ್ರತಾ ಪಡೆಗಳು, ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮತ್ತು ವಿಶೇಷ ಕಾರ್ಯಾಚರಣೆ

ಭದ್ರತಾ ಪಡೆಗಳು ಮೂವರು ಭಯೋತ್ಪಾದಕರನ್ನು ನಿರ್ಮೂಲನೆ ಮಾಡುವುದರೊಂದಿಗೆ ಇದು ಪುನರಾರಂಭವಾಯಿತು.

ಕೊಲ್ಲಲ್ಪಟ್ಟ ಭಯೋತ್ಪಾದಕರು ನಿಷೇಧಿತ ಲಷ್ಕರ್-ಎ-ತೊಯ್ಬಾದ ಅಂಗವಾದ ದಿ ರೆಸಿಸ್ಟೆನ್ಸ್ ಫ್ರಂಟ್ ಗೆ ಸೇರಿದವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 26 ನಾಗರಿಕರ ಸಾವಿಗೆ ಕಾರಣವಾದ ಪೆಹಲ್ಗಾಮ್ ಭಯೋತ್ಪಾದಕ ದಾಳಿಯ ಹೊಣೆ ಈ ಸಂಘಟನೆಯು ಹೊತ್ತುಕೊಂಡಿತ್ತು.

**ಏನಿದು ಕಾರ್ಯಾಚರಣೆ...? :** ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ, ಭದ್ರತಾ ಪಡೆಗಳು ಉಗ್ರರ ಹೆಡೆಮುರಿ ಕಟ್ಟಲು ಆಪರೇಷನ್ ಅಖಲ್ ಕಾರ್ಯಾಚರಣೆ ಪ್ರಾರಂಭಿಸಿವೆ. ಸೇನೆ, ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮತ್ತು ವಿಶೇಷ ಕಾರ್ಯಾಚರಣೆ ಗುಂಪಿನ ಜಂಟಿ ಪ್ರಯತ್ನವಾದ ಈ ಕಾರ್ಯಾಚರಣೆಯು ಗುಪ್ತಚರ ಮಾಹಿತಿ ನಂತರ ಅಖಲ್ ಕಾರ್ಯಾಚರಣೆ ಖುಲ್ಸಾನ್ ಅರಣ್ಯಪ್ರದೇಶವನ್ನು ಗುರಿಯಾಗಿ ಸಿಕೊಂಡಿದೆ. ಪ್ರಸ್ತುತ ನಡೆಯುತ್ತಿರುವ ಕಾರ್ಯಾಚರಣೆಗಳು ಮಾದಕವಸ್ತು ಕಳ್ಳಸಾಗಣೆ ಮತ್ತು ಭೂಗತ ಕಾರ್ಮಿಕರನ್ನು ಗುರಿಯಾಗಿಸುವುದು ಸೇರಿದಂತೆ ಭಯೋತ್ಪಾದನೆಯನ್ನು ಆಮೂಲಾಗ್ರವಾಗಿ ಮಟ್ಟಹಾಕುವ ಗುರಿಯನ್ನು ಹೊಂದಿದೆ. ಹೈಟೆಕ್ ಕಣ್ಗಾವಲು ವ್ಯವಸ್ಥೆಗಳು ಮತ್ತು ಗಣ್ಯ ಅರೆಸೈನಿಕ ಪಡೆಗಳು ಈ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿವೆ. ಡಿಜಿಪಿ ಮತ್ತು 15 ಕಾರ್ಪ್ಸ್ ಕಮಾಂಡರ್ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಆಪರೇಷನ್ ಮಹಾದೇವ್‌ನಲ್ಲಿ ಶ್ರೀನಗರದ ದಾಚಿಗಮ್ ಪ್ರದೇಶದ ಬಳಿ ಪೆಹಲ್ಗಾಮ್ ಹತ್ಯಾಕಾಂಡದ ಹಿಂದಿನ ಲಷ್ಕರ್ ಭಯೋತ್ಪಾದಕರನ್ನು ಭದ್ರತಾ ಪಡೆಗಳು ಕೊಂದ ಕೆಲವು ದಿನಗಳ ನಂತರ ಈ ಬೆಳವಣಿಗೆ ಸಂಭವಿಸಿದೆ.



# 20ನೇ ಕಂತು; ರಾಜ್ಯದ ರೈತರಿಗೆ 837 ಕೋಟಿ ರೂ. ಬಿಡುಗಡೆ

● ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈತ ಪರ, ● 6 ಸಾವಿರ ರೂ. ಹಣವನ್ನು ರೈತರ ಖಾತೆಗೆ ಜಮಾ

• ಉದಯವಾಹಿನಿ, ಬೆಂಗಳೂರು

ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಡಿ ದೇಶದಲ್ಲಿನ 9.70 ಕೋಟಿಗಿಂತ ಹೆಚ್ಚು ರೈತ ಫಲಾನುಭವಿಗಳಿಗೆ, 20ನೇ ಕಂತಿನ 20,500 ಕೋಟಿ ರೂ. ಹಣವನ್ನು ವರ್ಗಾವಣೆ ಮಾಡಲಾಗಿದೆ. ಕರ್ನಾಟಕ ರಾಜ್ಯದ 43.28 ಲಕ್ಷ ರೈತರಿಗೆ 877 ಕೋಟಿ ರೂ. ಬಿಡುಗಡೆ ಆಗಿದೆ ಎಂದು ಕೇಂದ್ರ ಜಲಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ತಾಲ್ಲೂಕಿನ ಹಾಡೋನಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರದಲ್ಲಿ ಪಿಎಂ ಕಿಸಾನ್ ಸಮ್ಮಾನ್ ನಿಧಿಯ 20ನೇ ಕಂತಿನ ಹಣ ಬಿಡುಗಡೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ವಿ. ಸೋಮಣ್ಣ, ಪಿಎಂ ಕಿಸಾನ್ ಸಮ್ಮಾನ್ ಯೋಜನೆಯ 20ನೇ ಕಂತಿನ ಹಣ ರೈತರ ಖಾತೆಗೆ ಜಮಾ ಆಗಿದೆ ಎಂದು ಸ್ಪಷ್ಟಪಡಿಸಿದರು.

ಪಿಎಂ ಕಿಸಾನ್ ಸಮ್ಮಾನ್ ಯೋಜನೆ 2019ರಲ್ಲಿ ಪ್ರಾರಂಭವಾಗಿದೆ. ವರ್ಷಕ್ಕೆ ಮೂರು ಕಂತುಗಳಲ್ಲಿ ತಲಾ 2 ಸಾವಿರದಂತೆ, 6 ಸಾವಿರ ರೂ. ಹಣವನ್ನು ರೈತರ ಖಾತೆಗೆ ಜಮಾ ಮಾಡಲಾಗುತ್ತಿದೆ. ಈ ಹಿಂದೆ ಕೇಂದ್ರದಿಂದ 10 ರೂ. ಬಿಡುಗಡೆಯಾದರೆ ಫಲಾನುಭವಿಗೆ ತಲುಪುವ ವೇಳೆಗೆ 2 ರೂ. ಆಗುತ್ತಿತ್ತು. ಆದರೆ ಇದೀಗ ಡಿಬಿಟಿ ಮೂಲಕ ರೈತರ ಖಾತೆಗೆ ನೇರವಾಗಿ ತಲುಪುತ್ತಿದೆ. ರಾಜ್ಯ ಸರ್ಕಾರದಿಂದ ನೀಡುತ್ತಿದ್ದ 4 ಸಾವಿರ ರೂಪಾಯಿಯನ್ನು ಕಡಿತ ಮಾಡಲಾಗಿದೆ. ಆದರೆ ಕೇಂದ್ರ ಸರ್ಕಾರ ರೈತರ ಹಲವು ಬೆಳೆಗಳಿಗೆ ಬೆಂಬಲ ಬೆಲೆ ನೀಡಿದೆ. ಪ್ರಧಾನಮಂತ್ರಿ



**ಪಿಎಂ ಕಿಸಾನ್ ಸಮ್ಮಾನ್ ನಿಧಿ**

ನರೇಂದ್ರ ಮೋದಿ ಅವರು ರೈತರ ಅಭ್ಯುದಯಕ್ಕಾಗಿ ಕೆಲಸ ಮಾಡುತ್ತಿದ್ದಾರೆ ಎಂದು ವಿ. ಸೋಮಣ್ಣ ಇದೇ ವೇಳೆ ಹೇಳಿದರು.

**43.28 ಲಕ್ಷ ರೈತರಿಗೆ ಅನುಕೂಲ:** ಕೇಂದ್ರ ಸರ್ಕಾರ ಈವರೆಗೆ ಬಜೆಟ್‌ನಲ್ಲಿ ಕೃಷಿಗಾಗಿ 1.27 ಲಕ್ಷ ಕೋಟಿ ರೂ.ಮೀಸಲಿರಿಸಿದೆ. ಪಿಎಂ ಕಿಸಾನ್ ಸಮ್ಮಾನ್ 20ನೇ ಕಂತು ಒಟ್ಟು 20,800 ಕೋಟಿ ರೂ. ಒಳಗೊಂಡಿದೆ. ಇದರಿಂದ ದೇಶದ 9.7 ಕೋಟಿ ರೈತರಿಗೆ ಅನುಕೂಲವಾಗಿದೆ. ರಾಜ್ಯದ 43.28 ಲಕ್ಷ ರೈತರಿಗೆ 877 ಕೋಟಿ ರೂ. ಬಿಡುಗಡೆ ಆಗಿದೆ. ಈವರೆಗೆ ರಾಜ್ಯದ ರೈತರಿಗಾಗಿ 18,926 ಕೋಟಿ ರೂ. ನೆರವನ್ನು ನೀಡಲಾಗಿದೆ. ಇದರಲ್ಲಿ 2.26 ಕೋಟಿಗೂ ಅಧಿಕ ಮಂದಿ ಮಹಿಳಾ ಫಲಾನುಭವಿಗಳಿದ್ದಾರೆ ಎಂದು ಕೇಂದ್ರ ಜಲಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವರು ಮಾಹಿತಿ ನೀಡಿದರು.

ಕರ್ನಾಟಕಕ್ಕೆ ಗೊಬ್ಬರ ಪೂರೈಕೆ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸಚಿವ ಜೆ.ಪಿ. ನಡ್ಡಾ, ಕೃಷಿ ಸಚಿವ ಶಿವರಾಜ್ ಸಿಂಗ್ ಚೌವ್ಹಾನ್ ಅವರಿಗೆ ಪತ್ರ ಬರೆದಿದ್ದಾರೆ.

ಉತ್ತಮ ಮಳೆಯಾಗಿರುವುದರಿಂದ, ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಇದೆ. ಹಾಗಾಗಿ ಬೇಡಿಕೆಗೆ ಅನುಗುಣವಾಗಿ ಗೊಬ್ಬರ ವ್ಯವಸ್ಥೆ ಮಾಡಬೇಕು ಎಂಧು ಕೆ.ಎಚ್. ಮುನಿಯಪ್ಪ ಆಗ್ರಹಿಸಿದರು.

ಕೆವಿಕೆ ಆವರಣದಲ್ಲಿ ಕೃಷಿ, ತೋಟಗಾರಿಕೆ, ನಾನಾ ಸಂಸ್ಥೆಗಳಿಂದ ಮಳಿಗೆ ಸ್ಥಾಪಿಸಲಾಗಿತ್ತು. ಸಂಸದ ಡಾ.ಕೆ ಸುಧಾಕರ್, ಶಾಸಕ ಧೀರಜ್ ಮುನಿರಾಜು, ಜಿಲ್ಲಾಧಿಕಾರಿ ಎ.ಬಿ. ಬಸವರಾಜು, ಕೃಷಿ ವಿವಿ ಉಪಕುಲಪತಿ ಡಾ. ಸುರೇಶ ಮತ್ತಿತ್ತರರು ಹಾಜರಿದ್ದರು.

### ಕೇಂದ್ರ ಸರ್ಕಾರ ರೈತರ ನೆರವಿಗೆ ಬರಲಿ

ಇನ್ನು ಸಮಾರಂಭ ಉದ್ದೇಶಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿಬ ಕೆ.ಎಚ್. ಮುನಿಯಪ್ಪ, ಕೇಂದ್ರ ಸರ್ಕಾರ ದೊಡ್ಡ ಉದ್ಯಮಿಗಳ ಸಾಲ ಮನ್ನಾ ಮಾಡಿದೆ. ಆದರೆ ದೇಶದ ರೈತರ ಸಾಲಮನ್ನಾ ಮಾಡಬೇಕು. ಸೋಮಣ್ಣ ಅವರು ಪ್ರಧಾನಿ ನರೇಂದ್ರ ಮೋದಿ, ಕೃಷಿ ಸಚಿವರೊಂದಿಗೆ ಮಾತನಾಡಿ, ರೈತರ ನೆರವಿಗೆ ಬರಬೇಕು ಎಂದು ಒತ್ತಾಯಿಸಿದರು. ಬಯಲು ಸೀಮೆಯ ಶಾಶ್ವತ ನೀರಾವರಿ ಸೌಲಭ್ಯಕ್ಕಾಗಿ ಪರಮಶಿವಯ್ಯ ವರದಿ ಜಾರಿಗೆ ಕ್ರಮ ವಹಿಸಬೇಕು. ನಾವು ಎತ್ತಿನಹೊಳೆ ಯೋಜನೆ ತಂದಿದ್ದೇವೆ. ವಿಶ್ವೇಶ್ವರಯ್ಯ ಅವರ ಮಾದರಿ ನೀರಿಗೆ ಆದ್ಯತೆ ನೀಡಬೇಕು. ಅಭಿವೃದ್ಧಿ ಕೆಲಸಗಳಲ್ಲಿ ನಾವು ನಿಮ್ಮ ಜೊತೆಗೆ ಇರುತ್ತೇವೆ ವಿ. ಸೋಮಣ್ಣ ಅವರನ್ನು ಉದ್ದೇಶಿಸಿ ಕೆ.ಎಚ್. ಮುನಿಯಪ್ಪ ಹೇಳಿದರು.

### ರೈಲ್ವೆ ಯೋಜನೆಗಳಿಗೆ ಆದ್ಯತೆ

ಯುಪಿಎ ಅವಧಿಯಲ್ಲಿ ಕೇಂದ್ರ ಸರಕಾರದಲ್ಲಿ ರೈಲ್ವೆ ಸಚಿವರಾಗಿದ್ದ ಕೆ.ಎಚ್ ಮುನಿಯಪ್ಪ ಅವರು ರಾಜ್ಯದಲ್ಲಿನ 12 ರೈಲ್ವೆ ಯೋಜನೆಗಳಿಗೆ ಮೊದಲ ಆದ್ಯತೆ ನೀಡಿದ್ದರು. ಅವರ ಕಾಲದಲ್ಲಿ 39 ಸಾವಿರ ಕೋಟಿ ರೂ. ಯೋಜನೆಗಳಿಗೆ ಚಾಲನೆ ನೀಡಿದ್ದು 2029ರ ವೇಳೆಗೆ ಪೂರ್ಣಗೊಳಿಸಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಇದೇ ವೇಳೆ ಭರವಸೆ ನೀಡಿದರು. ಬೆಂಗಳೂರಿನ 100 ಕಿ.ಮೀ. ವ್ಯಾಪ್ತಿಯಲ್ಲಿ ಲೇವಲ್ ಕ್ರಾಸಿಂಗ್‌ಗಳ ತೆರವು ಮಾಡಿ ಬ್ರಿಡ್ಜ್ ನಿರ್ಮಿಸಲು ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಅಮೃತ್ ಭಾರತ್ ಯೋಜನೆಯಡಿ 25 ಕೋಟಿ ರೂ. ವೆಚ್ಚದಲ್ಲಿ ದೊಡ್ಡ ಬಳ್ಳಾಪುರದ ರೈಲ್ವೆ ನಿಲ್ದಾಣ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ ಎಂದು ವಿ.ಸೋಮಣ್ಣ ಮಾಹಿತಿ ನೀಡಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹10,135/Gram24ct ₹9,290/Gram22ct ಬೆಳ್ಳಿ: ₹113.00/Gram

# ಹರಿನಾಮ ಸ್ಮರಣೆ ಗಾಯನ

• ಉದಯವಾಹಿನಿ, ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಅಂಗವಾಗಿ ಆಗಸ್ಟ್ 5, ಮಂಗಳವಾರ ಸಂಜೆ 6-30ಕ್ಕೆ



ಶ್ರೀಮತಿ ವೈಷ್ಣವಿ ಕೊಪ್ಪ ಇವರಿಂದ ಹರಿನಾಮ ಸ್ಮರಣೆ ಗಾಯನ ಕಾರ್ಯಕ್ರಮ. ವಾದ್ಯ ಸಹಕಾರ : ಶ್ರೀ ಅಮಿತ್ ಶರ್ಮಾ (ಕೀ-ಬೋರ್ಡ್), ಶ್ರೀ ಮಧುಸೂದನ್ ಕೊಪ್ಪ (ತಬಲಾ). ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡ ರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

# 870 ಹಾಲಿನ ಮಾದರಿ ಸಂಗ್ರಹ

• ಉದಯವಾಹಿನಿ, ಬೆಂಗಳೂರು

ಹಾಲಿನಲ್ಲಿ ಕಲಬೆರಕೆ ಪತ್ತೆ ಸಂಬಂಧ ಆಹಾರ ಸುರಕ್ಷತೆ ಇಲಾಖೆಯ ಅಧಿಕಾರಿಗಳು ರಾಜ್ಯದಾದ್ಯಂತ 870 ಹಾಲಿನ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಪ್ರಯೋಗಾಲಯಗಳಿಗೆ ಕಳುಹಿಸಿದ್ದಾರೆ. ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ (ಕೆಎಂಎಫ್) ಸಹಯೋಗದಲ್ಲಿ ಇಲಾಖೆಯು ಆ.1 ಮತ್ತು 2ರಂದು ಹಾಲಿನ ಮಾದರಿಗಳ ಸಂಗ್ರಹಣೆಗೆ ವಿಶೇಷ ಆಂದೋಲನ ನಡೆಸಿದೆ. ಈ ವೇಳೆ ಕೆಎಂಎಫ್ ಹಾಗೂ ಖಾಸಗಿ ಹಾಲಿನ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಈ ಮಾದರಿಗಳ ಗುಣಮಟ್ಟ ಪರೀಕ್ಷೆಗೆ ಇಲಾಖೆ ಹಾಗೂ ಕೆಎಂಎಫ್ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ. ಸಗಟು ಹಾಲು ಸಂಗ್ರಹ ಕೇಂದ್ರ (ಬಿಎಂಸಿ), ಹಾಲಿನ ಡೇರಿ ಹಾಗೂ ವಿತರಕರಿಂದ ಮಾದರಿಗಳನ್ನು ಸಂಗ್ರಹಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಹಾಲಿನ ಮಾದರಿಗಳನ್ನು ಪಡೆಯಲಾಗಿದ್ದು, ಮೈಸೂರಿನಲ್ಲಿ ಗರಿಷ್ಠ ಮಾದರಿ (72) ಸಂಗ್ರಹಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

# ಬೆಂಗಳೂರಿನ ಪ್ರತಿಷ್ಠಿತ ಕಾಲೇಜು ವಿದ್ಯಾರ್ಥಿನಿ ಮೇಲೆ ರೇಪ್

• ಉದಯವಾಹಿನಿ, ಬೆಂಗಳೂರು

ಪ್ರತಿಷ್ಠಿತ ಕಾಲೇಜು ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಪಿಜಿ ಮಾಲೀಕನನ್ನ ಬಂಧಿಸಿರುವ ಘಟನೆ ಬೆಂಗಳೂರಿನ ಸೋಲದೇವನಹಳ್ಳಿಯಲ್ಲಿ ನಡೆದಿದೆ. ಪಿಜಿ ಮಾಲೀಕ ಅಶ್ರಫ್ ಬಂಧಿತ ರೇಪ್ ಆರೋಪಿ. ವಿದ್ಯಾರ್ಥಿನಿ ಪಿಜಿ ಸೇರಿ ಕೇವಲ 10 ದಿನಗಳು ಕಳೆದಿತ್ತು. ಮೊನ್ನೆ ಆಕೆಯನ್ನ ಕಾರಿನಲ್ಲಿ ನಿರ್ಜನ ಪ್ರದೇಶಕ್ಕೆ ಹೊತ್ತೊಯ್ದು ಅತ್ಯಾಚಾರ ಎಸಗಿದ್ದಾನೆ. ಘಟನೆ ಬಳಿಕ ಸಂತ್ರಸ್ತೆ ಸೋಲದೇವನಹಳ್ಳಿ ಠಾಣೆಗೆ ದೂರು ನೀಡಿದ್ದಾರೆ. ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಅಶ್ರಫ್‌ನನ್ನ ಬಂಧಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

# ಚುನಾವಣಾ ಅಕ್ರಮ ಆರೋಪ ಹಿನ್ನೆಲೆ ಕಾಂಗ್ರೆಸ್ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಚುನಾವಣಾ ಆಯೋಗದ ಮೇಲೆ ಮತಗಳ್ಳತನ ಆರೋಪ ಮಾಡಿರುವ ರಾಹುಲ್ ಗಾಂಧಿ, ಆ.5 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ರಾಹುಲ್ ಗಾಂಧಿ ಆರೋಪ ಪ್ರತಿಭಟನೆ ಈಗ ಬಿಜೆಪಿಯ ವಿರೋಧಕ್ಕೆ ಕಾರಣವಾಗಿದೆ. ಪ್ರತಿಭಟನೆಗಾಗಿ ಬೆಂಗಳೂರಿಗೆ ರಾಹುಲ್ ಗಾಂಧಿ ಆಗಮನ ಹಿನ್ನೆಲೆಯಲ್ಲಿ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಎಕ್ಸ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜೊತೆಗೆ ರಾಹುಲ್ ಗಾಂಧಿಗೆ ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಹಲವಾರು ಕಪಟ ನಾಟಕದ ಸೂತ್ರದಾರರಿದ್ದಾರೆ, ಅವರಿಂದ ಪ್ರೇರೇಪಿತರಾದ ನೀವು ಪಾತ್ರದಾರಿಯಾಗಿ ಕರ್ನಾಟಕಕ್ಕೆ ಬರುತ್ತಿದ್ದೀರಿ. ಇಲ್ಲಿಗೆ ಆಗಮಿಸುತ್ತಿರುವ ನಿಮಗೆ ಸ್ವಾಗತ ಕೋರುತ್ತೇನೆ. ದಯವಿಟ್ಟು ನನ್ನ ಈ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ, ನಂತರ ನೈತಿಕತೆ ಬೋಧಿಸುವ ಔದಾರ್ಯ ತೋರಿಸಿ. ನೀವು ಈ ಪ್ರಶ್ನೆಗಳಿಗೆ ಉತ್ತರ ನೀಡದೇ ಪ್ರತಿಭಟನೆ ನಡೆಸಿದರೆ, ನೀವು ಕಾಂಗ್ರೆಸ್ ಪಕ್ಷದ ನಾಯಕರಾಗಿ ಮತ್ತು ವಿರೋಧ ಪಕ್ಷದ ನಾಯಕರಾಗಿ ಮುಂದುವರೆಯುವ ಯೋಗ್ಯತೆ ನಿಮ್ಮಲ್ಲಿಲ್ಲ ಎಂಬ ಸಂದೇಶವೇ ಪ್ರಧಾನವಾಗುತ್ತದೆ ಎಂದು ಛಲವಾದಿ ಪೋಸ್ಟ್ ಹಾಕಿದ್ದಾರೆ.

# ಅಶ್ಲೀಲ ವಿಡಿಯೋದಲ್ಲಿ ಇದ್ದದ್ದು ಪ್ರಜ್ವಲ್ ಅಂತ ಪತ್ತೆ ಹಚ್ಚಿದ್ದೇ ಹೊಸ ತಂತ್ರಜ್ಞಾನ

• ಉದಯವಾಹಿನಿ, ಬೆಂಗಳೂರು

2024ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣರದ್ದು ಎನ್ನಲಾದ ವಿಡಿಯೋಗಳು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದವು. ಹಾದಿ ಬೀದಿಯಲ್ಲಿ ಸಿಕ್ಕ ಪೆನ್‌ಡ್ರೈವ್‌ಗಳಲ್ಲಿ ಪ್ರಜ್ವಲ್‌ರದ್ದು ಎನ್ನಲಾದ ಅಶ್ಲೀಲ ವಿಡಿಯೋಗಳು ಭಾರೀ ಸದ್ದು ಮಾಡಿದ್ದು.

ಆದ್ರೆ ಯಾವುದೇ ಒಂದು ವಿಡಿಯೋದಲ್ಲೂ ಪ್ರಜ್ವಲ್ ರೇವಣ್ಣನ ಮುಖ ಕಾಣಿಸಿರಿಲ್ಲ. ಆದರೀಗ ಅದೇ ವಿಡಿಯೋ ಅಶ್ಲೀಲ ಫೋಟೋಗಳನ್ನಾಧರಿಸಿ ಕೋರ್ಟ್ ಜೀವಾವಧಿ ಶಿಕ್ಷೆಗೆ ವಿಧಿಸಿರೋದು ಕುತೂಹಲ. ಮನೆಗೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ್ದ ಪ್ರಕರಣ ಸಂಬಂಧ ಪ್ರಜ್ವಲ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ಭಾರೀ ದಂಡವನ್ನೂ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ಪ್ರಕಟಿಸಿದೆ. ಆದ್ರೆ ವಿಡಿಯೋದಲ್ಲಿ ಎಲ್ಲಿಯೂ ಪ್ರಜ್ವಲ್ ಅವರ ಮುಖವೇ ಕಾಣಿಸಿರಿಲ್ಲ ಹೀಗಿದ್ರೂ, ಪ್ರಕರಣ ಭೇದಿಸಿದ್ದು ಹೇಗೆ ಅನ್ನೋ ಕೌತುಕಕ್ಕೆ ಕೊನೆಗೂ ಉತ್ತರ ಸಿಕ್ಕಿದೆ. ವಿಡಿಯೋ ಬೆನ್ನತ್ತಿ ಹೊರಟಾಗ ಸಿಕ್ಕ ಮಾಹಿತಿ ತುಂಬಾ ರೋಚಕವಾಗಿದೆ.

# ಬೆಂಗಳೂರು: ಕೊಲೆ ಮಾಡಿ ಮೃತದೇಹ ಸುಟ್ಟಿದ್ದವರ ಸೆರೆ

• ಉದಯವಾಹಿನಿ, ಬೆಂಗಳೂರು

ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿಯನ್ನು ಕೊಲೆ ಮಾಡಿ ಸಂಬಂಧಿಕನ ನೆರವು ಪಡೆದು ಮೃತದೇಹವನ್ನು ಕೋಲಾರದ ಸ್ಮಶಾನದಲ್ಲಿ ಸುಟ್ಟುಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಕಾಡುಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಕೃತ್ಯ ಎಸಗಿದ್ದ ಆರೋಪದ ಅಡಿ ದಿಣ್ಣೂರಿನ ಮುನಿರತ್ನಾ (40), ಈಕೆಯ ಭಾವಿ ಅಳಿಯ ರಾಮಮೂರ್ತಿ(28) ಎಂಬುವವನ್ನು ಪೊಲೀಸರು ಬಂಧಿಸಿದ್ದಾರೆ. ಕೃತ್ಯದಲ್ಲಿ 17 ವರ್ಷದ ಬಾಲಕಿಯೂ ಶಾಮೀಲಾಗಿದ್ದು ಆಕೆಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಮೂವರು ಆರೋಪಿಗಳು ಸೇರಿಕೊಂಡು ಜುಲೈ 26ರಂದು ದಿಣ್ಣೂರಿನ ಮನೆಯಲ್ಲಿ ಬಾಬು (46) ಅವರನ್ನು ಕೊಲೆ ಮಾಡಿದ್ದರು. ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಮರುದಿನ ಆ್ಯಂಬುಲೆನ್ಸ್‌ನಲ್ಲಿ ಮೃತದೇಹವನ್ನು ಕೋಲಾರಕ್ಕೆ ಸಾಗಿಸಿ ಸ್ಮಶಾನದಲ್ಲಿ ಸುಟ್ಟು ಹಾಕಿದ್ದರು. ಕೇಳಿದವರಿಗೆ ಪತಿ ಅನಾರೋಗ್ಯದಿಂದ ಬಳಲುತ್ತಿದ್ದರು. ಕಾಯಿಲೆ ಗುಣವಾಗದೇ ಮೃತಪಟ್ಟರು ಎಂಬುದಾಗಿ ಮುನಿರತ್ನ ಹೇಳಿದ್ದಳು ಎಂದು ಪೊಲೀಸರು ಹೇಳಿದರು. ಕೃತ್ಯದಲ್ಲಿ ಆ್ಯಂಬುಲೆನ್ಸ್ ಚಾಲಕ ಸೇರಿ ಇನ್ನೂ ಹಲವರು ಶಾಮೀಲಾಗಿರುವ ಶಂಕೆಯಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದೇವನಹಳ್ಳಿಯ ಬಾಬು, ಮಾಲೂರಿನ ಮುನಿರತ್ನಾ ದಂಪತಿಗೆ 17 ವರ್ಷ ಹಾಗೂ 15 ವರ್ಷದ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕುಟುಂಬ ದಿಣ್ಣೂರಿನ ಬಾಡಿಗೆ ಮನೆಯಲ್ಲಿ ನೆಲಸಿತ್ತು. ಬಾಬು ಅವರಿಗೆ ಮದ್ಯ ಸೇವನೆ ಅಭ್ಯಾಸವಿತ್ತು. ಈ ವಿಚಾರಕ್ಕೆ ಮನೆಯಲ್ಲಿ ನಿತ್ಯವೂ ಗಲಾಟೆ ನಡೆಯುತ್ತಿತ್ತು. ಪತಿಯ ಕೊಲೆಗೆ ಮುನಿರತ್ನಾ ಸಂಚು ರೂಪಿಸಿದ್ದಳು ಎಂದು ಪೊಲೀಸರು ಹೇಳಿದರು.

# ನಮ್ಮ ಮೆಟ್ರೋದ ಹಳದಿ ಮಾರ್ಗಕ್ಕೆ ಆ.10 ರಂದು ಪ್ರಧಾನಿ ಮೋದಿ ಚಾಲನೆ

## 20,000 ಕೋಟಿ ರೂ. ಮೌಲ್ಯದ ಮೆಟ್ರೋ ಮೂಲ ಸೌಕರ್ಯವನ್ನು ನೀಡಿದ್ದಕ್ಕಾಗಿ ಮೋದಿಯವರಿಗೆ ನಾವು ಕೃತಜ್ಞರಾಗಿರುತ್ತೇವೆ ಎಂದು ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಆಗಸ್ಟ್ 10 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬಹುನಿರೀಕ್ಷಿತ 19.15 ಕಿ.ಮೀ ಉದ್ದದ ನಮ್ಮ ಮೆಟ್ರೋದ ಹಳದಿ ಮಾರ್ಗವನ್ನು ಉದ್ಘಾಟಿಸಲಿದ್ದಾರೆ. ಇದು ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗೆ ಸಂಪರ್ಕ ಕಲ್ಪಿಸುತ್ತದೆ.

ಜೊತೆಗೆ 44.65 ಕಿ.ಮೀ ಉದ್ದದ ಬೆಂಗಳೂರು ಮೆಟ್ರೋದ 3ನೇ ಹಂತದ ವಿಸ್ತರಣೆಗೆ ಅಡಿಗಲ್ಲು ಹಾಕಲಿದ್ದಾರೆ. 5,056.99 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ ಹಳದಿ ಮಾರ್ಗವು 16 ನಿಲ್ದಾಣಗಳನ್ನು ಹೊಂದಿದೆ. ಇದು ಟ್ರಾಫಿಕ್ ಸಮಸ್ಯೆಯನ್ನು ಕಡಿಮೆ ಮಾಡುತ್ತದೆ. ಅದರಲ್ಲೂ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿನ ದಟ್ಟಣೆಯನ್ನು ತಗ್ಗಿಸುತ್ತದೆ. ಈ ಮಾರ್ಗವು ಪ್ರತಿದಿನ ಸುಮಾರು ಎಂಟು ಲಕ್ಷ ಪ್ರಯಾಣಿಕರಿಗೆ ಅನುಕೂಲವಾಗುವ ನಿರೀಕ್ಷೆಯಿದೆ. ಇದು ಬೆಂಗಳೂರಿನ ದಕ್ಷಿಣ ಭಾಗದ ಪ್ರಮುಖ ವಸತಿ ಮತ್ತು ಕೈಗಾರಿಕಾ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಇದರ ಜೊತೆಗೆ, ಪ್ರಧಾನ ಮಂತ್ರಿಯವರು 15,611 ಕೋಟಿ ರೂ. ವೆಚ್ಚದ 3 ನೇ ಹಂತದ ವಿಸ್ತರಣೆಯನ್ನು ಪ್ರಾರಂಭಿಸಲಿದ್ದಾರೆ. ಇದನ್ನು ಮೋದಿ 3.0 ಸರ್ಕಾರದ ಮೊದಲ 100 ದಿನಗಳಲ್ಲಿ



ಅನುಮೋದಿಸಲಾಗಿದೆ. ಬೆಂಗಳೂರು ಮೆಟ್ರೋದ 3ನೇ ಹಂತವು ನಗರದ ಮೆಟ್ರೋ ಜಾಲವನ್ನು 44.65 ಕಿ.ಮೀ ಗಳಷ್ಟು ವಿಸ್ತರಿಸುವ ಯೋಜನೆಯಾಗಿದೆ. ಈ ಯೋಜನೆಯು ಎರಡು ಮಾರ್ಗಗಳು ಮತ್ತು 31 ನಿಲ್ದಾಣಗಳನ್ನು ಒಳಗೊಂಡಿದೆ. ಇದು 2029ರ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. 3ನೇ ಹಂತವು ಮಾಗಡಿ ರಸ್ತೆ, ಹೊರ ವರ್ತುಲ ರಸ್ತೆಯ ಪಶ್ಚಿಮ ಭಾಗದಲ್ಲಿರುವ ಪ್ರದೇಶಗಳಿಗೆ ಸೇವೆಯನ್ನು ನೀಡುತ್ತದೆ. ಈ ಎರಡು ಮಾರ್ಗಗಳು ಜೆ.ಪಿ. ನಗರ 4ನೇ ಹಂತದಿಂದ ಕೆಂಪಾಪುರ (ಹೆಬ್ಬಾಳ) ಮತ್ತು ಹೊಸಹಳ್ಳಿಯಿಂದ ಕಡಬಗೆರೆಗೆ ಸಂಪರ್ಕ ಕಲ್ಪಿಸುತ್ತವೆ. ಇದು ಗೊರಗುಂಟೆಪಾಳ್ಯ, ಮಾಗಡಿ ರಸ್ತೆ ಮತ್ತು ಮೈಸೂರು ರಸ್ತೆ ಮೂಲಕವೂ ಹಾದುಹೋಗುತ್ತದೆ. ಯೋಜನೆಯಲ್ಲಿ ಡಬಲ್ ಡೆಕ್ಕರ್ ಮೇಲ್ಸೇತುವೆಯನ್ನು ನಿರ್ಮಿಸಲಾಗುವುದು. ಮೆಟ್ರೋ ಹಳಿಗಳನ್ನು ರಸ್ತೆ ಮತ್ತು ಮೇಲ್ಸೇತುವೆಗಳ ಮೇಲೆ ನಿರ್ಮಿಸಿ ಜಾಗವನ್ನು ಉಳಿಸಲಾಗುತ್ತದೆ.

> **ಕೇಂದ್ರ ಗೃಹ, ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಅವರು, ಆಗಸ್ಟ್ 10 ರಂದು ಹಳದಿ ಮಾರ್ಗವನ್ನು ಉದ್ಘಾಟಿಸಲು ಮತ್ತು 3ನೇ ಹಂತಕ್ಕೆ ಅಡಿಗಲ್ಲು ಹಾಕಲು ಭಾರತದ ಪ್ರಧಾನ ಮಂತ್ರಿಗಳು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಲು ನನಗೆ ಸಂತೋಷವಾಗಿದೆ ಎಂದು ಹೇಳಿದರು.**

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರು ಈ ಸಂದರ್ಭವನ್ನು ಬೆಂಗಳೂರು ದಕ್ಷಿಣಕ್ಕೆ ಒಂದು ಐತಿಹಾಸಿಕ ಕ್ಷಣ ಎಂದು ಕರೆದಿದ್ದಾರೆ.

ಈ ಪ್ರದೇಶಕ್ಕೆ ಸುಮಾರು 20,000 ಕೋಟಿ ರೂ. ಮೌಲ್ಯದ ಮೆಟ್ರೋ ಮೂಲ ಸೌಕರ್ಯವನ್ನು ನೀಡಿದ್ದಕ್ಕಾಗಿ ಪ್ರಧಾನಿ ಮೋದಿಯವರಿಗೆ ನಾವು ಕೃತಜ್ಞರಾಗಿರುತ್ತೇವೆ ಎಂದು ಅವರು ಹೇಳಿದರು. ಹಳದಿ ಮಾರ್ಗ ಮತ್ತು 3ನೇ ಹಂತದ ಯೋಜನೆಗಳು ನಗರದ ದಕ್ಷಿಣ ಭಾಗದ ಸುಮಾರು 25 ಲಕ್ಷ ಪ್ರಯಾಣಿಕರಿಗೆ ಅನುಕೂಲವಾಗುವ ನಿರೀಕ್ಷೆಯಿದೆ. ಇದು ಬೆಂಗಳೂರಿನಲ್ಲಿ ಸಂಚಾರವನ್ನು ಸುಧಾರಿಸುತ್ತದೆ. ಆಗಸ್ಟ್ 1 ರಂದು, ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತರು ಬಿ.ಎಂ.ಆರ್.ಸಿ.ಎಲ್‌ನ ಹಳದಿ ಮಾರ್ಗಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಿದರು. ಇದರಿಂದ ವಾಣಿಜ್ಯ ಕಾರ್ಯಾಚರಣೆಗೆ ಅನುಮತಿ ಸಿಕ್ಕಿದೆ. ಹಳದಿ ಮಾರ್ಗದ ಕಾಮಗಾರಿ 2017ರಲ್ಲಿ ಪ್ರಾರಂಭವಾಗಿತ್ತು. ಬಿ.ಎಂ.ಆರ್.ಸಿ.ಎಲ್ ಪ್ರಸ್ತುತ ಹೆಬ್ಬಗೋಡಿ ಡಿಪೋದಲ್ಲಿ ಮೂರು ರೈಲುಗಳನ್ನು ಹೊಂದಿದೆ. ನಾಲ್ಕನೇ ರೈಲು ಬೆಂಗಳೂರಿಗೆ ಬರಲಿದೆ.

# ನವೋದ್ಯಮಗಳ ವಿರುದ್ಧ ಕ್ರಮಕ್ಕೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಕೆಲ ನವೋದ್ಯಮಗಳು ಔಷಧಗಳನ್ನು ಮರು ಪ್ಯಾಕಿಂಗ್ ಮಾಡಿ, ಮಾರಾಟ ಮಾಡುತ್ತಿವೆ. ರೋಗಿಗಳ ಸುರಕ್ಷತೆ ದೃಷ್ಟಿಯಿಂದ ಅಂತಹ ನವೋದ್ಯಮಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘವು (ಬಿಡಿಸಿಡಿಎ) ಭಾರತೀಯ ಔಷಧ ಮಹಾನಿಯಂತ್ರಕರನ್ನು (ಡಿಸಿಜಿಐ) ಆಗ್ರಹಿಸಿದೆ.ಈ ಬಗ್ಗೆ ಸಂಘವು ಪತ್ರ ಬರೆದಿದೆ.

ಆನ್‌ಲೈನ್ ಔಷಧ ಮಾರಾಟ ವೇದಿಕೆಗಳು ಹಾಗೂ ಕೆಲ ನವೋದ್ಯಮಗಳು ಔಷಧ ಮತ್ತು ಕಾಂತಿವರ್ಧಕ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಔಷಧ ಮಾರಾಟ ಮಾಡುತ್ತಿವೆ. ಸ್ಟ್ರಿಪ್‌ಗಳಲ್ಲಿರುವ ಮಾತ್ರೆಗಳನ್ನು ಮರು ಪ್ಯಾಕಿಂಗ್ ಮಾಡಿ, ಮಾರಾಟ ಮಾಡುವುದರಿಂದ ಔಷಧದ ವಿವರ ಲಭ್ಯವಾಗುವುದಿಲ್ಲ. ಸಾರ್ವಜನಿಕರ ಆರೋಗ್ಯವನ್ನು ಅಪಾಯಕ್ಕೆ ದೂಡುವ ನಡೆಯಾಗಿದೆ.

ಇದು ಕಾನೂನು ಬಾಹಿರವಾಗಿದ್ದು, ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಬಿಡಿಸಿಡಿಎ ಅಧ್ಯಕ್ಷ ಬಿ. ತಿರುನಾವುಕ್ಕರಸು ತಿಳಿಸಿದ್ದಾರೆ.



> **'ಈ ರೀತಿ ಕ್ರಮದಿಂದ ಬ್ಯಾಚ್ ಸಂಖ್ಯೆ, ಔಷಧದ ಅವಧಿ ಮುಕ್ತಾಯದ ಮಾಹಿತಿ, ಗರಿಷ್ಠ ಮಾರಾಟ ದರ ಸೇರಿ ವಿವಿಧ ವಿವರಗಳು ರೋಗಿಗೆ ಲಭ್ಯವಾಗುವುದಿಲ್ಲ. ಇದರಿಂದ ಔಷಧ ವ್ಯವಸ್ಥೆಯ ಮೇಲೆ ಕೆಟ್ಟ ಅಭಿಪ್ರಾಯ ಮೂಡಿ, ಜನರು ವಿಶ್ವಾಸಾರ್ಹತೆ ಕಳೆದುಕೊಳ್ಳುವ ಸಾಧ್ಯತೆ ಇದೆ. ವೈದ್ಯರ ಚೀಟಿ ಇಲ್ಲದೆಯೂ ಆಲ್‌ನೈನ್ ವೇದಿಕೆಗಳಲ್ಲಿ ಔಷಧಗಳನ್ನು ಮಾರಾಟ ಮಾಡಲಾಗುತ್ತಿದೆ. ಶೇ 50 ರಷ್ಟು ರಿಯಾಯಿತಿ ಎಂಬ ಜಾಹೀರಾತುಗಳನ್ನು ನೀಡಿ, ಜನರ ದಿಕ್ಕು ತಪ್ಪಿಸಲಾಗುತ್ತಿದೆ' ಎಂದು ಹೇಳಿದ್ದಾರೆ.**

# ಪೊಲೀಸ್ ಅಧಿಕಾರಿ ವಿರುದ್ಧ ಬಿಬಿಎಂಪಿ ಕೇಸು ದಾಖಲು

• ಉದಯವಾಹಿನಿ, ಬೆಂಗಳೂರು

ಆಗಸ್ಟ್ 5 ರಂದು ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ ಕಾಂಗ್ರೆಸ್ ಪ್ರತಿಭಟನೆಯ ಉತ್ತಮ ಕಣ್ಗಾವಲಿಗೆಂದು ಬೆಂಗಳೂರಿನ ಫ್ರೀಡಂ ಪಾರ್ಕ್ ಆವರಣದಿಂದ ಮರವನ್ನು ಕಡಿದು ಹಾಕಿದ್ದಕ್ಕೆ ಪೊಲೀಸ್ ಕಾನ್‌ಸ್ಟೆಬಲ್ ವಿರುದ್ಧ ಬಿಬಿಎಂಪಿ ದೂರು ದಾಖಲಿಸಿದೆ.

ಬಿಬಿಎಂಪಿ ಅರಣ್ಯ ವಿಭಾಗದ ಪ್ರಕಾರ, ಅರಣ್ಯ ಸಂಬಂಧಿತ ಅಪರಾಧಕ್ಕಾಗಿ ಎಫ್‌ಐಆರ್ ದಾಖಲಿಸಿರುವ ಅಧಿಕಾರಿಯನ್ನು ಉಪ್ಪಾರಪೇಟೆ ಪೊಲೀಸ್ ಠಾಣೆಗೆ ನಿಯೋಜಿಸಲಾದ ಮುಖ್ಯ ಕಾನ್‌ಸ್ಟೆಬಲ್ ಮಹಾದೇವ ಸ್ವಾಮಿ ಎಂದು ಗುರುತಿಸಲಾಗಿದೆ. ಪ್ರತಿಭಟನೆ ಸಮಯದಲ್ಲಿ ಭದ್ರತೆ, ಇತರ ವ್ಯವಸ್ಥೆಗಳಿಗೆ ಪೊಲೀಸ್ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ ಪ್ರದೇಶವನ್ನು ಪ್ರತಿಭಟನೆಗೆ ತೆರವು ಮಾಡಿ ಕೊಡಲು ಇಂಡಿಯನ್ ಬರ್ಡ್ ಚೆರ್ರಿ ಮರವನ್ನು



☛ ಉದಯವಾಹಿನಿ ಚಿತ್ರ

ಕತ್ತರಿಸಲಾಯಿತು, ಅಧಿಕಾರಿಗಳು ಕಾರ್ಮಿಕರಿಗೆ ಮರಗಳನ್ನು ಕತ್ತರಿಸಲು ನಿರ್ದೇಶಿಸುತ್ತಿರುವುದು ಕಂಡುಬಂದಿದೆ. ನಿಯಮಗಳ ಪ್ರಕಾರ, ಮರ ಕಡಿಯುವ ಮೊದಲು ಅಧಿಕಾರಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿ ಪೂರ್ವಾನುಮತಿ ಪಡೆಯಬೇಕಿತ್ತು. ನಮ್ಮ ರೇಂಜ್ ಫಾರೆಸ್ಟ್ ಆಫೀಸರ್ ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿ, ವರದಿ ಸಲ್ಲಿಸಿದ್ದರು, ಠಾಣಾಧಿಕಾರಿಗೂ ಘಟನೆಯ ಬಗ್ಗೆ ತಿಳಿಸಲಾಗಿತ್ತು

ಕಾನ್‌ಸ್ಟೆಬಲ್‌ಗೆ ಎಚ್ಚರಿಕೆ ನೀಡಿ, ಈ ಅರಣ್ಯ ಅಧಿಕಾರಿಗಳ ಸಲಹೆಯನ್ನು ಅನುಸರಿಸುವಂತೆ ಕೇಳಲಾಯಿತು.

ಆಗಸ್ಟ್ 5 ರಂದು ಭಾರಿ ಜನಸಮೂಹ ಸೇರುವುದರಿಂದ ವಿವಿಐಪಿಗಳು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡುವುದರಿಂದ, ಪ್ರತಿಭಟನಾ ಸ್ಥಳದ ಗೋಚರತೆ ಮತ್ತು ಕ್ಯಾಮೆರಾ ಚಿತ್ರೀಕರಣಕ್ಕಾಗಿ ಮರವನ್ನು ತೆಗೆದುಹಾಕಲು ಅಧಿಕಾರಿ ನಿರ್ಧರಿಸಿದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೊಲೀಸ್ ತಂಡಕ್ಕೆ ವಿಸ್ತೃತ ಸಿದ್ಧತೆಯನ್ನು ಖಚಿತ ಪಡಿಸಿಕೊಳ್ಳುವಂತೆಯೂ ಕೇಳಲಾಗಿದೆ.

> **ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರ ಸೆಕ್ಷನ್ 8ರ ಅಡಿಯಲ್ಲಿ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿದೆ. ಇದು ಇಲಾಖೆಯು ದಂಡ ವಿಧಿಸಬಹುದಾದ ಅಪರಾಧವಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.**

# ಖಾಸಗಿ ಬಸ್ ಮಾಲೀಕರೊಂದಿಗೆ ಸಭೆ, ಸಾರಿಗೆ ನೌಕರರಿಗೆ ಟಕ್ಕರ್ ಕೊಡಲು ರಾಜ್ಯ ಸರ್ಕಾರ ಮುಂದು!

• ಉದಯವಾಹಿನಿ, ಬೆಂಗಳೂರು

ಆಗಸ್ಟ್ 5 ರಂದು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲು ರಾಜ್ಯ ಸಾರಿಗೆ ನೌಕರರು ನಿರ್ಧರಿಸಿದ್ದು, ಇದರ ನಡುವಲ್ಲೇ ಖಾಸಗಿ ಬಸ್ ಮಾಲೀಕರೊಂದಿಗೆ ಸಭೆ ನಡೆಸಿರುವ ರಾಜ್ಯ ಸರ್ಕಾರ ನೌಕರರಿಗೆ ಟಕ್ಕರ್ ಕೊಡಲು ಮುಂದಾಗಿದೆ. ವೇತನ ಹೆಚ್ಚಳ, ವೇತನ ಹೆಚ್ಚಳ ಹಿಂಬಾಕಿ ಪಾವತಿಗೆ ಆಗ್ರಹಿಸಿ ಕೆಎಸ್ಸಾರ್ಟಿಸಿ ನೌಕರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಆ.5ರಿಂದ ಕರ್ತವ್ಯ ಬಹಿಷ್ಕರಿಸಿ ಅನಿರ್ಧಿಷ್ಟಾವಧಿ ಮುಷ್ಕರಮಾಡುವುದಾಗಿ ಘೋಷಿಸಲಾಗಿದೆ.

ನೌಕರರ ಮುಷ್ಕರ ತಡೆಯಲು ಸರ್ಕಾರ ಈಗಾಗಲೇ ಹಲವು ಕಸರತ್ತು ಆರಂಭಿಸಿದೆ. ಅದರ ಭಾಗವಾಗಿ ಕಾರ್ಮಿಕ ಇಲಾಖೆ



ಆಯುಕ್ತರ ಅಧ್ಯಕ್ಷತೆಯಲ್ಲಿ ಸಾರಿಗೆ ನೌಕರ ಸಂಘಟನೆಗಳ ಪ್ರಮುಖರು, ಸಾರಿಗೆ ನಿಗಮಗಳ ಅಧಿಕಾರಿಗಳ ನಡುವೆ ರಾಜೀ ಸಂಧಾನ ಸಭೆ ನಡೆಸಲಾಗಿದೆ.

ಆದರೆ, ಈ ಸಭೆ ವಿಫಲವಾಗಿದೆ. ಹೀಗಾಗಿ ಆ.4ರಂದು ನಡೆಯಲಿರುವ ಮುಖ್ಯಮಂತ್ರಿ ಅಧ್ಯಕ್ಷತೆಯ ಸಭೆಯಲ್ಲಿ ಮುಷ್ಕರದ ಭವಿಷ್ಯ ನಿರ್ಧಾರವಾಗಲಿದೆ. ಇದರ ನಡುವೆಯೇ ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾದರೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವ ಉದ್ದೇಶದಿಂದ ಖಾಸಗಿ ಬಸ್, ಟ್ಯಾಕ್ಸಿ ಸೇರಿ ಇನ್ನಿತರ ವಾಹನ ಮಾಲೀಕರ ಜತೆಗೆ ಸಾರಿಗೆ ಇಲಾಖೆ ಆಯುಕ್ತರು ಸಭೆ ನಡೆಸಿದ್ದು, ಮುಷ್ಕರದ ವೇಳೆ ಸಾರಿಗೆ ಸೇವೆ ನೀಡಲು ಬೆಂಬಲ ಕೋರಿದರು. ಅದಕ್ಕೆ ಸಮ್ಮತಿಸಿರುವ ಖಾಸಗಿ ವಾಹನ ಮಾಲೀಕರು, ಬೆಂಬಲ ನೀಡುವುದಕ್ಕೆ ಬದಲಾಗಿ ಬೇಡಿಕೆಗಳ ಈಡೇರಿಕೆಗೂ ಸರ್ಕಾರ ಮುಂದಾಗಬೇಕು ಎಂದು ಷರತ್ತು ವಿಧಿಸಿದ್ದಾರೆ.

ಮುಷ್ಕರದ ಸಮಯದಲ್ಲಿ ಕಾರ್ಯನಿರ್ವಹಿಸುವ ಬಸ್‌ಗಳಿಗೆ 15 ದಿನಗಳ ರಸ್ತೆ ತೆರಿಗೆ ವಿನಾಯಿತಿ, 60:40 ಪರ್ಮಿಟ್ ನೀತಿಯ ಅನುಷ್ಠಾನ, ಖಾಸಗಿ ನಿರ್ವಾಹಕರಿಗೆ ಶೇ.40ರಷ್ಟು ಪರವಾನಗಿಗಳನ್ನು ಕಾಯ್ದಿರಿಸುವುದು, ಡಿಜಿಟಲ್ ಕಣ್ಗಾವಲು ಲೆಕ್ಕಪರಿಶೋಧನಾ ವ್ಯವಸ್ಥೆಯಡಿ ವಿಧಿಸಲಾದ ದಂಡದ ಮೇಲೆ ಶೇ.50ರಷ್ಟು ವಿನಾಯಿತಿ,ಅಧಿಸೂಚಿತ ಸಮಯ ಮತ್ತು ಮಾರ್ಗವನ್ನು ಉಲ್ಲಂಘಿಸುವ ಸರ್ಕಾರಿ ಬಸ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಷರತ್ತುಗಳನ್ನು ವಿಧಿಸಿದೆ ಎಂದು ತಿಳಿದುಬಂದಿದೆ. ಚರ್ಚೆಗಳು ನಡೆಯುತ್ತಿವೆ. ಅಂತಿಮವಾಗಿ ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಎದುರಾಗದಂತೆ ಮಾಡುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

# ಗೌರಿ-ಗಣೇಶೋತ್ಸವ ಆಚರಣೆಗೆ ಏಕಗವಾಕ್ಷಿ ಪದ್ಧತಿಯಲ್ಲಿ ಟಿಕೆಟ್ ವಿತರಣೆ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಗೌರಿ-ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪಾಲಿಕೆಯ 75 ಉಪ ವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಪದ್ಧತಿಯಲ್ಲಿ ಒಂದೇ ಸೂರಿನಡಿ ಅನುಮತಿ ಪತ್ರವನ್ನು ಪಡೆಯಲು ವ್ಯವಸ್ಥೆ ಮಾಡಲಾಗುವುದು ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಗೌರಿ ಗಣೇಶೋತ್ಸವದ ವೇಳೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಬಿಬಿಎಂಪಿ ಮತ್ತು ಬೆಂಗಳೂರು ನಗರ ಪೊಲೀಸ್ ಇಲಾಖೆ ಜಂಟಿ ಸಹಯೋಗದಲ್ಲಿ ಪುರಭವನದಲ್ಲಿ ನಡೆದ 'ಶಾಂತಿ ಸೌಹಾರ್ದತೆ' ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕರಿಗೆ ಅನುವಾಗುವಂತೆ ಪಾಲಿಕೆಯ 75 ಉಪ ವಿಭಾಗ ಕಚೇರಿಗಳಲ್ಲಿ ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ ಏಕಗವಾಕ್ಷಿ



ಕೇಂದ್ರಗಳನ್ನು ತೆರೆಯಲಾಗುವುದು.

75 ಏಕಗವಾಕ್ಷಿ ಕೇಂದ್ರಗಳ ವಿಳಾಸ ಹಾಗೂ ಏಕಗವಾಕ್ಷಿ ಕೇಂದ್ರಗಳ ನೋಡಲ್ ಅಧಿಕಾರಿಗಳ ವಿವರವಾದ ಮಾಹಿತಿಯನ್ನು ಶೀಘ್ರವೇ ವೆಬ್‌ಸೈಟ್ ಮೂಲಕ ಬಿಡುಗಡೆ ಮಾಡಲಾಗುವುದು.

ಅದರ ಅನುಸಾರ ಗಣೇಶ ಮೂರ್ತಿಗಳನ್ನಿಡುವವರು ಏಕಗವಾಕ್ಷಿ ಸ್ಥಳಕ್ಕೆ ಭೇಟಿ ನೀಡಿ ಒಂದೇ ಸ್ಥಳದಲ್ಲಿ ಅನುಮತಿ ಪಡೆಯಬಹುದು, ಎಂದರು.

### ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ

**'ಗಣೇಶ ಮೆರವಣಿಗೆ ಸಾಗುವ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು ಈಗಾಗಲೇ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಕೆಲ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಆ ರಸ್ತೆಗಳಲ್ಲಿ ಸಮಸ್ಯೆ ಇದ್ದರೆ ವಿಶೇಷವಾಗಿ ತಾತ್ಕಾಲಿಕ ಕ್ರಮ ಕೈಗೊಳ್ಳಲಾಗುವುದು ಎಂದು ಮಹೇಶ್ವರ್ ರಾವ್ ತಿಳಿಸಿದರು.**

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪ್ರತಿ ವರ್ಷದಂತೆ ಗಣೇಶ ವಿಸರ್ಜನೆಗೆ ಪ್ರಮುಖ ಕೆರೆಗಳ ಕಲ್ಯಾಣಿಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಿಕೊಂಡು ಸರಿಯಾಗಿ ವಿಸರ್ಜನೆ ಮಾಡಲು ಅವಕಾಶ ಮಾಡಿ ಕೊಡಲಾಗುವುದು.

ಪ್ರಮುಖ ಸ್ಥಳ/ಜಂಕ್ಷನ್ ಮತ್ತು ಅವಶ್ಯಕತೆ ಇರುವ ಕಡೆ ವಾರ್ಡ್‌ವಾರು ತಾತ್ಕಾಲಿಕವಾಗಿ ಸಂಚಾರಿ ವಿಸರ್ಜನಾ ಘಟಕ ಮೊಬೈಲ್ ಟ್ಯಾಂಕ್‌ಗಳನ್ನು ಪ್ರತಿ ವರ್ಷದಂತೆ ಈ ಬಾರಿಯೂ ವ್ಯವಸ್ಥೆ ಮಾಡಲಾಗುವುದು ಎಂದರು.

ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಮಾತನಾಡಿ, ಹಬ್ಬಗಳನ್ನು ಆಚರಿಸುವ ವೇಳೆ ಬಿಬಿಎಂಪಿ, ಪೊಲೀಸ್ ಇಲಾಖೆಯಿಂದ ಬರುವ ಸಲಹೆ, ಸೂಚನೆಗಳನ್ನು ಎಲ್ಲರೂ ತಪ್ಪದೆ ಪಾಲಿಸಬೇಕು. ಮೆರವಣಿಗೆಯ ಮಾರ್ಗಕ್ಕೆ ಎಲ್ಲರೂ ಸಹಕಾರ ನೀಡಬೇಕು. ಎಲ್ಲಿಯೂ ಸಂಚಾರ ದಟ್ಟಣೆಯಾಗದಂತೆ ಸಂಚಾರಿ ಪೊಲೀಸ್ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಲಿದ್ದಾರೆ, ಎಂದರು.

# ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ನಾಡಪ್ರಭು ಕೆಂಪೇಗೌಡ ಬಡಾವಣೆ ವಿಸ್ತರಿಸಲು ಮುಂದಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ಅಂದಾಜು 9 ಸಾವಿರ ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿದೆ. ಬಡಾವಣೆಯ ವಿಸ್ತರಣೆಗಾಗಿ ಗುರುತಿಸಿರುವ ಜಮೀನು ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಯ ನಡುವೆ ಹಾಗೂ ನೈಸ್ ರಸ್ತೆಯ ಹೊರಗಿನ 17 ಗ್ರಾಮಗಳ ವ್ಯಾಪ್ತಿಯಲ್ಲಿದೆ. ಈ ಪೈಕಿ ಮುದ್ದಿನಪಾಳ್ಯ ಗ್ರಾಮವು ಮಾಗಡಿ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದೆ ಕೆಂಗೇರಿ ಹೋಬಳಿಯ ಮಾರಗೊಂಡನಹಳ್ಳಿ, ಮಾಲಿಗೊಂಡನಹಳ್ಳಿ, ರಾಮೋಹಳ್ಳಿ, ತಾವರೆಕೆರೆ ಹೋಬಳಿಯ ಚಿಕ್ಕಲ್ಲೂರು-ರಾಂಪುರ, ಚಿಕ್ಕಲ್ಲೂರ-ವೆಂಕಟಾಪುರ, ಚಿಕ್ಕಲ್ಲೂರ, ಕೊಲ್ಲೂರು-ನಂಜುಂಡಾಪುರ, ಕೊಲ್ಲೂರು ಗುರುನಾಯಕಪುರ, ಕೊಲ್ಲೂರು, ಕೇತೋಹಳ್ಳಿ, ಕೇತೋಹಳ್ಳಿ-ರಾಮಪುರ, ಕೇತೋಹಳ್ಳಿ ನರಸೀಪುರ, ಶೇಷಗಿರಿಪುರ, ಕಣಮಿಣಿಕೆ, ಕೊಡಿಗೆಹಳ್ಳಿ, ಶೀಗೆಹಳ್ಳಿ ಮತ್ತು ಮುದ್ದಿನಪಾಳ್ಯ ಗ್ರಾಮಗಳಲ್ಲಿ 5,755 ಎಕರೆ 32 ಗುಂಟೆ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಹೈಕೋರ್ಟ್ ಆದೇಶದಂತೆ, ಕೆಂಪೇಗೌಡ ಬಡಾವಣೆ ವಿಸ್ತರಣೆ ಸಂಬಂಧ ಅಧಿಸೂಚನೆ ಹೊರಡಿಸಿರುವ ಬಿಡಿಎ, ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಐವರು ಭೂಮಾಪಕರು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಕಾರ್ಯ ವಿಂಗಡಣೆ ಮಾಡಿ ಆದೇಶಿಸಿದೆ.

# ಕೆಂಗೇರಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು


## ಪಾದಚಾರಿ ಮಾರ್ಗದಲ್ಲಿ ಕಸ ಎಸೆಯುತ್ತಿರುವ 25 ಪ್ರಕರಣಗಳಿಂದ ಒಟ್ಟು ರೂ.62500 ದಂಡ ವಸೂಲು

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿಯ ಎಂಟು ವಲಯಗಳಲ್ಲಿ ನಾಗರಿಕರಿಗೆ ಅಡತಡೆಯಿಲ್ಲದ, ಅನುಕೂಲಕರ ಪಾದಚಾರಿ ಮಾರ್ಗ ವ್ಯವಸ್ಥೆ ಕಲ್ಪಿಸಲು ಪಾದಚಾರಿ ಮಾರ್ಗದ ಒತ್ತುವರಿ, ಅನಧಿಕೃತ ಜಾಹೀರಾತುಗಳನ್ನು ತೆರವು ಮಾಡಲಾಯಿತು.

ಪೂರ್ವ ವಲಯದಲ್ಲಿ ಪುಲಕೇಶಿನಗರ ವಿಭಾಗದ ವಾರ್ಡ್ 31ರ ಕುಶಾಲ್ ನಗರದ ರಸ್ತೆಯಲ್ಲಿ ಅಳವಡಿಸಿದ್ದ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲಾಯಿತು. ಸಿ.ವಿ ರಾಮನ್ ನಗರ ವಿಭಾಗದ ಇಂದಿರಾನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯ ಸ್ವಚ್ಛತಾ ಕಾರ್ಯ ನಡೆಸಲಾಯಿತು.





ಪಶ್ಚಿಮ ವಲಯದ ಗೋವಿಂದರಾಜನಗರ ಉಪವಿಭಾಗ ವ್ಯಾಪ್ತಿಯ ವಾರ್ಡ್ 104ರ ಗೋವಿಂದರಾಜನಗರ ಮತ್ತು ವಾರ್ಡ್ 125ರ ಮಾರೇನಹಳ್ಳಿ ವಾರ್ಡ್ ವ್ಯಾಪ್ತಿಯ ಸಿ.ಎಚ್.ಬಿ.ಎಸ್ ಬಡಾವಣೆ, 8ನೇ ಮುಖ್ಯರಸ್ತೆ ಎಂ.ಸಿ ಬಡಾವಣೆ, ವೆಸ್ಟ್ ಆಫ್ ಕಾರ್ಡ್ ರಸ್ತೆ ಸರ್ವಿಸ್ ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಿ, ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಯಿತು. ದಕ್ಷಿಣ ವಲಯದ ಕಲಾಸಿಪಾಳ್ಯದ ಕುಂಬಾರಗುಂಡಿಯಲ್ಲಿ, ಬಿಟಿಎಂ ಲೇಔಟ್‌ನ 7ನೇ ಮುಖ್ಯರಸ್ತೆ, ಹೊಸಕೆರೆ ಹಳ್ಳಿ ಮುಖ್ಯರಸ್ತೆ, ಜಯನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು.

ಶ್ರೀನಗರದಲ್ಲಿ, ನ್ಯೂ ಟಿಂಬರ್ ಯಾರ್ಡ್ ಲೇಔಟ್‌ನ 2ನೇ ಅಡ್ಡರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಪದ್ಮನಾಭನಗರ ವಿಭಾಗದ ವಾರ್ಡ್ 166, ಕರಿಸಂದ್ರದಲ್ಲಿ ಸಂಗೀತ ಪ್ಯಾಕೇಜ್ ಎಂಬ ಅಂಗಡಿಯಲ್ಲಿ ಏಕ-ಬಳಕೆಯ ಪ್ಲಾಸ್ಟಿಕ್ ಚೀಲಗಳನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ಅಂಗಡಿ ಮಾಲೀಕರಿಗೆ ರೂ.10 ಸಾವಿರ ದಂಡ ವಿಧಿಸಿ, ಏಕಬಳಕೆ ಪ್ಲಾಸ್ಟಿಕ್ ಬಳಸದಂತೆ ಎಚ್ಚರಿಕೆ ನೀಡಲಾಯಿತು. ದಾಸರಹಳ್ಳಿ ವಲಯದ ಹೆಗ್ಗನಹಳ್ಳಿ ಉಪವಿಭಾಗದಲ್ಲಿ ಹೆಗ್ಗನಹಳ್ಳಿ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು. ಮಹಾದೇವಪುರ ವಲಯದ ದೊಡ್ಡನೆಕ್ಕುಂದಿ, ಬಿ.ನಾರಾಯಣಪುರ ವಾರ್ಡ್, ಬ್ರೂಕ್ ಫೀಲ್ಡ್ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ, ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಪಟ್ಟಂದೂರು, ಎಇಸಿಎಸ್ ಬಡಾವಣೆ, ಕಲ್ಕೆರೆ ಪ್ರದೇಶಗಳಲ್ಲಿ ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ ನಡೆಸಲಾಯಿತು.ಯಲಹಂಕ ವಲಯದ ಬೆಟ್ಟಹಳ್ಳಿ ಲೇಔಟ್‌ನ ಜಿಕೆವಿಕೆ ಹಾರ್ಟಿಕಲ್ಚರ್ ಜಂಕ್ಷನ್, ಕೆಂಪೇಗೌಡ ವಾರ್ಡ್ 1, ಎಂ.ಎಸ್ ಪಾಳ್ಯದ ವಾರ್ಡ್ 3, ಕಾಫಿ ಬೋರ್ಡ್ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ, ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಅಮೃತಹಳ್ಳಿಯ ಮುಖ್ಯರಸ್ತೆಯಲ್ಲಿ ಅನಧಿಕೃತ ಒ.ಎಫ್.ಸಿ ಕೇಬಲ್ ತೆರವುಗೊಳಿಸಲಾಯಿತು.

### ರೂ.62500 ದಂಡ ವಸೂಲು

**ರಸ್ತೆ ಪಕ್ಕದಲ್ಲಿ ಮತ್ತು ಪಾದಚಾರಿ ಮಾರ್ಗದಲ್ಲಿ ಕಸ ಎಸೆಯುತ್ತಿರುವ 25 ಪ್ರಕರಣಗಳಿಂದ ಒಟ್ಟು ರೂ 62500 ದಂಡ ವಸೂಲು ಮಾಡಲಾಯಿತು. ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಯಲಚೇನಹಳ್ಳಿ ವಸಂತಪುರ ವ್ಯಾಪ್ತಿ ರಾಜ್ಯೋತ್ಸವನಗರ ಹಾಗೂ ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು.**

ರಾಜರಾಜೇಶ್ವರಿ ವಲಯ ವ್ಯಾಪ್ತಿಯ ಕೆಂಗೇರಿ ವಿಭಾಗದ ಶಂಕರನಾಗ್ ವೃತ್ತದಿಂದ ಬಿಬಿಎಂಪಿ ಕಚೇರಿ ಹತ್ತಿರಸ್ಯಾಟಲೈಟ್ ಕ್ಲಬ್ ಸರ್ಕಲ್ ಕೊಮ್ಮಘಟ್ಟ ಮುಖ್ಯರಸ್ತೆವರೆಗೆ, ರಾಜರಾಜೇಶ್ವರಿನಗರ ವಿಭಾಗದ ಬಿಡಿಎ ಕಾಂಪ್ಲೆಕ್ಸ್ ಅನ್ನಪೂರ್ಣೇಶ್ವರಿ ನಗರದ ದೇವಸ್ಥಾನದ ರಸ್ತೆಯಿಂದ ಮುದ್ದಿನಪಾಳ್ಯ ಮುಖ್ಯರಸ್ತೆವರೆಗೆ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ, ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ, ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಅಂಗಡಿಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ಬಳಕೆ ಕಂಡುಬಂದಿದ್ದು. ಏಕಬಳಕೆ ಪ್ಲಾಸ್ಟಿಕ್ ವಶಕ್ಕೆ ಪಡೆದು, 26 ಪ್ರಕರಣಗಳಿಂದ ರೂ 31,600 ದಂಡ ವಸೂಲಿ ಮಾಡಲಾಯಿತು.

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ 04 ಆಗಸ್ಟ್ 2025 | 03

## ಮೈಸೂರು, ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಗುಡ್ಡದ ಮಣ್ಣು; ಸಂಚಾರ ಸ್ಥಗಿತ ಭೀತಿ

# ಒಂದು ಬದಿ ಮಾತ್ರ ವಾಹನಗಳು ಸಂಚರಿಸುವಂತಾಗಿದೆ

• ಉದಯವಾಹಿನಿ, ಮಡಿಕೇರಿ

ಜಿಲ್ಲೆಯಲ್ಲಿ ಮಳೆ ಇಳಿಮುಖವಾಗಿದ್ದರೂ ಅವಾಂತರಗಳ ಮುಂದುವರಿದಿವೆ. ಪಾಲಂಗಾಲದಲ್ಲಿ ಭೂಕುಸಿತ ಬೆಳಕಿಗೆ ಬಂದ ಬೆನ್ನಲ್ಲೇ ಇದೀಗ ಮೈಸೂರು-ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಹಿಂದಿನಂತೆಯೇ ಮಣ್ಣು ಕುಸಿದು ರಸ್ತೆಗೆ ಬರಲಾರಂಭಿಸಿದ್ದು, ಹೆದ್ದಾರಿಯ ಒಂದು ಬದಿ ಮಾತ್ರ ವಾಹನಗಳು ಸಂಚರಿಸುವಂತಾಗಿದೆ. ಕಳೆದೆರಡು ದಿನಗಳಿಂದ ಮಡಿಕೇರಿ ಸೇರಿದಂತೆ ಕೊಡಗಿನಾದ್ಯಂತ ಮಳೆ ಕಡಿಮೆಯಾಗಿದೆ. ಆದರೆ ಆತಂಕ ಮುಂದುವರಿದಿದೆ. ಕಾರಣ, ಇತ್ತೀಚೆಗೆ ವಿರಾಜಪೇಟೆ ಸಮೀಪದ ಪಾಲಂಗಾಲದಲ್ಲಿ ಭೂಕುಸಿತವಾಗಿರುವ ಘಟನೆ ಬೆಳಕಿಗೆ ಬಂದಿದೆ. ಎರಡು ದಿನಗಳ ಹಿಂದಷ್ಟೇ ರಾಷ್ಟ್ರೀಯ ಹೆದ್ದಾರಿ 275 ರ ತಡೆಗೋಡೆಯಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಇದೀಗ ಇದೇ ಹೆದ್ದಾರಿಯ ಕರ್ತೋಜಿ ಬಳಿ ಪ್ರತಿ ವರ್ಷದಂತೆ ಈ ಬಾರಿಯೂ ಗುಡ್ಡದ ಮಣ್ಣು ನಿಧಾನವಾಗಿ ರಸ್ತೆಯನ್ನು ಆವರಿಸುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಬಂದ್ ಆಗುವ ಭೀತಿ ಸೃಷ್ಟಿಸಿದೆ.

**ಎಲ್ಲಿಂದ ಬರುತ್ತಿದೆ ಇಷ್ಟೊಂದು ಮಣ್ಣು?:** ಜೂನ್, ಜುಲೈ ತಿಂಗಳಲ್ಲಿ ಉತ್ತಮ ಮಳೆಯಾಗಿ ಆಗಸ್ಟ್ ತಿಂಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗುವ ಸಂದರ್ಭ ಸಂಪಾಜೆ ಘಾಟಿ ರಸ್ತೆಯ ಕರ್ತೋಜಿ ಎಂಬಲ್ಲಿ ದೊಡ್ಡ


ಉದಯವಾಹಿನಿ ಚಿತ್ರ

**ಜಿಲ್ಲೆಯಲ್ಲಿ ಆತಂಕದ ಪರಿಸ್ಥಿತಿ**

ಗುಡ್ಡದಿಂದ ನಿಧಾನಕ್ಕೆ ಮಣ್ಣು ಜಾರಿ ರಸ್ತೆಗೆ ಬರಲಾರಂಭಿಸುತ್ತದೆ. ದಿನ ಕಳೆದಂತೆ ಮಣ್ಣಿನ ಪ್ರಮಾಣ ಹೆಚ್ಚಾಗುತ್ತಾ ಹೋಗಿ ರಸ್ತೆ ಸಂಪೂರ್ಣ ಮುಚ್ಚಿಹೋಗುತ್ತದೆ. ಇದಷ್ಟೇ ಅಲ್ಲ, ರಸ್ತೆಯ ಅಡಿಯಲ್ಲಿಯೂ ಮಣ್ಣಿನ ಚಲನೆಯಿಂದ ರಸ್ತೆ ಉಬ್ಬಿ ಬರಲಾರಂಭಿಸುತ್ತದೆ. ಸದ್ಯ ಈ ಬಾರಿಯೂ ಹೀಗೆಯೇ ಆಗಿದೆ.

**ತಡೆಗೋಡೆ ನಿರ್ಮಾಣದಿಂದ ಸಮಸ್ಯೆಗೆ ಮುಕ್ತಿ?:** ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಾಣವಾಗುತ್ತಿರುವ 21 ತಡೆಗೋಡೆಗಳ ಪೈಕಿ ಈ ಭೂಕುಸಿತ ಸ್ಥಳದಲ್ಲಿಯೂ ತಡೆಗೋಡೆ ನಿರ್ಮಿಸಲಾಗುತ್ತದೆ. ಇಲ್ಲಿನ ಸಮಸ್ಯೆ ಕುರಿತು ತಜ್ಞರು, ವಿಜ್ಞಾನಿಗಳೊಂದಿಗೆ ಚರ್ಚಿಸಿ ತಡೆಗೋಡೆ ನಿರ್ಮಾಣಕ್ಕೆ ರಾಷ್ಟ್ರೀಯ ಹೆದ್ದಾರಿ ಮಡಿಕೇರಿ ಉಪವಿಭಾಗದ ಅಧಿಕಾರಿಗಳು ಯೋಜನೆ ರೂಪಿಸಿದ್ದಾರೆ. ಅವರು ಹೇಳುವಂತೆ ಇಲ್ಲಿ ನಿರ್ಮಾಣವಾಗಲಿರುವ ತಡೆಗೋಡೆಯನ್ನು ಇಲ್ಲಿನ ಪರಿಸ್ಥಿತಿ ಅವಲೋಕಿಸಿ ವಿಶೇಷವಾಗಿ ವಿನ್ಯಾಸಗೊಳಿಸಲಾಗುತ್ತಿದೆ. ಹಾಗಾಗಿ ತಡೆಗೋಡೆ ನಿರ್ಮಾಣವಾದರೆ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಂತಾಗಲಿದೆ.

**ಭೂಕುಸಿತ ಬಳಿಕ ಹೆಚ್ಚಿದ ಆತಂಕ:** ಪಾಲಂಗಾಲದ ದಟ್ಟಾರಣ್ಯದಲ್ಲಿ ಭೂಕುಸಿತ ಸಂಭವಿಸಿರುವ ವಿಚಾರ ಬೆಳಕಿಗೆ ಬಂದ ಬಳಿಕ ಜಿಲ್ಲೆಯಲ್ಲಿ ಮತ್ತೆ ಆತಂಕದ ಪರಿಸ್ಥಿತಿ ನಿರ್ಮಾಣವಾಗಿದೆ. ರಾಷ್ಟ್ರೀಯ ಹೆದ್ದಾರಿ ತಡೆಗೋಡೆಯಲ್ಲಿ ಬಿರುಕು, ಕರ್ತೋಜಿಯಲ್ಲಿ ರಸ್ತೆಯ ಮೇಲೆ ಮಣ್ಣು ಬರುತ್ತಿರುವ ಘಟನೆಯಿಂದ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿರುವುದು ಗೋಚರಿಸುತ್ತಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಮಳೆ ಮುಂದುವರಿದರೆ ಜಲಸ್ಫೋಟ, ಭೂಕುಸಿತದಂತಹ ಘಟನೆಗಳು ಸಂಭವಿಸುವ ಆತಂಕ ಜನರಲ್ಲಿಮೂಡಿದೆ. ಈಗಾಗಲೇ ಗುರುತಿಸಿರುವ ಎಲ್ಲಾ ಸೂಕ್ಷ್ಮ ಪ್ರದೇಶಗಳ ಮೇಲೆ ಹದ್ದಿನ ಕಣ್ಣಿಟ್ಟಿರುವ ಜಿಲ್ಲಾಡಳಿತ, ಅನಾಹುತಗಳಾಗದಂತೆ ಎಚ್ಚರಿಕೆ ವಹಿಸುತ್ತಿದೆ.

**ತಜ್ಞರಿಂದ ವರದಿ ಸಲ್ಲಿಕೆ**

**ಯಾಕೆ ಹೀಗಾಗುತ್ತಿದೆ ಎಂದು ಪ್ರಶ್ನಿಸಿದರೆ, ಅದಕ್ಕೆ ಉತ್ತರ ಇದು ಗುಡ್ಡ ಕುಸಿತ. ಆದರೆ ಬೇರೆಡೆಯಂತೆ ಒಮ್ಮೆಲೆ ಮೇಲಿನಿಂದ ಗುಡ್ಡವೇ ಕೊಚ್ಚಿ ಹೋಗುವುದರ ಬದಲು ಇಲ್ಲಿ ಅಂತರ್ಜಲ ಹೆಚ್ಚಾದಾಗ ಮಣ್ಣು ನಿಧಾನವಾಗಿ ಜಾರಲಾರಂಭಿಸುತ್ತದೆ. ಬೃಹತ್ ಗುಡ್ಡದಿಂದ ಸ್ವಲ್ಪ ಸ್ವಲ್ಪವಾಗಿ ಜಾರುವ ಮಣ್ಣು, ಮೆಲ್ಲಗೆ ರಾಶಿಯಾಗುತ್ತಾ ಹೋಗುತ್ತದೆ. ರಂಗೋಲಿ ಕಲ್ಲುಮಿಶ್ರಿತ ಜಿಗುಟು ಮಣ್ಣು ಇದಾಗಿದ್ದು, ನೀರಿನಾಂಶ ಹೆಚ್ಚಾದಾಗ ಈ ರೀತಿ ಆಗುತ್ತದೆ ಎಂದು ಇಲ್ಲಿಗೆ ಈ ಹಿಂದೆ ಭೇಟಿ ನೀಡಿ ಪರಿಶೀಲಿಸಿದ ತಜ್ಞರು ಇಲಾಖೆಗೆ ವರದಿ ನೀಡಿದ್ದಾರೆ.**

**ಕರ್ತೋಜಿ ಬಳಿ ಈ ಬಾರಿಯೂ ದೊಡ್ಡ ಪ್ರಮಾಣದಲ್ಲಿ ಮಣ್ಣು ಶೇಖರಣೆಯಾಗುತ್ತಿದೆ. ಹೆದ್ದಾರಿಯ ಸುಮಾರು ಅರ್ಧ ಭಾಗ ಮಣ್ಣಿನಿಂದ ಆವೃತವಾಗಿದೆ. ಒಂದು ಭಾಗದಲ್ಲಿವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಸೋಮವಾರದಿಂದ ಜೆಸಿಬಿ ಯಂತ್ರಗಳ ಮೂಲಕ ಕಾರ್ಯಾಚರಣೆ ನಡೆಸಿ ಮಣ್ಣನ್ನು ತೆರವುಗೊಳಿಸಲಾಗುವುದು.**

**–ಜಿ.ಎಚ್.ಗಿರೀಶ್, ಕಾರ್ಯಪಾಲಕ ಎಂಜಿನಿಯರ್, ಮಡಿಕೇರಿ ಉಪ ವಿಭಾಗ, ರಾಷ್ಟ್ರೀಯ ಹೆದ್ದಾರಿ 275**

---

## ಒಳ ಮೀಸಲಾತಿ ಶೀಘ್ರ ಜಾರಿಗೆ ಆಗ್ರಹ

• ಉದಯವಾಹಿನಿ, ರಾಮನಗರ

ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ, ಜಿಲ್ಲಾ ಒಳ ಮೀಸಲಾತಿ ಹೋರಾಟ ಸಮಿತಿ ಸದಸ್ಯರು ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ತಮಟೆ ಮತ್ತು ನಗಾರಿಯೊಂದಿಗೆ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಸದಸ್ಯರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಅಖಿಲ ಭಾರತ ಬಹುಜನ ಸಮಾಜ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ನಾಗೇಶ್, ಒಳ ಮೀಸಲಾತಿ ಜಾರಿಗೊಳಿಸುವಂತೆ ಸುಪ್ರೀಂ ಕೋರ್ಟ್ ಈಗಾಗಲೇ ಸೂಚನೆ ನೀಡಿದೆ. ಆದರೆ, ರಾಜ್ಯ ಸರ್ಕಾರ ಅನಗತ್ಯವಾಗಿ ವಿಳಂಬ ಮಾಡಿಕೊಂಡು ಬರುತ್ತಿದೆ. ಆ ಮೂಲಕ ಸಾಮಾಜಿಕ ನ್ಯಾಯ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದರು.

ಪರಿಶಿಷ್ಟ ಜಾತಿಗಳಲ್ಲೇ ಅತಿ ಹಿಂದುಳಿದ ಮತ್ತು ಅವಕಾಶ ವಂಚಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಸಲುವಾಗಿ ಒಳ ಮೀಸಲಾತಿ ಜಾರಿಯಾಗಬೇಕು. ಅದಕ್ಕಾಗಿ 35 ವರ್ಷಗಳಿಂದ ಸತತವಾಗಿ ಹೋರಾಟ ನಡೆಯುತ್ತಲೇ ಇದೆ. ಆದರೂ, ಸರ್ಕಾರಗಳ ನಿರ್ಲಕ್ಷ್ಯದಿಂದ ಈ ವಿಷಯ ನನೆಗುದಿಗೆ ಬಿದ್ದಿದೆ. ಈ ಅಸಮಾನತೆ ಸರಿಪಡಿಸಲು ಸುಪ್ರೀಂ ಕೋರ್ಟ್ ಕಳೆದ


ಉದಯವಾಹಿನಿ ಚಿತ್ರ

ವರ್ಷ ಸ್ಪಷ್ಟ ತೀರ್ಪು ನೀಡಿದೆ ಎಂದು ಹೇಳಿದರು. ತೀರ್ಪಿನ ಪ್ರಕಾರ, ಎಸ್‌ಸಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯ ಸರ್ಕಾರ ಒಳ ಮೀಸಲಾತಿ ನೀಡಬೇಕು. ಇದರಿಂದಾಗಿ ಶಿಕ್ಷಣ, ಉದ್ಯೋಗ ಸೇರಿದಂತೆ ವಿವಿಧ ಮೀಸಲಾತಿಯಲ್ಲಿ ಹಿಂದುಳಿದ ಸಮುದಾಯಗಳಿಗೆ ಆಗುತ್ತಿರುವ ಅನ್ಯಾಯಕ್ಕೆ ಪರಿಹಾರ ಸಿಗಲಿದೆ. ರಾಜ್ಯ ಸರ್ಕಾರ ಆ. 15ರೊಳಗೆ ಒಳ ಮೀಸಲಾತಿ ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದರು.

ದಲಿತ ಮುಖಂಡ ಕೆಂಚನಕುಪ್ಪೆ ಬಿ.ಎಂ. ರಮೇಶ್ ಕುಮಾರ್, ಸರ್ಕಾರ ಗಡುವಿನೊಳಗೆ ನಮ್ಮ ಬೇಡಿಕೆಯನ್ನು ಈಡೇರಿಸಲು ವಿಫಲವಾದರೆ, ರಾಜ್ಯದಾದ್ಯಂತ ಹೋರಾಟ ತೀವ್ರಗೊಳಿಸಲಾಗುವುದು. ಈ ಹೋರಾಟದಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು, ಕಾರ್ಮಿಕರು, ವಕೀಲರು, ಮಹಿಳೆಯರು ಸೇರಿದಂತೆ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

---

## ಸರ್ಕಾರಿ ಜಾಗ ಕಬಳಿಕೆ ವಿರುದ್ಧ ತನಿಖೆ: ದರ್ಶನ್ ಪುಟ್ಟಣ್ಣಯ್ಯ

• ಉದಯವಾಹಿನಿ, ಪಾಂಡವಪುರ

ಕೆಲವೆಡೆ ಸರ್ಕಾರಿ ಜಾಗ ಕಬಳಿಕೆಯಾಗಿರುವ ಬಗ್ಗೆ ಆರೋಪ ಕೇಳಿ ಬರುತ್ತಿದ್ದು, ಇದನ್ನು ಸರ್ಕಾರದ ಗಮನಕ್ಕೆ ತಂದು ತನಿಖೆ ನಡೆಸಲಾಗುವುದು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಪಟ್ಟಣದ ಪುರಸಭೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಅಧ್ಯಕ್ಷೆ ಜ್ಯೋತಿಲಕ್ಷ್ಮೀ ಬಾಬು ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.ಪಟ್ಟಣದ ವಿವಿಧ ಬಡಾವಣೆಯಲ್ಲಿ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಗುತ್ತಿಗೆದಾರರು ಇನ್ನೂ ಪೂರ್ಣಗೊಳಿಸಿಲ್ಲ. ಸೂಚನೆ ನೀಡಿದ್ದರೂ ಇದಕ್ಕೆ ಸ್ಪಂದಿಸಿಲ್ಲ. ಗುತ್ತಿಗೆದಾರರ ವರ್ತನೆ ಹೀಗೆ ಮುಂದುವರಿದರೆ ಕಪ್ಪು ಪಟ್ಟಿಗೆ ಸೇರಿಸಲು ಅಗತ್ಯ ಕ್ರಮವಹಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುತ್ತಿರುವವರಿಗೆ ಸೂಕ್ತ ಸ್ಥಳ ಗುರುತಿಸಿ ಅಲ್ಲಿಗೆ ಸ್ಥಳಾಂತರಿಸಲು ಆಲೋಚಿಸಲಾಗುತ್ತಿದೆ ಎಂದು ತಿಳಿಸಿದರು.

**ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಿ:** ಸದಸ್ಯ ಯಶವಂತ್ ಕುಮಾರ್ ಮಾತನಾಡಿ, ಪಟ್ಟಣದ ಪೌರ ಕಾರ್ಮಿಕರ ಕಾಲೋನಿಯಲ್ಲಿ ಪೌರ ಕಾರ್ಮಿಕರಿಗಾಗಿ ನಿರ್ಮಿಸುತ್ತಿರುವ 25X35 ಅಳತೆಯ 6 ವಸತಿ ಗೃಹಗಳಿಗೆ 1.60 ಕೋಟಿ


ಉದಯವಾಹಿನಿ ಚಿತ್ರ

ಅಂದಾಜಿಸಿ ನಕ್ಷೆ ತಯಾರಿಸಲಾಗಿದೆ. ರಸ್ತೆ ಇಲ್ಲದೆ ಇರುವ 28 ನಿವೇಶನಗಳಿಗೆ ಒಂದೇ ಪಿಐಡಿ ನಂಬರ್ ಕೊಡಲಾಗಿದೆ. ಇಷ್ಟೊಂದು ಅಕ್ರಮ ನಡೆಸಿರುವ ಈ ಹಿಂದಿನ ಕಂದಾಯ ಅಧಿಕಾರಿ ಮಹದೇವಸ್ವಾಮಿ ವಿರುಧ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

**ಜಾಗ ಒತ್ತುವರಿ ತೆರವುಗೊಳಿಸಿ:** ಸದಸ್ಯ ಪಾರ್ಥಸಾರಥಿ ಮಾತನಾಡಿ, ಪಟ್ಟಣದ ನಿವಾಸಿ ಜಿತೇಂದ್ರಕುಮಾರ್ ಮೆಹ್ರಾ ಅವರು ಪುರಸಭೆಗೆ ಸೇರಿದ 6X19 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದು, ಇದನ್ನು ತೆರವುಗೊಳಿಸುವಂತೆ 2022ರ ನವೆಂಬರ್ 9ರಂದು ತೀರ್ಮಾನಿಸಲಾಗಿತ್ತು. ಆದರೂ ಅಧಿಕಾರಿಗಳು ಇದುವರೆಗೂ ಯಾವುದೇ ಕ್ರಮವಹಿಸಿಲ್ಲ ಎಂದು ಆರೋಪಿಸಿದರು.

**ನಾಲೆಗೆ ತಡೆಗೋಡೆ ನಿರ್ಮಿಸಿ**

**ಪಟ್ಟಣದ ಮಧ್ಯ ಭಾಗದಲ್ಲಿ ಹಾದು ಹೋಗಿರುವ ವಿಶ್ವೇಶ್ವರಯ್ಯ ನಾಲೆಯ ಇಕ್ಕೆಲಗಳಲ್ಲಿ ತಡೆಗೋಡೆ ನಿರ್ಮಿಸುವಂತೆ ಒತ್ತಾಯಿಸಲಾಗಿತ್ತದರೂ, ಇವರೆಗೆ ಕ್ರಮವಹಿಸಿಲ್ಲ. ಶಾಲಾ ಮಕ್ಕಳು ಸೇರಿ ನೂರಾರು ಜನ ನಿತ್ಯ ನಾಲೆ ಏರಿ ಮೇಲೆ ಓಡಾಡುತ್ತಾರೆ. ಕೂಡಲೇ ಕ್ರಮಕೈಗೊಳ್ಳಬೇಕು. ಮಹಾತ್ಮಗಾಂಧಿ ಬಡಾವಣೆಯ ಎಬಿಸಿ ಬ್ಲಾಕ್‌ಗಳನ್ನು ಸರ್ವೇ ಮಾಡಿಸಿ ಅಲೆಮಾರಿ (ಹಂದಿಜೋಗಿ) ಜನಾಂಗದವರಿಗೆ ತಕ್ಷಣ ಹಕ್ಕು ಪತ್ರ ನೀಡಬೇಕು.**

**– ಚಂದ್ರು, ಸದಸ್ಯ**

**ಸಭೆ ಬಹಿಷ್ಕರಿಸಿದ ಸದಸ್ಯರು:** ಪುರಸಭೆ ಅಧಿಕಾರಿಗಳು ಸದಸ್ಯರು ಮಾತಿಗೆ ಕಿಂಚಿತ್ತೂ ಗೌರವ ಕೊಡುತ್ತಿಲ್ಲ. ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ತೀರ್ಮಾನವಾದ ಈ ಹಿಂದಿನ ನಡಾವಳಿಗಳು ಅನುಷ್ಠಾನಗೊಳ್ಳುತ್ತಿಲ್ಲ ಎಂದು ಆರೋಪಿಸಿ ಸದಸ್ಯರಾದ ಶಿವಕುಮಾರ್ ಮತ್ತು ಪಾರ್ಥಸಾರಥಿ ಸಭೆ ಬಹಿಷ್ಕರಿಸಿ ಹೊರ ನಡೆದರು.

---

## ಸುಬ್ರಹ್ಮಣ್ಯಾಚಾರಿಗೆ ಸ್ಥಾಯಿ ಸಮಿತಿ ಪಟ್ಟ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಆಡಳಿತ ಪಕ್ಷದ ಸದಸ್ಯರ ನಡುವೆ ತೀವ್ರ ಚರ್ಚೆ, ಜಟಾಪಟಿಗೆ ಕಾರಣವಾಗಿದ್ದ ಇಲ್ಲಿನ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನವು ಸದಸ್ಯ ಸುಬ್ರಹ್ಮಣ್ಯಾಚಾರಿ ಪಾಲಾಗುವ ಸಾಧ್ಯತೆ ಇದೆ. ಸ್ಥಾಯಿ ಸಮಿತಿ ರಚನೆ ವಿಚಾರವು ನಗರಸಭೆ ಮಾಜಿ ಅಧ್ಯಕ್ಷ ಡಿ.ಎಸ್. ಆನಂದರೆಡ್ಡಿ ಬಾಬು, ಹಾಲಿ ಅಧ್ಯಕ್ಷ ಎ.ಗಜೇಂದ್ರ ನಡುವೆ ಜಟಾಪಟಿಗೆ ಕಾರಣವಾಗಿತ್ತು. ಈ ಸಂಬಂಧ ಸುಧಾಕರ್ ಅವರು ನಗರದ ತಮ್ಮ ನಿವಾಸದಲ್ಲಿ ಆಡಳಿತ ಪಕ್ಷದ ಸದಸ್ಯರ ಸಭೆ ನಡೆಸಿದರು.

ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನದ ವಿಚಾರವಾಗಿ ತೀವ್ರ ಚರ್ಚೆಗಳು ನಡೆದವು. ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಡಾ.ಕೆ.ಸುಧಾಕರ್, ಆನಂದ ರೆಡ್ಡಿ ಬಾಬು ಮತ್ತು ಗಜೇಂದ್ರ ನಮ್ಮ ಪಕ್ಷದ ಮುಖಂಡರು. ಇಬ್ಬರಿಗೂ ತಿಳಿ ಹೇಳುವ ಕೆಲಸ ಮಾಡುವೆ. ರಾಜಕಾರಣದಲ್ಲಿ ಸಣ್ಣ ಪುಟ್ಟ ವ್ಯತ್ಯಾಸ ಇದ್ದೇ ಇರುತ್ತದೆ. ರಾಜ್ಯದಲ್ಲಿ ಸಿಎಂ ಮತ್ತು ಡಿಸಿಎಂ ನಡುವೆಯೇ ರಾಜಕೀಯ ಜಟಾಪಟಿ


ಉದಯವಾಹಿನಿ ಚಿತ್ರ

**ರಾಜ್ಯಕ್ಕೆ 11 ಲಕ್ಷ ಟನ್ ಬೇಡಿಕೆ ಇದೆ. ಸೆಪ್ಟೆಂಬರ್‌ವರೆಗೆ ಮುಂಗಾರು ಅವಧಿ ಇದೆ. ಪ್ರತಿ ದಿನವೂ ಮೂರರಿಂದ ಐದು ಸಾವಿರ ಟನ್ ಯೂರಿಯಾ ರಾಜ್ಯಕ್ಕೆ ಬರುತ್ತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ರಾಜಕಾರಣವನ್ನು ಮಾಡುವುದನ್ನು ಬಿಡಬೇಕು ಎಂದರು.**

ಇದೆ. ಇಲ್ಲಿರುವುದು ಕಾಂಗ್ರೆಸ್ ಶಾಸಕರು. ಬಿಜೆಪಿ ಅಧ್ಯಕ್ಷರ ಆಡಳಿತಕ್ಕೆ ಅಡ್ಡಿಪಡಿಸುವರು. ನಮ್ಮ ಸದಸ್ಯರ ನಡುವೆ ಯಾವುದೇ ಸಮಸ್ಯೆಗಳೂ ಇಲ್ಲ. ನಾನು ಅಣ್ಣನ ಸ್ಥಾನದಲ್ಲಿ ಇದ್ದೇನೆ. ಎಲ್ಲವನ್ನೂ ಸರಿಪಡಿಸುವೆ ಎಂದು ಹೇಳಿದರು. ಈ ವೇಳೆ ಮಾಧ್ಯಮದವರು ಯಾರು ಅಧ್ಯಕ್ಷರಾಗುವರು ಎಂದಿದ್ದಕ್ಕೆ, 'ಸುಬ್ರಹ್ಮಣ್ಯಾಚಾರಿ ಅವರನ್ನು ಸ್ಥಾಯಿ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಲು ಒಮ್ಮತದಿಂದ ತೀರ್ಮಾನಿಸಲಾಗಿದೆ. ಮಾಜಿ ಅಧ್ಯಕ್ಷರು ಮತ್ತು ಅಧ್ಯಕ್ಷರು ಒಂದೇ ಹೆಸರು ತಿಳಿಸಿದ್ದಾರೆ.

ಎಲ್ಲರೂ ಒಮ್ಮತದಿಂದ ಈ ಬಗ್ಗೆ ನಿರ್ಧಾರ ಮಾಡಿದ್ದಾರೆ ಎಂದರು. ಸಿದ್ಧತೆ ಮಾಡಿಕೊಳ್ಳದ ರಾಜ್ಯ ಸರ್ಕಾರ 6.50 ಲಕ್ಷ ಟನ್ ಯೂರಿಯಾ ಅಗತ್ಯವಿದೆ ಎಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಬೇಡಿಕೆ ಸಲ್ಲಿಸಿತ್ತು. ಕೇಂದ್ರ ಸರ್ಕಾರ 8.13 ಲಕ್ಷ ಟನ್ ಕಳುಹಿಸಿದೆ. 7 ಲಕ್ಷ ಟನ್ ಹಂಚಿಕೆ ಮಾಡಿದ್ದಾರೆ.

ಉಳಿದ ಗೊಬ್ಬರ ದಾಸ್ತಾನು ಇರಬೇಕು. ಆದರೆ ರೈತರಿಗೆ ಏಕೆ ಯೂರಿಯಾ ಸಿಗುತ್ತಿಲ್ಲ. ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ಬಗ್ಗೆ ಕೃಷಿ ಇಲಾಖೆ ಎಚ್ಚರವಹಿಸಬೇಕಾಗಿತ್ತು ಎಂದರು. ಎಚ್.ಎನ್.ವ್ಯಾಲಿ ಮತ್ತು ಕೆ.ಸಿ ವ್ಯಾಲಿ ನೀರನ್ನು ಮೂರು ಹಂತದಲ್ಲಿ ಸಂಸ್ಕರಿಸಿ ಹರಿಸಿದರೆ ನಾವೇ ಸಚಿವರನ್ನು ಅಭಿನಂದಿಸುತ್ತೇವೆ. ಹಣಕ್ಕಿಂತ ಜನರ ಆರೋಗ್ಯ ಮುಖ್ಯ. ಆದರೆ ಸರ್ಕಾರ ಹೆಚ್ಚು ಹಣ ವೆಚ್ಚವಾಗುತ್ತದೆ ಎನ್ನುವುದನ್ನೇ ಹೇಳುತ್ತಿದೆ. ಜನರ ಆರೋಗ್ಯ ಮುಖ್ಯವಲ್ಲವೇ ಎಂದು ಪ್ರಶ್ನಿಸಿದರು.

---

## ಹಿಂದುಳಿದವರು ಸಂಘಟಿತರಾಗಲು ಸಲಹೆ

• ಉದಯವಾಹಿನಿ, ಮಾಗಡಿ

ತಾಲ್ಲೂಕು ಹಿಂದುಳಿದ ಜಾತಿಗಳ ಮಹಾ ಒಕ್ಕೂಟದ ಅಧ್ಯಕ್ಷರನ್ನಾಗಿ ಪುರಸಭೆ ಸದಸ್ಯ ಎಂ.ಎನ್ ಮಂಜುನಾಥ್ ಅವರನ್ನು ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪಟ್ಟಣದ ಸಿದ್ಧರೂಢ ಭವನದಲ್ಲಿ ನಡೆದ ಹಿಂದುಳಿದ ಜಾತಿಗಳ ಮಹಾ ಒಕ್ಕೂಟದ ಸಭೆಯಲ್ಲಿ ಆಯ್ಕೆ ನಡೆಯಿತು. ನಂತರ ಪ್ರತಿಕ್ರಿಯಿಸಿದ ನೂತನ ಅಧ್ಯಕ್ಷ ಮಂಜುನಾಥ್, ಮುಂದಿನ ವಾರದಲ್ಲಿ ತಾಲ್ಲೂಕಿನಲ್ಲಿ ನೆಲೆಸಿರುವ ಎಲ್ಲಾ ಒಬಿಸಿ ಮುಖಂಡರ ಸಭೆ ಕರೆದು ತಾಲ್ಲೂಕು ಘಟಕ ರಚಿಸಲಾಗುವುದು ಎಂದರು. ಜಿಲ್ಲಾ ಹಿಂದುಳಿದ ಜಾತಿಗಳ ಮಹಾ ಒಕ್ಕೂಟದ ಅಧ್ಯಕ್ಷ ರೈಡ್ ನಾಗರಾಜು ಮಾತನಾಡಿ, ಆ.5ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಡಿ.ದೇವರಾಜ ಅರಸು ಜಯಂತಿ ಆಚರಿಸುವ ಬಗ್ಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಪೂರ್ವಭಾವಿ ಸಭೆಯಲ್ಲಿ ಜಿಲ್ಲೆಯ 5 ತಾಲ್ಲೂಕುಗಳ ಹಿಂದುಳಿದ 18 ಸಮುದಾಯಗಳ ಮುಖಂಡರು ತಪ್ಪದೆ ಭಾಗವಹಿಸಿಬೇಕು ಎಂದರು.

ಒಬಿಸಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಟಿ.ವಿ.ನಾರಾಯಣ ಮಾತನಾಡಿ, ಜಿಲ್ಲೆಯಲ್ಲಿ ಹಿಂದುಳಿದ


ಉದಯವಾಹಿನಿ ಚಿತ್ರ

ಸಮುದಾಯಗಳಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ. ಸರ್ಕಾರಿ ಸವಲತ್ತು ಕೂಡ ಒಬಿಸಿ ಸಮುದಾಯಗಳಿಗೆ ತಲುಪುತ್ತಿಲ್ಲ. ಸವಲತ್ತು ಪಡೆಯಲು ಸಂಘಟಿತರಾಗಬೇಕಾಗಿದೆ ಎಂದರು.

ತಾಲ್ಲೂಕು.ಡಿ.ದೇವರಾಜ ಅರಸು ಹಿಂದುಳಿದ ಜಾತಿಗಳ ವಿಚಾರ ವೇದಿಕೆ ಅಧ್ಯಕ್ಷ ಪಿ.ವಿ.ಸೀತಾರಾಮ್ ಮಾತನಾಡಿ, ಒಬಿಸಿ ಸಮುದಾಯಗಳ ಸಂಘಟನೆ ಅನಿವಾರ್ಯ ಎಂದರು. ತಾಲ್ಲೂಕು.ಡಿ.ದೇವರಾಜ ಅರಸು ಹಿಂದುಳಿದ ಜಾತಿಗಳ ವಿಚಾರ ವೇದಿಕೆ ಪ್ರಧಾನ ಕಾರ್ಯದರ್ಶಿ ಮಾರಣ್ಣ ಮಾತನಾಡಿ, ತಾಲ್ಲೂಕಿನಲ್ಲಿ ಡಿ.ದೇವರಾಜ ಅರಸು ಆಶಯ ಅನುಷ್ಠಾನಗೊಳಿಸುವಲ್ಲಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಿರ್ಲಕ್ಷ್ಯವಹಿಸಿದ್ದಾರೆ. ಶಿಕ್ಷಣ, ಸಂಘಟನೆ, ಹೋರಾಟವನ್ನು ಒಬಿಸಿಗಳು ರೂಢಿಸಿಕೊಳ್ಳಬೇಕಾಗಿದೆ ಎಂದರು.


---

## ಪಕ್ಷ ಸಂಘಟನೆಗೆ ಬಿಜೆಪಿ ವೇಗ ನೀಡಬೇಕಿದೆ: ಕುಂಬಾರಹಳ್ಳಿ ಸುಬ್ಬಣ್ಣ

• ಉದಯವಹಿನಿ, ಪಿರಿಯಾಪಟ್ಟಣ

ಬಿಜೆಪಿ ಕಾರ್ಯಕರ್ತರ ಪಕ್ಷವಾಗಿದ್ದು ಸಾಮಾನ್ಯ ಕಾರ್ಯಕರ್ತನೂ ಸಹ ಪಕ್ಷದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಲು ಅವಕಾಶವಿರುವ ಏಕೈಕ ಪಕ್ಷ ಎಂದು ಬಿಜೆಪಿ ಜಿಲ್ಲಾ ಗ್ರಾಮಾಂತರ ಘಟಕದ ಅಧ್ಯಕ್ಷ ಕುಂಬಾರಹಳ್ಳಿ ಸುಬ್ಬಣ್ಣ ಹೇಳಿದರು. ಪಟ್ಟಣದ ಕನ್ನಂಬಾಡಿಯಮ್ಮ ಸಮುದಾಯ ಭವನದಲ್ಲಿ ನಡೆದ ತಾಲ್ಲೂಕು ಬಿಜೆಪಿ ಕಾರ್ಯಕರ್ತರ ಸಂಘಟನಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಬಿಜೆಪಿಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಶಕ್ತಿ ಕೇಂದ್ರಗಳು ಮತ್ತು ಬೂತ್ ಮಟ್ಟದಲ್ಲಿ ಕಾರ್ಯಕರ್ತರು ಸಹಕರಿಸಬೇಕಿದೆ ಎಂದರು.

ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ವಿ. ರಾಜೇಂದ್ರ, ಜಿಲ್ಲಾ ಸಂಚಾಲಕ ಮೈ.ವಿ.ರವಿಶಂಕರ್, ಮಾಧ್ಯಮ ವಕ್ತಾರ ದಯಾನಂದ್, ಮಾಜಿ ಶಾಸಕ ಹೆಚ್.ಸಿ.ಬಸವರಾಜು ಮಾತನಾಡಿದರು.



ಉದಯವಾಹಿನಿ ಚಿತ್ರ

**ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸರ್ಕಾರ ಹರಸಾಹಸ ಪಡುತ್ತಿದ್ದು ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಲೇ ಇಲ್ಲ.**

**-ಎನ್.ವಿ.ಫಣೀಶ್, ಬಿಜೆಪಿ ರಾಜ್ಯ ಪ್ರಕೋಷ್ಟ ಸಹ ಸಂಯೋಜಕ**

---

## ಕೋರ್ಟ್ ಕಟ್ಟಡ ನಿರ್ಮಾಣಕ್ಕೆ ಕೆರೆ ಜಾಗ ಬಳಕೆ: ರೈತರ ದೂರು

• ಉದಯವಾಹಿನಿ, ಕನಕಪುರ

ನ್ಯಾಯಾಲಯದ ಆದೇಶ ಉಲ್ಲಂಘಿಸಿ ಪೇಟೆ ಕೆರೆ ಕಾಯ್ದಿರಿಸಿದ್ದ ಜಾಗದಲ್ಲಿ ಕೋರ್ಟ್ ನಿರ್ಮಾಣ ಮಾಡಲಾಗಿದೆ ಎಂದು ಸಂಘದ ಪದಾಧಿಕಾರಿಗಳು ದೂರಿದ್ದಾರೆ. ರೈತ ಸಂಘದಿಂದ ನಡೆದ ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಮುಖಂಡರಾದ ಸಂಪತ್, ಚಂದ್ರಶೇಖರ್, ಮಂಜುನಾಥ್, ದೇವರಾಜ್ ಮಾತನಾಡಿ, 36.20 ಎಕರೆ ವಿಸ್ತೀರ್ಣವಿದ್ದ ಪೇಟೆ ಕೆರೆಯಲ್ಲಿ 20 ಎಕರೆಯನ್ನು ಕೆರೆಗೆ ಕಾಯ್ದಿರಿಸಿ ಅದನ್ನು ಅಭಿವೃದ್ಧಿಪಡಿಸಿದ ನಂತರ ಉಳಿದ ಜಾಗವನ್ನು ಸರ್ಕಾರಿ ಉದ್ದೇಶಕ್ಕೆ ಬಳಸಿಕೊಳ್ಳುವಂತೆ 2013ರಲ್ಲಿ ಹೈಕೋರ್ಟ್ ಆದೇಶ ನೀಡಿತ್ತು.

ತಾಲ್ಲೂಕು ಆಡಳಿತ ಹೆಚ್ಚಿನ ಜಾಗ ಬೇಕೆಂದು ಮೇಲ್ಮನವಿ ಸಲ್ಲಿಸಿತ್ತು. ಆದರೆ, ನ್ಯಾಯಾಲಯ ಕೆರೆ ಅಭಿವೃದ್ಧಿಗೆ 20 ಎಕರೆ ಕಾಯ್ದಿರಿಸಿ ಅದಕ್ಕೆ ನಕ್ಷೆ ತಯಾರಿಸಿ ಉಳಿದ ಜಾಗ ಸರ್ಕಾರಿ ಕಚೇರಿ ನಿರ್ಮಾಣಕ್ಕೆ ಬಳಸಿಕೊಳ್ಳುವಂತೆ 2015ರಲ್ಲಿ ಮತ್ತೆ ಆದೇಶ ನೀಡಿತ್ತು.


ಉದಯವಾಹಿನಿ ಚಿತ್ರ

ನ್ಯಾಯಾಲಯದ ಆದೇಶದಂತೆ ಮೊದಲು ಕೆರೆ 20 ಎಕರೆ ಜಾಗ ಗುರುತಿಸಿ ಅದಕ್ಕೆ ನಕ್ಷೆ ತಯಾರಿಸಿ ಕೆರೆ ಅಭಿವೃದ್ಧಿಪಡಿಸಿ ಉಳಿದಂತ ಜಾಗದಲ್ಲಿ ಸರ್ಕಾರಿ ಕಚೇರಿಗಳಿಗೆ ಅವಕಾಶ ಮಾಡಿಕೊಡಬೇಕೆಂದು ರೈತ ಸಂಘದಿಂದ ನಿರಂತರ ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು.

ಕೆರೆ ಉಳಿಸುವಂತೆ ನ್ಯಾಯಾಲಯವೇ ಸಾರ್ವಜನಿಕರಿಗೆ ಹೇಳುತ್ತಿದೆ. ಆದರೆ, ಪೇಟೆಕೆರೆ ವಿಚಾರದಲ್ಲಿ ನ್ಯಾಯಾಲಕ್ಕೆ ಕೊಟ್ಟಿರುವಂತಹ ನಾಲ್ಕು ಎಕರೆ ಜಾಗದ ಹಿಂಭಾಗದಲ್ಲಿ ಬಿಟ್ಟು ಕೆರೆಗೆ ಕಾಯ್ದಿರಿಸಿದ್ದ 20 ಎಕರೆ ಜಾಗದಲ್ಲಿ ನ್ಯಾಯಾಲಯ, ನ್ಯಾಯಾಲಕ್ಕೆ ಬೇಕಾದ ಸಂಪರ್ಕ ರಸ್ತೆ ನಿರ್ಮಿಸಿದೆ ಎಂದು ಆರೋಪಿಸಿದರು. ಕೆರೆಗೆ ಕಾಯ್ದಿರಿಸಿದ 20 ಎಕರೆ ಜಾಗದ ಗಡಿ ಇಲ್ಲಿವರೆಗೂ ಗುರುತಿಸಿಲ್ಲ, ಅಲ್ಲದೆ, ಕೆರೆ ಜಾಗ ಸುತ್ತಲೂ ಒತ್ತುವರಿಯಾಗಿದೆ. ಆ ಜಾಗವನ್ನು ಗುರುತಿಸಿ ಒತ್ತುವರಿ ತೆರವುಗೊಳಿಸುವ ಕೆಲಸ ಮಾಡುತ್ತಿಲ್ಲ ಎಂದು ದೂರಿದರು.

**ಜಿಲ್ಲಾಡಳಿತ ನ್ಯಾಯಾಲಯಕ್ಕೆ ನಾಲ್ಕು ಎಕರೆ ಜಾಗ ನೀಡಿದೆ. ಹೊಸದಾಗಿ ಕೋರ್ಟ್ ನಿರ್ಮಾಣ ಮಾಡಲು ನೀಡಿರುವ ನಾಲ್ಕು ಎಕರೆ ಬಳಕೆ ಮಾಡಿಕೊಳ್ಳುವುದಕ್ಕೆ ಯಾವುದೇ ಅಭ್ಯಂತರವಿಲ್ಲ. ಆದರೆ, ಕೆರೆಗೆ ಬಿಟ್ಟಿರುವ ಜಾಗದಲ್ಲಿ ನ್ಯಾಯಾಲಯದ ಕಟ್ಟಡ ನಿರ್ಮಾಣ ಮಾಡಿರುವುದು ಸರಿಯಾದ ಕ್ರಮವಲ್ಲ ಎಂದರು.**

---

# ಕೆಆರ್‌ಎಸ್ ಡ್ಯಾಂ ತುಂಬಿದರೂ ಕೆರೆ-ಕಟ್ಟೆಗೆ ನೀರಿಲ್ಲ

## ಮಳವಳ್ಳಿ, ಮದ್ದೂರು ತಾಲ್ಲೂಕಿನ ಕೊನೇ ಭಾಗದ ರೈತರಿಗೆ ನೀರು ತಲುಪಿಲ್ಲ, ಕೆರೆ- ಕಟ್ಟೆಗಳನ್ನು ತುಂಬಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ

• ಉದಯವಹಿ, ಮಂಡ್ಯ

ಕೃಷ್ಣರಾಜಸಾಗರ ಜಲಾಶಯ ಭರ್ತಿಯಾಗಿ ಒಂದೂವರೆ ತಿಂಗಳು ಕಳೆದರೂ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕಿನ ಕೊನೇ ಭಾಗದ ರೈತರಿಗೆ ನೀರು ತಲುಪಿಲ್ಲ. ಕೆರೆ- ಕಟ್ಟೆಗಳನ್ನು ತುಂಬಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ತಮಿಳುನಾಡಿಗೆ ಹೆಚ್ಚುವರಿಯಾಗಿ ನೀರು ಹರಿದು ಹೋಗುತ್ತಿದ್ದರೂ, ಇದನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನಗರದ ಜಿಲ್ಲಾ ಪಂಚಾಯಿತಿಯ ಕಾವೇರಿ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಅವರು ಮಾತನಾಡಿ, ನೀರು ನಿರ್ವಹಣೆಯಲ್ಲಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಎಡವಿದ್ದಾರೆ ಎಂದು ದೂರಿದರು.

ಸಚಿವ ಚಲುವರಾಯಸ್ವಾಮಿ ಮಾತನಾಡಿ, ಜಲಾಶಯ ಭರ್ತಿಯಾದ ಸಂದರ್ಭದಲ್ಲೂ ಕೆರೆ-ಕಟ್ಟೆಗಳನ್ನು ತುಂಬಿಸದೇ ಇರುವುದು ಸರಿಯಲ್ಲ. ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿನ ಕೊನೆಯ ಭಾಗದ ಕೆರೆಗಳಿಗೆ ನೀರು ತುಂಬಿಸಲು ನೀರು ಅಚ್ಚುಕಟ್ಟು ಪ್ರದೇಶಕ್ಕೆ ಹೋಗಿ ನಂತರ ಹೋಗಬೇಕು ಎಂದಿದ್ದರೆ ಅಥವಾ ಬೇರೆ ತೊಂದರೆಯಿದ್ದಲ್ಲಿ, ಆಯಾ ತಾಲ್ಲೂಕಿನ ಶಾಸಕರನ್ನು ಭೇಟಿ ಮಾಡಿ ತೊಂದರೆಗಳನ್ನು ನಿವಾರಿಸಬೇಕು ಎಂದರು.


ಉದಯವಾಹಿನಿ ಚಿತ್ರ

**ಶಾಸಕ ನರೇಂದ್ರಸ್ವಾಮಿ ಅಸಮಾಧಾನ**

**ಸೌಲಭ್ಯಕ್ಕೆ ಐಟಿ ಅಡ್ಡಿ**

**ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಮಾತನಾಡಿ, ರಾಜ್ಯದಲ್ಲಿ 1.20 ಲಕ್ಷ ಮಂದಿ ಐಟಿ ಮತ್ತು ಜಿ.ಎಸ್.ಟಿ ಪಾವತಿದಾರರು ಗೃಹಲಕ್ಷ್ಮಿ ಹಣ ತಡೆಹಿಡಿಯಲಾಗಿತ್ತು. ಈ ಕುರಿತಂತೆ ಸಭೆ ನಡೆಸಿ ದಾಖಲೆ ಪರಿಶೀಲಿಸಿ 59 ಸಾವಿರ ಮಹಿಳೆಯರು ಜಿ.ಎಸ್.ಟಿ ಪಾವತಿದಾರರಲ್ಲ ಎಂದು ತೀರ್ಮಾನಿಸಿ ಅವರಿಗೆ ಗೃಹಲಕ್ಷ್ಮಿ ಹಣ ಪಾವತಿಸಲು ಕ್ರಮವಹಿಸಲಾಗಿದೆ. ಇನ್ನುಳಿದ ಅರ್ಜಿಗಳನ್ನು ಸದ್ಯದಲ್ಲೇ ಪರಿಶೀಲಿಸಲಾಗುವುದು ಎಂದರು.**

**66 ಮನೆಗಳಿಗೆ ಹಾನಿ:** ಜಿಲ್ಲೆಯಲ್ಲಿ ಈ ಬಾರಿ ಮಳೆಯಿಂದ 4 ಸಂಪೂರ್ಣ ಶಿಥಿಲ, 60 ಭಾಗಶಃ ಶಿಥಿಲ ಸೇರಿದಂತೆ ಒಟ್ಟು 66 ಮನೆಗಳಿಗೆ ಹಾನಿಯಾಗಿದೆ ಎಂದು ಜಿಲ್ಲಾಧಿಕಾರಿ ಕುಮಾರ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಕೊಡುತ್ತಿರುವ ಅನುದಾನ ಕಡಿಮೆಯಿದೆ. ಹೀಗಾಗಿ ಪೂರ್ಣ ಶಿಥಿಲಗೊಂಡ ಮನೆಯ ಸಂತ್ರಸ್ತರಿಗೆ ರಾಜೀವ್‌ಗಾಂಧಿ ವಸತಿ ಯೋಜನೆಯಡಿ ಸೌಲಭ್ಯ ಕಲ್ಪಿಸಬೇಕು. ಮನೆ ಬಿದ್ದ ಸಂದರ್ಭದಲ್ಲಿ ಅಧಿಕಾರಿಗಳು ಕೂಡಲೇ ಸರ್ವೆ ಮಾಡಿಸಿ, ವಾರದೊಳಗೆ ಪರಿಹಾರ ನೀಡಬೇಕು' ಎಂದು ತಾಕೀತು ಮಾಡಿದರು.ಮಂಡ್ಯ ಜಿಲ್ಲೆಯಲ್ಲಿ 32,899 ಹೆಕ್ಟೇರ್ ಡೀಮ್ಸ್ ಅರಣ್ಯ ಪ್ರದೇಶವಿದ್ದು, ಈ ಪ್ರದೇಶವನ್ನು ಕಂದಾಯ, ಅರಣ್ಯ ಇಲಾಖೆಯಿಂದ ಒಂದು ತಿಂಗಳ ಅವಧಿಯಲ್ಲಿ ಸಮೀಕ್ಷೆ ನಡೆಸಿ, ನ್ಯಾಯಾಲಯಕ್ಕೆ ವರದಿ ನೀಡಬೇಕಿರುತ್ತದೆ. ಇದನ್ನು ನಿಖರವಾಗಿ ಸಮೀಕ್ಷೆ ನಡೆಸಿ ವರದಿ ನೀಡಿ ಎಂದರು. ಜಿಲ್ಲೆಯಲ್ಲಿ ರಸಗೊಬ್ಬರದ ಕೊರತೆ ಇಲ್ಲ. ಆದರೆ ಕೃತಕ ಅಭಾವ ಸೃಷ್ಟಿಸುವ ಸಾಧ್ಯತೆ ಇರುತ್ತದೆ. ರಸಗೊಬ್ಬರ ಮಾರಾಟ ಸೊಸೈಟಿ, ಮಾರಾಟಗಾರರು ದಾಸ್ತಾನು ವಿವರಗಳ ಬಗ್ಗೆ ಫಲಕ ಪ್ರದರ್ಶಿಸಬೇಕು. ಯಾವುದೇ ಅಕ್ರಮ ದಾಸ್ತಾನು ಕಂಡುಬಂದಲ್ಲಿ ಅಧಿಕಾರಿಗಳು ದಾಳಿ ನಡೆಸಿ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ನಿರ್ದೇಶನ ನೀಡಿದರು.

**ಆರ್‌ಟಿಐ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ಮಹಿಳಾ ಅಧಿಕಾರಿಗಳಿಗೆ ಕಿರುಕುಳ ನೀಡಿ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ. ಇಂಥವರ ವಿರುದ್ಧ ಎಸ್ಪಿ ಅವರು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು.**

**– ಪಿ.ಎಂ.ನರೇಂದ್ರಸ್ವಾಮಿ ಮಳವಳ್ಳಿ ಶಾಸಕ**

**ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಗಳಲ್ಲಿ ಅಪಘಾತ ಹೆಚ್ಚಾಗುತ್ತಿವೆ. ಸರ್ವಿಸ್ ರಸ್ತೆಗಳಿಗೂ ಸಿಸಿಟಿವಿ ಕ್ಯಾಮೆರಾ ಹಾಕಿಸಿ ಅಪೂರ್ಣ ಕಾಮಗಾರಿ ಪೂರ್ಣಗೊಳಿಸಿ.**

**–ರಮೇಶ ಬಂಡಿಸಿದ್ದೇಗೌಡ ಶ್ರೀರಂಗಪಟ್ಟಣ ಶಾಸಕ'ಕೃತಕ ಅಭಾವ ಸೃಷ್ಟಿಸಿದರೆ ಕ್ರಮ**

---

## ಮಿನಿ ನ್ಯೂಸ್

### 'ಮತ ಕಳವು' ವಿರುದ್ಧ ನಾಳೆ ಹೋರಾಟ: ಸಚಿವ ಜಿ.ಪರಮೇಶ್ವರ

• ಉದಯವಾಹಿನಿ, ತುಮಕೂರು

ಮತ ಕಳವು ವಿರೋಧಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಆ. 5ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯ ಜನರು ಭಾಗವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಮನವಿ ಮಾಡಿದರು. ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಕಾಂಗ್ರೆಸ್ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಭಾಗವಹಿಸುವ ಮೂಲಕ ರಾಹುಲ್ ಗಾಂಧಿ ಕೈ ಬಲಪಡಿಸಬೇಕು ಎಂದು ಹೇಳಿದರು. ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಸಮಯದಲ್ಲಿ 35 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿತ್ತು.

ಈಗ ಬಿಹಾರದಲ್ಲಿ 65 ಲಕ್ಷ ಹೆಸರು ತೆಗೆಯಲಾಗಿದೆ. ಈ ರೀತಿ ಮಾಡುವುದರಿಂದ ಕಾಂಗ್ರೆಸ್ ಅಭ್ಯರ್ಥಿಗಳು ಸೋಲುವಂತಾಗಿದೆ. ಜತೆಗೆ ವಿದ್ಯುನ್ಮಾನ ಮತ ಯಂತ್ರ ಬಳಸಿಕೊಂಡು ವಂಚಿಸಲಾಗುತ್ತಿದೆ. ಚುನಾವಣೆ ಅಕ್ರಮಗಳ ಬಗ್ಗೆ 2014ರಿಂದಲೂ ಪ್ರತಿಭಟಿಸುತ್ತಾ ಬಂದಿದ್ದರೂ ಚುನಾವಣಾ ಆಯೋಗ ನಿರ್ಲಿಪ್ತವಾಗಿದೆ. ಹಾಗಾಗಿ ಮತ ಕಳವಿನ ವಿರುದ್ಧ ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದು ಸ್ಪಷ್ಟಪಡಿಸಿದರು. ವಿವಿಧ ನಿಗಮ, ಮಂಡಳಿಗೆ ನಾಮನಿರ್ದೇಶನ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಒಂದು ವಾರದಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಗ್ಯಾರಂಟಿ ಭರವಸೆಗಳಿಂದ ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬಂದಿದೆ ಎಂದು ಹೇಳುವುದಿಲ್ಲ. ಜನರಿಗೆ ಕೊಟ್ಟಿದ್ದ ಭರವಸೆ ಉಳಿಸಿಕೊಳ್ಳುವ ಸಲುವಾಗಿ ಗ್ಯಾರಂಟಿ ಯೋಜನೆ ಜಾರಿ ಮಾಡಲಾಗಿದೆ. ಇದರಿಂದ ಜನರ ಆರ್ಥಿಕ ಮಟ್ಟ ಹೆಚ್ಚಾಗಿದ್ದು, ರಾಜ್ಯದ ತಲಾ ಆದಾಯವೂ ಏರಿಕೆಯಾಗಿದೆ. ಮುಂದಿನ ಬಜೆಟ್ ನಂತರ ಆರ್ಥಿಕ ತೊಂದರೆಗಳು ದೂರವಾಗಲಿವೆ ಎಂದು ತಿಳಿಸಿದರು. ಬ್ಲಾಕ್ ಕಾಂಗ್ರೆಸ್ ಘಟಕ, ಜಿಲ್ಲಾ ಘಟಕ ಮತ್ತಷ್ಟು ಸಕ್ರಿಯವಾಗಬೇಕು. ಪಕ್ಷದ ಸಾಧನೆಗಳನ್ನು ಜನರಿಗೆ ತಲುಪಿಸಬೇಕು ಎಂದರು.

### ಗೊಟ್ಟಿಗೆರೆ; ಕೆರೆ ಸಂರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ, ಕುಣಿಗಲ್

ತಾಲ್ಲೂಕಿನ ಗೊಟ್ಟಿಗೆರೆ ಕೆರೆ ಸಂರಕ್ಷಣೆಗೆ ಆಗ್ರಹಿಸಿದ ಗ್ರಾಮಸ್ಥರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ರಸ್ತೆ ತಡೆದು ಪ್ರತಿಭಟನೆಗೆ ಮುಂದಾಗಿದ್ದು, ಪೊಲೀಸ್ ಅಧಿಕಾರಿಗಳ ಮನವಿಗೆ ಸ್ಪಂದಿಸಿ ಪ್ರತಿಭಟನೆ ಹಿಂಪಡೆದಿದ್ದಾರೆ. ಪ್ರತಿಭಟನೆಯ ನೇತೃತ್ವವಹಿಸಿ ಮಾತನಾಡಿದ ಗ್ರಾಮ ಪಂಚಾಯಿತಿ ಸದಸ್ಯ ಮುರಳಿ, ತಾಲ್ಲೂಕಿನ ಅಂಚೇಪಾಳ್ಯ ಕೈಗಾರಿಕಾ ಪ್ರದೇಶದ ಕಾರ್ಖಾನೆಗಳ ರಾಸಾಯನಿಕ ತ್ಯಾಜ್ಯವನ್ನು ಗೊಟ್ಟಿಗೆರೆ ಕೆರೆಗೆ ಬಿಡುತ್ತಿರುವ ಕಾರಣ ಕೆರೆ ಕಲುಷಿತಗೊಂಡು ಸುತ್ತುಮುತ್ತಲ ಗ್ರಾಮಗಳಲ್ಲಿ ಅನಾರೋಗ್ಯಕರ ವಾತಾವರಣ ನಿರ್ಮಾಣವಾಗಿದೆ.

ಈ ವ್ಯಾಪ್ತಿಯಲ್ಲಿ ಏಳು ಕೊಳವೆಬಾವಿಗಳನ್ನು ಕೊರೆದಿದ್ದರೂ ನೀರು ಕುಡಿಯಲು, ಬಳಕೆಗೂ ಯೋಗ್ಯವಾಗಿಲ್ಲ ಎಂದು ಸಂಬಂದಪಟ್ಟ ಇಲಾಖೆಯ ವರದಿಗಳು ಬಂದಿವೆ. ಜನರು ಚರ್ಮರೋಗ ಸೇರಿದಂತೆ ಇತರೆ ರೋಗಗಳಿಂದ ಬಳಲುತ್ತಿದ್ದಾರೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದ್ದರೂ, ಪ್ರಯೋಜನವಾಗದ ಕಾರಣ ಕೆರೆ ಸಂರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಿದೆ ಎಂದರು.

ಸ್ಥಳಕ್ಕೆ ಸಿಪಿಐ ನವೀಣ್ ಗೌಡ, ತಾಲ್ಲೂಕು ಆರೋಗ್ಯಾಧಿಕಾರಿ ಮರಿಯಪ್ಪ ಭೇಟಿ ನೀಡಿ ಕಂದಾಯ, ಕೈಗಾರಿಕೆ ಮತ್ತು ಪರಿಸರ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪರಿಹಾರಕ್ಕೆ ಕ್ರಮಕೂಗೊಳ್ಳುವ ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ಹಿಂಪಡೆದರು.

### ಪೊಲೀಸರಿಂದ ತಪಾಸಣೆ 51 ಮಂದಿ ಗಾಂಜಾ ಸೇವನೆ ಪತ್ತೆ

• ಉದಯವಾಹಿನಿ, ಮೈಸೂರು

ನಗರದಲ್ಲಿ ಮಾದಕವಸ್ತು ತಯಾರಿಕಾ ಘಟಕ ಪತ್ತೆಯಾದ ಬಳಿಕ ಚುರುಕುಗೊಂಡಿರುವ ಪೊಲೀಸ್ ಇಲಾಖೆಯು ಇಲ್ಲಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ನಗರದ ವಿವಿಧ ಭಾಗಗಳ 259 ಮಂದಿಯನ್ನು ಮಾದಕವಸ್ತು ಸೇವನೆ ಪತ್ತೆಗಾಗಿ ತಪಾಸಣೆ ನಡೆಸಿದ್ದು, 51 ಮಂದಿ ಗಾಂಜಾ ಸೇವಿಸಿರುವುದು ಪತ್ತೆಯಾಗಿದೆ. ನಾಲ್ಕು ದಿನಗಳ ಕಾರ್ಯಾಚರಣೆಯಲ್ಲಿ 541 ಮಂದಿಯ ತಪಾಸಣೆ ನಡೆದಿದ್ದು, 189 ಮಂದಿ ಗಾಂಜಾ ಸೇವಿಸಿರುವುದು ದೃಢಪಟ್ಟಿತ್ತು.

ಮಾದಕ ವಸ್ತು ಮಾರಾಟ, ಸಾಗಣೆ ಮಾಡುವ ಪೆಡ್ಲರ್‌ಗಳ ವಿರುದ್ಧ 11 ಪ್ರಕರಣ ದಾಖಲಿಸಲಾಗಿದೆ. ಸೇವನೆ ದೃಢಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಕಾರ್ಯಾಚರಣೆ ಮುಂದುವರಿಯಲಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಾ ಲಾಟ್ಕರ್ ತಿಳಿಸಿದರು. ಮಂಡಿ, ಉದಯಗಿರಿ, ಕೃಷ್ಣರಾಜ, ನಜರ್‌ಬಾದ್ ವ್ಯಾಪ್ತಿಯಲ್ಲಿ ಅಧಿಕ ಜನರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಕೆ.ಆರ್.ಆಸ್ಪತ್ರೆ ವೈದ್ಯಕೀಯ ಸಿಬ್ಬಂದಿಯ ಸಹಕಾರ ಪಡೆಯಲಾಗಿದೆ. ಗಾಂಜಾ ಹೊರತುಪಡಿಸಿ ಇತರ ಮಾದಕ ವಸ್ತುಗಳು ಪತ್ತೆಗಾಗಿಲ್ಲ ಎಂದು ಮಾಹಿತಿ ನೀಡಿದರು.

### ನರೇಗಾ ಅನುದಾನ ಕಡಿತ, ಅಭಿವೃದ್ಧಿಗೆ ಮಾರಕ: ಎಂ.ಪುಟ್ಟಮಾದು


• ಉದಯವಾಹಿನಿ, ಹಲಗೂರು

ಬಡವರು ಮತ್ತು ಗ್ರಾಮೀಣ ಪ್ರದೇಶದ ಜನರ ವಲಸೆ ತಪ್ಪಿಸಲು ಆರಂಭವಾದ ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಸರ್ಕಾರ ಪ್ರಸ್ತುತ ವರ್ಷ ಅನುದಾನ ಕಡಿತ ಮಾಡಿದ್ದು, ಬಡಜನರ ಹೊಟ್ಟೆ ಮೇಲೆ ಹೊಡೆಯುತ್ತಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಪುಟ್ಟಮಾದು ಆರೋಪಿಸಿದರು. ಸಮೀಪದ ನಡಕಲಪುರ ಗೇಟ್‌ನಲ್ಲಿರುವ ನಡುಮಾರ್ಗದ ಬಸವೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಆಯೋಜಿಸಿದ್ದ ಹೋಬಳಿ ಮಟ್ಟದ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಈ ಹಿಂದೆ ಕಾಂಗ್ರೆಸ್ ಆಡಳಿತದಲ್ಲಿದ್ದಾಗ ನರೇಗಾ ಯೋಜನೆಗೆ 1.25 ಲಕ್ಷ ಕೋಟಿ ಅನುದಾನ ನೀಡಿತ್ತು. ಬಿಜೆಪಿ ಸರ್ಕಾರ ಕಳೆದ ಸಾಲಿನಲ್ಲಿ 88 ಸಾವಿರ ಕೋಟಿ ಅನುದಾನ ನೀಡಿತ್ತು. ದೇಶದ ಅಭಿವೃದ್ಧಿಗೆ 2.25 ಲಕ್ಷ ಕೋಟಿ ಅನುದಾನ ಅವಶ್ಯವಿದೆ. ಆದರೆ, ಅದನ್ನು ಈ ಬಾರಿ 86 ಸಾವಿರ ಕೋಟಿಗೆ ತಗ್ಗಿಸಲಾಗಿದೆ. ಇದು ದೇಶದ ಅಭಿವೃದ್ಧಿಗೆ ಹಿನ್ನಡೆಯಾಗಲಿದೆ ಎಂದರು. ಈಗಾಗಲೇ ಕೇಂದ್ರ ಸರ್ಕಾರ 1.77 ಲಕ್ಷ ಕೋಟಿ ಸಾಲ ಮಾಡಿದ್ದು, ದೇಶದ ಪ್ರತಿ ಪ್ರಜೆಯ ಮೇಲೆ 1.27 ಲಕ್ಷ ಸಾಲದ ಹೊರೆ ಹೇರಲಾಗಿದೆ. ಸಾಲದಿಂದ ಅತೀ ಶ್ರೀಮಂತರು, ಉದ್ಯಮಿಗಳಿಗೆ ಅನುಕೂಲ ಆಗಿದೆಯೇ ಹೊರತು, ಶ್ರೀಸಾಮಾನ್ಯನಿಗೆ ಇದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ದೂರಿದರು.

ಅಂತರಾಳದಿಂದ..
EDITORIAL


# ಆಪರೇಷನ್ ಸಿಂಧೂರ ಫಲಶ್ರುತಿ:
## ದಿಕ್ಕುತಪ್ಪಿದ ಚರ್ಚೆ, ಅಸ್ಪಷ್ಟ ಉತ್ತರ



**ಆಪರೇಷನ್ ಸಿಂಧೂರ, ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಕುರಿತು ಸಂಸತ್ತಿನಲ್ಲಿ ನಡೆದ ಚರ್ಚೆಯು ರಾಜಕೀಯ ಜಿದ್ದಾಜಿದ್ದಿಯ ಮಾತುಗಳಿಗೆ ಸೀಮಿತಗೊಂಡಿತೇ ಹೊರತು, ಚರ್ಚೆಯ ವಿಷಯದ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುವಲ್ಲಿ ವಿಫಲವಾಗಿದೆ. ಪಾಕಿಸ್ತಾನದೊಂದಿಗೆ ಸಂಘರ್ಷ ಜಾರಿಯಲ್ಲಿದ್ದ ಸಂದರ್ಭದಲ್ಲಿ, ಭಾರತದ ಸೇನಾಪಡೆಯ ಮುಖ್ಯಸ್ಥರು ಮತ್ತು ಅಧಿಕಾರಿಗಳು ಕಾರ್ಯಾಚರಣೆಯ ಕೆಲವು ವಿವರಗಳನ್ನು ದೇಶಕ್ಕೆ ತಿಳಿಸಿದ್ದರು.**

ಆ ಸೀಮಿತ ಮಾಹಿತಿಯ ಹೊರತಾಗಿ, ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಗುರಿ ಮತ್ತು ಆ ಕಾರ್ಯಾಚರಣೆಯಲ್ಲಿ ದೇಶಗಳಿಸಿದ್ದು ಹಾಗೂ ಕಳೆದುಕೊಂಡಿದ್ದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುವುದು ಸರ್ಕಾರದ ಹೊಣೆಗಾರಿಕೆಯಾಗಿತ್ತು. ಮಹತ್ವದ ಕಾರ್ಯಾಚರಣೆಯ ಬಗ್ಗೆ ದೇಶಕ್ಕೆ ತಿಳಿಸಲು ಸಂಸತ್ತು ಸರಿಯಾದ ವೇದಿಕೆಯೂ ಆಗಿತ್ತು ಹಾಗೂ ಆ ಚರ್ಚೆಯ ನೇತೃತ್ವವನ್ನು ಸರ್ಕಾರವೇ ವಹಿಸಿಕೊಳ್ಳಬೇಕಾಗಿತ್ತು. ಆದರೆ, ವಿರೋಧ ಪಕ್ಷದ ಒತ್ತಾಯದ ಮೇರೆಗೆ ಕೊನೆಗೂ ಚರ್ಚೆ ನಡೆದರೂ, ಅದು ವಿಷಯದ ಬಗ್ಗೆ ಬೆಳಕು ಚೆಲ್ಲುವ ಬದಲು ರಾಜಕೀಯ ಕೆಸರೆರಚಾಟದಲ್ಲಿ ಕೊನೆಗೊಂಡಿತು. ಪಹಲ್ಗಾಮ್‌ನಲ್ಲಿನ ಭದ್ರತಾ ವೈಫಲ್ಯ, 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯ ಸ್ವರೂಪ, ಇದ್ದಕ್ಕಿದ್ದಂತೆ ಘೋಷಣೆಯಾದ ಕದನ ವಿರಾಮ ಮತ್ತು ಸಂಘರ್ಷದಲ್ಲಿ ಸೇನೆಯ ಸಾಧನೆ ಹಾಗೂ ಸೇನೆಗಾದ ನಷ್ಟದ ಬಗ್ಗೆ ವಿರೋಧ ಪಕ್ಷಗಳು ಪ್ರಶ್ನೆ ಎತ್ತಿದ್ದವು. ಈ ಪ್ರಶ್ನೆಗಳಿಗೆ ನೇರ ಉತ್ತರ ಕೊಡುವ ಪ್ರಯತ್ನವನ್ನೇ ಸರ್ಕಾರ ಮಾಡಲಿಲ್ಲ. ವಿರೋಧ ಪಕ್ಷಗಳು ತಪ್ಪು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು. ಭಾರತದ ಐದು ರಫೇಲ್ ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ ಎಂದು ಪಾಕಿಸ್ತಾನ ಹೇಳಿರುವುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ವಿರೋಧ ಪಕ್ಷ ಕೇಳಿದ ಪ್ರಶ್ನೆಗೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಆಡಳಿತ ಪಕ್ಷದ ಯಾರೊಬ್ಬರೂ ಸ್ಪಷ್ಟ ಉತ್ತರ ನೀಡಲಿಲ್ಲ; ವಿಮಾನ ಕಳೆದುಕೊಂಡಿದ್ದನ್ನು ಒಪ್ಪಿಕೊಳ್ಳಲೂ ಇಲ್ಲ, ನಿರಾಕರಿಸಲೂ ಇಲ್ಲ.

ಕದನ ವಿರಾಮ ಘೋಷಣೆಯಾದುದು ತಮ್ಮಿಂದಲೇ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ಹೇಳಿಕೊಳ್ಳುತ್ತಿರುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ದೊರೆತ ಉತ್ತರಗಳಲ್ಲೂ ಸ್ಪಷ್ಟತೆಯಿರಲಿಲ್ಲ. ಕಾರ್ಯಾಚರಣೆ ನಿಲ್ಲಿಸುವಂತೆ ಯಾವ ವಿದೇಶೀ ನಾಯಕರೂ ಭಾರತವನ್ನು ಕೇಳಲಿಲ್ಲ ಎನ್ನುವ ಪ್ರಧಾನಿ ಹೇಳಿಕೆ. ಕದನ ವಿರಾಮಕ್ಕೆ ಸಮರ್ಪಕ ಕಾರಣ ಆಗಿರಲಿಲ್ಲ. ಪಹಲ್ಗಾಮ್‌ನಲ್ಲಿನ ಭದ್ರತಾ ಲೋಪಕ್ಕೆ ಯಾರನ್ನೂ ಹೊಣೆಗಾರರನ್ನಾಗಿ ಏಕೆ ಮಾಡಿಲ್ಲ ಎನ್ನುವ ಪ್ರಶ್ನೆಗೂ ಸಮಾಧಾನಕರ ಉತ್ತರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. 'ಆಪರೇಷನ್ ಸಿಂಧೂರ' ಚರ್ಚೆಯ ಕೇಂದ್ರವಾಗಿದ್ದರೂ, ಕಾಂಗ್ರೆಸ್ ಸರ್ಕಾರಗಳ ಅವಧಿಯಲ್ಲಿನ ನೀತಿಗಳಲ್ಲಿ ದೋಷಗಳಿದ್ದವು ಎಂದು ಎತ್ತಿ ಆಡುವುದರಲ್ಲಿ ಸರ್ಕಾರ ಉತ್ಸಾಹ ವ್ಯಕ್ತಪಡಿಸಿತು. ಕಾಂಗ್ರೆಸ್ ಪಕ್ಷದ ತಪ್ಪುಗಳನ್ನು ನೆನಪಿಸುವುದರ ಜೊತೆಗೆ, ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರನ್ನು ಟೀಕಿಸಲಾಯಿತು. ಭಾರತ ಮತ್ತು ಪಾಕಿಸ್ತಾನದ ವಿಭಜನೆ ಹಾಗೂ 1971ರ ಯುದ್ಧದ ಸಂದರ್ಭದಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರದ ಹೊಣೆಗಾರಿಕೆಯನ್ನು ಟೀಕಿಸಿ, ಕಾಂಗ್ರೆಸ್ ಅನ್ನು ಪಾಕಿಸ್ತಾನದ ಬೆಂಬಲಿಗ ಎಂದು ಸರ್ಕಾರ ಕರೆಯಿತು. ರಾಷ್ಟ್ರದ ಸುರಕ್ಷತೆಗೆ ಸಂಬಂಧಿಸಿದಂತೆ ನಡೆಯಬೇಕಾಗಿದ್ದ ಗಂಭೀರ ಚರ್ಚೆ, ರಾಜಕೀಯ ಆರೋಪಗಳ ಆಡುಂಬೊಲವಾದುದು ದುರದೃಷ್ಟಕರ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿದೇಶಾಂಗ ನೀತಿ ಹಾಗೂ ವಿದೇಶಗಳೊಂದಿಗಿನ ಸಂಬಂಧಗಳು ಹಾಗೂ ಸಂಘರ್ಷದ ಸಂದರ್ಭಗಳಲ್ಲಿ ಪಕ್ಷ ರಾಜಕೀಯವನ್ನು ಮೀರಿದ ರಾಜಕೀಯ ಒಮ್ಮತವನ್ನು ದೇಶ ಕಂಡಿದೆ. ಆದರೆ, ಆ ಒಮ್ಮತ ಈಗ ಕಾಣಿಸುತ್ತಿಲ್ಲ. ಈ ಒಡಕಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಪಾತ್ರವೂ ಇರಬಹುದಾದರೂ, ದೇಶದ ಸುರಕ್ಷತೆಗೆ ಸಂಬಂಧಿಸಿದ ಮಹತ್ವಪೂರ್ಣ ಚರ್ಚೆಯನ್ನು ರೂಪಿಸುವಲ್ಲಿ ಕೇಂದ್ರ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಪ್ರದರ್ಶಿಸುವಲ್ಲಿ ವಿಫಲವಾಗಿದೆ ಎಂದೇ ಹೇಳಬೇಕಾಗಿದೆ.



# ರಾಮಾಯಣ



## ಇಶ್ವಾಕುವಂಶದ ಪರಂಪರೆ

• ಹಿಂದಿನ ಸಂಚಿಕೆಯಿಂದ

### 111 ನೆಯ ಅಧ್ಯಾಯ

ಸಗರ ಚಕ್ರವರ್ತಿಗೆ ಅಸಮಂಜನೆಂಬ ಕುಮಾರನಾದನು. ಆತನು ಅತ್ಯಂತ ದುರಾಚಾರಿಯಾಗಿರಲು ಸಗರನು ಆತನನ್ನು ದೇಶತ್ಯಾಗಮಾಡಿಸಿದನು. ಅಸಮಂಜನಿಗೆ ಅಂಶುಮಂತನೆಂಬ ಕುಮಾರನಾದನು. ಆತನ ಮಗನು ದಿಲೀಪ. ಅವನ ಮಗನು ಭಗೀರಥ, ಅವನ ಮಗನು ಕಕುತ್ಮ, ಆತನ ಮಗನು ರಘುಚಕ್ರವರ್ತಿ, ಆತನ ಮಗನು ಕಲ್ಮಾಷಪಾದ. ಆತನಿಗೆ ಸೌದಾಸನೆಂಬ ಹೆಸರೂ ಉಂಟು, ಕಲ್ಮಾಷಪಾದನ ಮಗನು ಶಂಖಣ. ಅವನಿಗೆ ಸುದರ್ಶನನು ಜನಿಸಿದನು. ಆತನಿಗೆ ಅಗ್ನಿವರ್ಣನೂ ಅವನಿಗೆ ಶೀಘ್ರಗನೂ ಆತನಿಗೆ ಮರುವೂ ಆತನಿಗೆ ಪ್ರಶುಶ್ರುಕನೂ ಆತನಿಗೆ ಅಂಬರೀಷನ ಉದಯಿಸಿದರು. ಅಂಬರೀಷನ ಮಗನು ನಹುಷ. ಅವನಿಗೆ ಅತ್ಯಂತ ಧಾರ್ಮಿಕನಾದ ನಾಭಾಗನು ಜನಿಸಿದನು. ಅವನಿಗೆ ಅಜ ಸುವ್ರತ ಎಂಬ ಕುಮಾರರಿಬ್ಬರು ಜನಿಸಿದರು. ಅಜಚಕ್ರವರ್ತಿಗೆ ದಶರಥಮಹಾರಾಯನು ಜನಿಸಿದನು. ದಶರಥಮಹಾರಾಯನಿಗೆ ನೀನು ಜೇಷ್ಠಪುತ್ರನಾಗಿ ಅವತರಿಸಿದೆ. ನಾನು ಹೇಳಿದ ಇಕ್ಷಾಕುರಾಯನೇ ಮೊದಲಾಗಿ ಇದುವರೆಗೂ ನಿಮ್ಮ ವಂಶದಲ್ಲಿ ಜೇಷ್ಠ ಪುತ್ರರೇ ಪಟ್ಟಾಭಿಷಿಕ್ತರಾದರಲ್ಲದೆ ಕನಿಷ್ಠಪುತ್ರರು ರಾಜ್ಯಾಧಿಪತ್ಯವನ್ನು ಮಾಡಲಿಲ್ಲ. ಅದ್ದರಿಂದ ನೀನು ಪಟ್ಟಾಭಿಷೇಕವನ್ನು ಕೈಕೊಂಡು ರಾಜ್ಯವನ್ನು ಪರಿಪಾಲಿಸು ! ಶ್ರೀರಾಮ, ಅಂಥ ಇಕ್ಷಾಕುವಂಶದಲ್ಲಿ ಅವತರಿಸಿದ ನೀನು ನಿನ್ನ ಕುಲಾಚಾರವನ್ನು ವಿಚಾರಿಸಿ ನಿಮ್ಮ ತಂದೆಯಾದ ದಶರಥರಾಯನ ಹಾಗೆ ಕೀರ್ತಿವಂತನಾಗಿ ನವರತ್ನಗಳಿಂದ ತುಂಬಿರುವ ಸಮುದ್ರಪರ್ಯಂತವಾದ ಭೂಮಂಡಲವನ್ನಾಳಿಕೊಂಡು ಸುಖದಲ್ಲಿರು ಎಂದು ವಸಿಷ್ಠನು ಹೇಳಿದನು.

**ಶ್ರೀ ರಾಮನು ಆಯೋಧ್ಯೆಗೆ ಬರುವುದಿಲ್ಲವೆಂದು ಹೇಳಿದ್ದು**

ಆಮೇಲೆ ವಸಿಷ್ಠ ಮುನೀಶ್ವರನು ಮತ್ತೆ ಶ್ರೀರಾಮನನ್ನು ಕುರಿತು ಧರ್ಮರಹಸ್ಯವುಳ್ಳ ಮಾತುಗಳಿಂದ ಹೀಗೆ ನುಡಿದನು: ಶ್ರೀರಾಮ, ಲೋಕದಲ್ಲಿ ಪುರುಷನಿಗೆ ಆಚಾರ ತಂದೆ ತಾಯಿ –ಈ ಮೂವರೂ ಗುರುಗಳಾಗಿರುವರು. ಅವರಲ್ಲಿ ತಂದೆಯು ಶರೀರವನ್ನು ಕೊಡುವನು. ಆಚಾರ್ಯನು ಜ್ಞಾನಬೋಧೆಯನ್ನು ಮಾಡುವನು. ತಾಯಿ ರಕ್ಷಿಸುವಳು. ಈ ಲೋಕದಲ್ಲಿಯೂ ವರಲೋಕದಲ್ಲಿಯೂ ಸುಖವನ್ನುಂಟುಮಾಡುವ ಸುಜ್ಞಾನವನ್ನು ಉಪದೇಶಿಸುವ ಆಚಾರ್ಯನೇ ಸದ್ಗುರುವೆನಿಸಿಕೊಳ್ಳುವನು. ನಾನು ನಿನ್ನ ತಂದೆಯಾದ ದಶರಥರಾಯನಿಗೂ ಆಚಾರ್ಯನಾಗಿದ್ದುದರಿಂದ ನಿನಗೆ ಗುರು. ಹೀಗೆ ಗುರುವಾದ ನನ್ನ ಮಾತನ್ನು ಕೇಳಿ ನಡೆದರೆ ನೀನು ಸನ್ಮಾರ್ಗವನ್ನು ಅತಿಕ್ರಮಿಸಿದವನಾಗುವುದಿಲ್ಲ. ಸಮಸ್ತ ಪೌರರೂ ಬ್ರಾಹ್ಮಣರೂ ಒಟ್ಟಾಗಿ ಹೇಳುವ ಮಾತನ್ನು ಕೇಳಿ ನಡೆದರೆ ಸನ್ಮಾರ್ಗವನ್ನು ಬಿಟ್ಟಹಾಗಲ್ಲ. ವೃದ್ಧೆಯಾಗಿ ಧರ್ಮಶೀಲೆಯಾದ ನಿನ್ನ ತಾಯಿಯ ಮಾತನ್ನು ಅತಿಕ್ರಮಿಸದಿದ್ದರೆ ಸನ್ಮಾರ್ಗವನ್ನತಿಕ್ರಮಿಸದಿರುವೆ. ನಿನ್ನನ್ನು ಆಯೋಧ್ಯಾಪಟ್ಟಣಕ್ಕೆ ಬರಹೇಳಿ ಪ್ರಾರ್ಥನೆ ಮಾಡುವ ಭರತನ ಮಾತನ್ನೂ ನನ್ನ ಮಾತನ್ನೂ ಮೀರಬೇಡ ಎಂದು ಹೇಳಿದನು.

ಮುಂದುವರಿಯುವುದು...

# ಬಿಸಿಲಿಗೆ ಕೈ ಕಪ್ಪಾಗಿದ್ಯಾ?
## ಬೆಳ್ಳಗಾಗಿಸಲು ಇದನ್ನು ಟ್ರೈ ಮಾಡಿ

ನಿಮ್ಮ ಕೈ ಕಪ್ಪಾಗಿದ್ಯಾ? ಯಾವುದೇ ದುಬಾರಿ ಉತ್ಪನ್ನಗಳನ್ನು ಬಳಸದೇ, ಕೇವಲ ಈ ಮನೆಮದ್ದಿನಿಂದ ನೀವು ನಿಮ್ಮ ಕೈಗಳ ಚರ್ಮವನ್ನು ಕ್ರಮೇಣ ಬೆಳ್ಳಗಾಗಿಸಬಹುದು. ಈ ನೈಸರ್ಗಿಕ ಪದಾರ್ಥಗಳು ಕೈಗಳಲ್ಲಿನ ಕಪ್ಪು ಕಲೆಯನ್ನು ನಿವಾರಿಸುತ್ತದೆ. ಮುಖದ ಹೊಳಪಿಗಾಗಿ, ಮುಖದ ಸೌಂದರ್ಯವನ್ನು ಹೆಚ್ಚಿಸಲು ನಾವು ಅನೇಕ ಉತ್ಪನ್ನಗಳು ಮನೆಮದ್ದುಗಳನ್ನು ಪ್ರಯತ್ನಿಸುತ್ತೇವೆ. ಆದರೆ ನೀವು ಎಂದಾದರೂ ಕೈಗಳ ಬಣ್ಣಗಳತ್ತ ಗಮನಹರಿಸಿದ್ದೀರಾ? ದಿನವಿಡೀ ಧೂಳು, ಬಿಸಿಲು ಮತ್ತು ರಾಸಾಯನಿಕ ಉತ್ಪನ್ನಗಳಿಗೆ ಒಡ್ಡಿಕೊಳ್ಳುವುದರಿಂದ ಕೈಗಳ ಚರ್ಮವು ಕಪ್ಪಾಗುತ್ತದೆ ಮತ್ತು ಡ್ರೈ ಆಗಲಾರಂಭಿಸುತ್ತದೆ. ಇದಕ್ಕಾಗಿ, ಕೈಗಳ ಚರ್ಮದ ಆರೈಕೆಯು ಮುಖದಷ್ಟೇ ಮುಖ್ಯವಾಗಿದೆ.

**ನಿಂಬೆ ಮತ್ತು ಜೇನುತುಪ್ಪದ ಪ್ಯಾಕ್** :ನಿಂಬೆ ನೈಸರ್ಗಿಕ ಬ್ಲೀಚಿಂಗ್ ಏಜೆಂಟ್ ಅನ್ನು ಹೊಂದಿದೆ. ಇದು ಚರ್ಮದ ಕಪ್ಪು ಕಲೆಗಳನ್ನು ಹಗುರಗೊಳಿಸುತ್ತದೆ. ಜೇನುತುಪ್ಪವು ಚರ್ಮವನ್ನು ತೇವಗೊಳಿಸುತ್ತದೆ.

1 ಟೀಚಮಚ ನಿಂಬೆ ರಸ ಮತ್ತು 1 ಟೀಚಮಚ ಜೇನುತುಪ್ಪವನ್ನು ಮಿಶ್ರಣ ಮಾಡಿ. ಇದನ್ನು 10 ರಿಂದ 15 ನಿಮಿಷಗಳ ಕಾಲ ಕೈಗಳ ಮೇಲೆ ಹಚ್ಚಿ ಕೈಗಳಿಂದ ಉಜ್ಜಿಕೊಳ್ಳಿ. ನಂತರ ಅದನ್ನು ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ.



**ಆಲೂಗಡ್ಡೆ ರಸ:** ಆಲೂಗಡ್ಡೆ ರಸವು ನೈಸರ್ಗಿಕವಾಗಿ ಚರ್ಮವನ್ನು ಹಗುರಗೊಳಿಸುತ್ತದೆ. ಹಸಿ ಆಲೂಗಡ್ಡೆಯನ್ನು ತುರಿದು ಅದರ ರಸವನ್ನು ತೆಗೆಯಿರಿ. ಈ ರಸವನ್ನು ಕೈಗಳಿಗೆ ಹಚ್ಚಿ 15 ನಿಮಿಷಗಳ ನಂತರ ತೊಳೆಯಿರಿ. ನಿಯಮಿತ ಬಳಕೆಯಿಂದ ಪರಿಣಾಮಕಾರಿಯಾಗಬಲ್ಲದು.

**ಕಡಲೆ ಹಿಟ್ಟು ಮತ್ತು ಮೊಸರಿನ ಸ್ಕಬ್:** ಕಡಲೆ ಹಿಟ್ಟು ಸ್ಕಬ್ ಆಗಿ ಕಾರ್ಯನಿರ್ವಹಿಸುತ್ತದೆ ಮತ್ತು ಮೊಸರು ಚರ್ಮವನ್ನು ಮೃದುಗೊಳಿಸುತ್ತದೆ. 2 ಟೀ ಚಮಚ ಕಡಲೆ ಹಿಟ್ಟಿನಲ್ಲಿ 1 ಚಮಚ ಮೊಸರು ಮತ್ತು ಒಂದು ಚಿಟಿಕೆ ಅರಿಶಿನವನ್ನು ಬೆರೆಸಿ. ಕೈಗಳಿಗೆ ಹಚ್ಚಿ ಒಣಗಿದ ನಂತರ ಉಜ್ಜಿಕೊಳ್ಳಿ. ಇದು ಕೈಯಲ್ಲಿನ ಕಂದು ಬಣ್ಣವನ್ನು ತೆಗೆದುಹಾಕುವಲ್ಲಿ ಪರಿಣಾಮಕಾರಿಯಾಗಿದೆ.

**ರಾತ್ರಿಯಲ್ಲಿ ಮಾಯಿಶ್ಚರೈಸರ್ ಮಾಡಲು ಮರೆಯಬೇಡಿ:** ಹಗಲಿನ ಧೂಳು ಮತ್ತು ಬಿಸಿಲಿಗೆ ಹೋದ ನಂತರ, ಕೈಗಳನ್ನು ಸ್ವಚ್ಛಗೊಳಿಸುವುದು ಮತ್ತು ಉತ್ತಮ ಮಾಯಿಶ್ಚರೈಸರ್ ಹಚ್ಚುವುದು ಬಹಳ ಮುಖ್ಯ. ನೀವು ತೆಂಗಿನ ಎಣ್ಣೆ, ಅಲೋವೆರಾ ಜೆಲ್ ಅಥವಾ ಬಾದಾಮಿ ಎಣ್ಣೆಯನ್ನು ಬಳಸಬಹುದು. ಇದು ಚರ್ಮದ ಬಣ್ಣವನ್ನು ಸುಧಾರಿಸುತ್ತದೆ ಮತ್ತು ಶುಷ್ಕತೆಯನ್ನು ತಡೆಯುತ್ತದೆ. ಈ ಮನೆಮದ್ದನ್ನು ನಿಯಮಿತವಾಗಿ ಅಳವಡಿಸಿಕೊಳ್ಳುವ ಮೂಲಕ, ನೀವು ರಾಸಾಯನಿಕಗಳನ್ನು ಬಳಸದೆಯೇ ಕೈಗಳ ಕಪ್ಪು ಬಣ್ಣವನ್ನು ನಿವಾರಿಸಬಹುದು.

# ನರಕ..!

ವಿಶ್ವಾಸ್.ಡಿ.ಗೌಡ



ಬದುಕಲು ಸಾಧ್ಯವಾಗದ ಸ್ಥಿತಿಯನ್ನು ಹೇಳಲು ಬಳಕೆಯಾಗುವ ಶಬ್ದವೆಂದರೆ ನರಕ, ನರಕ ಅನುಭವಿಸಿಬಿಟ್ಟೆ, ಅದೊಂದು ಭಯಾನಕ ನರಕ ಹೀಗೆಲ್ಲ ದೈನಿಕದಲ್ಲೂ ಬರಹದಲ್ಲೂ ಹೇಳುವುದು ಸಾಮಾನ್ಯ. ನರಕ ಎಲ್ಲರಿಗೂ ಗೊತ್ತಿರುವುದೇ . ಅದು ಜೀವಿ ಸತ್ತ ಮೇಲೆ ಅನುಭವಿಸಬೇಕಾದದ್ದು . ಬದುಕಿದಾಗ ಮಾಡುವ ಕರ್ಮಗಳು ಸಾವಿನ ಅನಂತರ ಫಲಿಸುವಾಗ ಸ್ವಗ, ನರಕ ಪುನರ್ಜನ್ಮ , ಪುನರ್ಜನ್ಮದಲ್ಲಿ ಏಳು ಬೀಳು ಇವೆಲ್ಲ ಉಂಟಾಗುವಂತಹದ್ದು. ಇಂದೇನು ಮಾಡುತ್ತೇವೋ ಅದು ನಾಳೆ ಪರಿಣಾಮಕಾರಿಯಾಗುತ್ತದೆ. ಇಂದು ನೆಟ್ಟ ಗಿಡ ಮುಂದೆ ಫಲ ಕೊಡುತ್ತದೆ. ಯಾವ ಬೀಜ ಬಿತ್ತುವವೋ ಆಯಾ ಫಲ ಲಭ್ಯ, ಹಣ್ಣು ನೆಟ್ಟರೆ ಹಣ್ಣು , ಮುಳ್ಳು ನೆಟ್ಟರೆ ಮುಳ್ಳು ಈ ಕರ್ಮದ ಸಿದ್ಧಾಂತ ನಮಗೆ ನರಕದ ಅನುಭವವನ್ನು ಹೇಳುತ್ತದೆ. ನರಕ ಶಬ್ದಕ್ಕೆ ಕ್ಲೇಶವನ್ನು ಉಂಟುಮಾಡುವುದು ಎಂದು ಅರ್ಥ. ತಪ್ಪು ಮಾಡಿ ಸತ್ತಾಗ ಆ ಲೋಕದಲ್ಲಿ ಜೀವಿ ಕಷ್ಟಪಡಬೇಕಾಗುವುದರಿಂದ ಅದು ನರಕ. ಪಾಪಿಗಳಿಗೆ ಶಿಕ್ಷೆ ಕೊಡುವ ಸ್ಥಳವೇ ನರಕ. ಇಂತಹ ಶಿಕ್ಷಾಸ್ಥಾನಗಳು ಕೋಟಿ ಕೋಟಿ ಇವೆಯಾದರೂ ನಲವತ್ತು ನರಕಗಳು ಪ್ರಮುಖ. ಅವೀಚಿ, ಕೃಮಿಭಕ್ಷ್ಯ, ವೈತರಣೀ , ಶಾಲ್ಮಲಿ, ರೌರವ , ಮಹಾರೌರವ, ಉಚ್ಛ್ವಾಸ, ಯುಗ್ಧಪರ್ವತ, ನಿರುಚ್ಛ್ವಾಸ ಪೂತಿಮಾಂಸ, ಕ್ರಕಚ್ಛೇದ, ಪೂತಿಪೂಣ, ತಾಮಿಸ್ರ, ಅಂಧತಾಮಿಸ್ರ ತಪತುಂಡ, ತೀಕ್ಷಾಸಿ, ನಪುಂಸಕ, ಲೌಹತಪ್ತ ಕುಂಭೀಪಾಕ, ಕಾಲಸೂತ್ರ ಪಂಕ, ಮಹಾಪಂಕ, ಸೂಚೀಮುಖ, ಸೂಕರಮುಖ, ಅಪತ್ರ, ಅಂಧಕೂಪ ತಪ್ತಸೂರ್ಮಿ ವಜ್ರಕಂಟಕ, ಪೂಯೋದ, ಪ್ರಾಣರೋಧ, ವಿಶಸನ, ಲಾಲಾಭಕ್ಷ ಸಾರಮೇಯಾದನ, ಅಯಃಪಾನ, ಕಾರಕರ್ದಮ, ಶೂಲಪೋತ , ದಂದಕ, ತಪ್ತಲಾಕ್ಷಾಜಲ, ಮೇದಸ್ತಂಭ, ಶೀತೋಷ್ಣ ಇವು ಪ್ರಮುಖ ನರಕಗಳು. ಈ ಶಬ್ದಗಳೇ ಆ ನರಕ ಹೇಗಿದೆ ಎನ್ನುವುದನ್ನು ಹೇಳುತ್ತವೆ . ನಮ್ಮ ಪುರಾಣ ಮತ್ತು ಇತಿಹಾಸಗಳು ಯಾವ ತಪ್ಪಿಗೆ ಯಾವ ನರಕ ಎಂದು ವಿಸ್ತಾರವಾಗಿ ವಿವರಿಸುತ್ತವೆ . ಈ ಪಟ್ಟಿಯಲ್ಲಿ ಜೀವಿ ಮಾಡಬಹುದಾದ ಎಲ್ಲಾ ತಪ್ಪುಗಳೂ ಇವೆ. ಜೊತೆಗೆ ಏನ ಮಾಡಿದರೆ ಈ ನರಕಗಳಿಂದ ತಪ್ಪಿಸಿಕೊಳ್ಳಬಹುದು ಎನ್ನುವುದನ್ನೂ ಇವು ತಿಳಿಸುತ್ತವೆ.

ಹಾಗೆಯೇ ತಪ್ಪು ಮಾಡಿ ನರಕಕ್ಕೆ ಹೋದವರ ಕಥೆಗಳನ್ನೂ, ಒಳಿತು ಮಾಡಿ ಸ್ವರ್ಗ ಪಡೆದವರ ಚರಿತೆಯನ್ನೂ , ಮಾಡಿದ ತಪ್ಪನ್ನು ಸರಿಪಡಿಸಿಕೊಂಡು ನರಕ ತಪ್ಪಿಸಿಕೊಂಡವರ ಪರಿಶುದ್ಧಿಯ ಘಟನೆಗಳನ್ನೂ ಪುರಾಣೇತಿಹಾಸಗಳು ತಿಳಿಸುತ್ತವೆ. ಜೀವಿ ಒಳಿತು ಮಾಡುತ್ತಾ ಬದುಕಬೇಕು ಎನ್ನುವುದು ಆಶಯ. ಒಳಿತೆಂದರೆ ಸಹಜೀವಿಗಳ ಹಿತ, ಸಮಷ್ಟಿ ಸೃಷ್ಟಿಯ ಹಿತ. ಇದರಲ್ಲಿ ತನ್ನ ಹಿತವಿದೆ ಎನ್ನುವುದು ಸನಾತನ ವಿಶ್ವಾಸ, ನಿನಗೆ ಹಿತ ಬೇಕೆಂದರೆ, ನಿನ್ನ ಬದುಕು ಆನಂದಮಯವಾಗಬೇಕು ಎಂದರೆ ಜೀವಹಿತದ ಕಾರ್ಯ ಮಾಡು ಎನ್ನುವುದು ನಮ್ಮ ಪೂರ್ವಜರ ಸೂಚನೆ, ಹಾಗೆ ಮಾಡದೆ, ಕ್ಷಣಿಕವಾದ ಮಿಷಿಗಾಗಿ ತಪ್ಪು ಮಾಡಿದರೆ ಅದು ಒಂದು ದೋಷವಾಗಿ ಜೀವಕ್ಕೆ ಅಂಟಿಕೊಳ್ಳುತ್ತದೆ. ಅದನ್ನು ಕಳೆದುಕೊಳ್ಳಬೇಕೆಂದರೆ ಅದರ ಫಲವನ್ನು ಅನುಭವಿಸಬೇಕು. ಅಥವಾ ನರಕದ ಶಿಕ್ಷೆಗೆ ಒಳಗಾಗಬೇಕು ಇಲ್ಲಿ ಇರುವುದು ಅಪರಾಧಿಗೆ ಶಿಕ್ಷೆಯ ಭಯ ಹುಟ್ಟಿಸುವುದಲ್ಲ . ಬದಲಿಗೆ ಅವನನ್ನು ಶುದ್ಧಗೊಳಿಸುವುದು. ಹಾಗಾಗಿ ನರಕ ಭಯಂಕರವಾದರೂ ಅದರ ಉದ್ದೇಶದಲ್ಲಿ ಇರುವುದು ಜೀವಹಿತವೇ .

**ಭಗವದ್ಗೀತೆ/ಗರುಡ ಪುರಾಣ..**

# ಎಣ್ಣೆ ಇಲ್ಲದೆ ಚಿಕನ್ ಕರಿ! ಟೇಸ್ಟ್ ಹೆಲ್ತ್
## ಎರಡೂ ಗ್ಯಾರಂಟಿ.. ಮಾಡೋದು ಹೇಗೆ

ಚಿಕನ್ ಹೀಗೆ ಮಾಡಿದ್ರೆ ಟೇಸ್ಟ್ ನೆಕ್ಸ್ಟ್ ಲೆವೆಲ್ ಆರೋಗ್ಯಕ್ಕೂ ಒಳ್ಳೆಯದು. ಚಿಕನ್ ಅಂದರೆ ಯಾರಿಗೆ ತಾನೇ ಇಷ್ಟವಾಗುವುದಿಲ್ಲ ಹೇಳಿ. ಚಿಕನ್ ಆರೋಗ್ಯಕ್ಕೆ ಬಹಳ ಒಳ್ಳೆಯದು. ಆದರೆ ಅತಿಯಾದರೆ ಆರೋಗ್ಯಕ್ಕೆ ಬಹಳ ಡೇಂಜರ್. ಹೌದು, ಚಿಕನ್ ಒಂದು ಜನಪ್ರಿಯ ಆಹಾರವಾಗಿದ್ದು, ಇದನ್ನು ಅನೇಕರು ಇಷ್ಟಪಟ್ಟು ಸವಿಯುತ್ತಾರೆ. ತಂದೂರಿ, ಚಿಕನ್ 65, ಕಬಾಬ್‌ಗಳಂತಹ ವಿಭಿನ್ನ ಶೈಲಿಗಳಲ್ಲಿ ಇದನ್ನು ತಯಾರಿಸಲಾಗುತ್ತದೆ. ಆದರೆ, ಕೆಲವರು ಎಣ್ಣೆಯ ಅಂಶದಿಂದಾಗಿ ಚಿಕನ್ ಸೇವಿಸಲು ಹಿಂಜರಿಯುತ್ತಾರೆ. ಅಂತಹವರಿಗೆ, ಎಣ್ಣೆ ಬಳಸದೆ ರುಚಿಕರ ಹಾಗೂ ಆರೋಗ್ಯಕರ ಚಿಕನ್ ತಯಾರಿಸುವುದು ಹೇಗೆ ಎಂಬುದನ್ನು ನಾವು ಈ ಲೇಖನದಲ್ಲಿ ತಿಳಿಸಿದ್ದೇವೆ. ಈ ರೀತಿಯ ಚಿಕನ್ ಎಂದೂ ತಿಂದಿರಲಿಲ್ಲ. ಟೇಸ್ಟಿ ಹೆಲ್ದಿ ಎರಡೂ ಒಂದೇ ರುಚಿಯಲ್ಲಿ ಸಾಂಪ್ರದಾಯಿಕ ವಿಧಾನಗಳಲ್ಲಿ ಎಣ್ಣೆ ಹೆಚ್ಚಾಗಿ ಬಳಕೆಯಾಗುವ ಕಾರಣ ಆರೋಗ್ಯದ ಬಗ್ಗೆ ಕಾಳಜಿ ಇರುವವರು ಚಿಕನ್‌ನಿಂದ ದೂರ ಉಳಿಯುತ್ತಾರೆ. ಆದರೆ, ಈ ವಿಶೇಷ ವಿಧಾನವು ಎಣ್ಣೆಯ ಬಳಕೆಯನ್ನು ಸಂಪೂರ್ಣವಾಗಿ ನಿವಾರಿಸಿ, ಚಿಕನ್‌ನ ನೈಜ ರುಚಿಯನ್ನು ಉಳಿಸಿಕೊಳ್ಳುತ್ತದೆ. ಇದು ನಿಮ್ಮ ಆರೋಗ್ಯಕ್ಕೂ ಅತ್ಯುತ್ತಮ ಆಯ್ಕೆಯಾಗಿದೆ. ಯಾವುದೇ ರಾಜಿ ಇಲ್ಲದೆ ಚಿಕನ್ ಸವಿಯಲು ಬೇಕಾದ ಮಾರ್ಗವಾಗಿದೆ.

**ಎಣ್ಣೆ ರಹಿತ ಚಿಕನ್ ತಯಾರಿಸಲು ಬೇಕಾದ ಸಾಮಗ್ರಿಗಳು**

- ಚಿಕನ್ ಬ್ರೆಸ್ಟ್‌ಗಳು – 4 ಮೂಳೆ, ಚರ್ಮರಹಿತ ಕೋಳಿ ಮಾಂಸ)
- ನಿಂಬೆ ಹಣ್ಣು – 2 (ರಸ ತೆಗೆದ)
- ತಾಜಾ ರೋಸ್ಮರಿ – 2 ಚಮಚ (ಸಣ್ಣಗೆ ಹೆಚ್ಚಿದ್ದು)
- ತಾಜಾ ಥೈಮ್ – 2 ಚಮಚ ಹರ್ಬಲ್ ಅಂಗಡಿಗಳಲ್ಲಿ ಲಭ್ಯ
- ಬೆಳ್ಳುಳ್ಳಿ ಎಸಳುಗಳು – 2 ಸಣ್ಣಗೆ ಕಟ್ ಮಾಡಿದ
- ಉಪ್ಪು – ರುಚಿಗೆ ತಕ್ಕಷ್ಟು
- ಮೆಣಸು (ಕಾಳು ಮೆಣಸು)



**ಎಣ್ಣೆ ರಹಿತ ಚಿಕನ್ ತಯಾರಿಸುವ ವಿಧಾನ :** ಮೊದಲಿಗೆ, ಒಂದು ಬಟ್ಟಲು ತೆಗೆದುಕೊಳ್ಳಿ. ಅದರಲ್ಲಿ ನಿಂಬೆ ರಸ, ರೋಸ್ಮರಿ, ಥೈಮ್, ಬೆಳ್ಳುಳ್ಳಿ, ಉಪ್ಪು ಮತ್ತು ಕಾಳುಮೆಣಸನ್ನು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ, ಮ್ಯಾರಿನೇಡ್ ತಯಾರಿಸಿ. ನಂತರ ಗ್ಯಾಸ್ ಆನ್ ಮಾಡಿ ಗ್ರಿಲ್ ಅಥವಾ ಗ್ರಿಲ್ ಪ್ಯಾನ್ ಅನ್ನು ಮಧ್ಯಮದಿಂದ ಹೆಚ್ಚಿನ ಉರಿಯಲ್ಲಿ ಸ್ವಲ್ಪ ಹೊತ್ತು ಬಿಸಿ ಮಾಡಿ. ಪ್ಯಾನ್ ಸರಿಯಾಗಿ ಬಿಸಿಯಾದಾಗ ಚಿಕನ್ ಬೇಯಿಸಲು ಸಿದ್ಧವಾಗುತ್ತದೆ. ಪ್ಯಾನ್ ಬಿಸಿಯಾದ ಬಳಿಕ, ಚಿಕನ್ ಬ್ರೆಸ್ಟ್‌ಗಳನ್ನು ಸಿದ್ಧಪಡಿಸಿದ ಮ್ಯಾರಿನೇಡ್‌ನಲ್ಲಿ ಸಂಪೂರ್ಣವಾಗಿ ಲೇಪಿಸಿ. ಬಳಿಕ ಅದನ್ನು ಬಿಸಿ ಮಾಡಿದ ಗ್ರಿಲ್ ಪ್ಯಾನ್ ಮೇಲೆ ಇರಿಸಿ, ಎರಡೂ ಕಡೆಗಳನ್ನು ತಿರುಗಿಸುತ್ತಾ 5 ರಿಂದ 7 ನಿಮಿಷಗಳ ಕಾಲ ಸಂಪೂರ್ಣವಾಗಿ ಬೇಯುವವರೆಗೆ ಗ್ರಿಲ್ ಮಾಡಿ. ಚಿಕನ್ ಸರಿಯಾಗಿ ಬೆಂದ ನಂತರ, ಸ್ಟವ್ ಆಫ್ ಮಾಡಿ ಕೆಲವು ನಿಮಿಷಗಳ ಕಾಲ ಹಾಗೆಯೇ ಬಿಟ್ಟು ಬಳಿಕ ತಟ್ಟೆಗೆ ಹಾಕಿ. ಇಷ್ಟು ಮಾಡಿದರೆ, ಈಗ ನಿಮ್ಮ ಎಣ್ಣೆ ರಹಿತ ರುಚಿಕರ ಚಿಕನ್ ಸವಿಯಲು ಸಿದ್ಧ.

**ಇದನ್ನು ಸವಿಯುವುದು ಹೇಗೆ :** ಬಿಸಿ ಬಿಸಿಯಾದ ಎಣ್ಣೆ ರಹಿತ ಚಿಕನ್ ಅನ್ನು ಅನ್ನ ಅಥವಾ ಚಪಾತಿ ಜೊತೆ ಸವಿಯಬಹುದು.

ಚಿಕನ್ ಪ್ಯಾನ್‌ಗೆ ಅಂಟಿಕೊಳ್ಳುವುದನ್ನು ತಪ್ಪಿಸಲು ನಾನ್-ಸ್ಟಿಕ್ ಗ್ರಿಲ್ ಪ್ಯಾನ್ ಅಥವಾ ಗ್ರಿಲ್ ಮ್ಯಾಟ್ ಬಳಸಬೇಕು. ಪ್ಯಾನ್ ಅನ್ನು ಅತಿಯಾಗಿ ತುಂಬಿಸಬೇಡಿ, ಅಗತ್ಯವಿದ್ದರೆ ಚಿಕನ್ ಅನ್ನು ಸಣ್ಣ ಬ್ಯಾಚ್‌ಗಳಲ್ಲಿ ಬೇಯಿಸುವುದು ಉತ್ತಮ. ಗ್ರಿಲ್ ಜೊತೆಗೆ, ಮ್ಯಾರಿನೇಟ್ ಮಾಡಿದ ಚಿಕನ್ ಬ್ರೆಸ್ಟ್‌ಗಳನ್ನು ಬೇರೆ ವಿಧಾನಗಳಲ್ಲಿಯೂ ತಯಾರಿಸಬಹುದು. ಈ ಪರ್ಯಾಯ ವಿಧಾನಗಳು ಸಹ ಎಣ್ಣೆ ರಹಿತ ಚಿಕನ್ ಪಡೆಯಲು ಸಹಾಯಕವಾಗಿವೆ.

# ಅಂಬೇಡ್ಕರ್ ಶ್ರಮ: ಸುಸ್ಥಿತಿಯಲ್ಲಿ ದಲಿತ ಸಮುದಾಯ

• **ಉದಯವಾಹಿನಿ, ಬೆಂಗಳೂರು**




ಡಾ.ಬಿ.ಆರ್. ಅಂಬೇಡ್ಕರ್ ಶ್ರಮದಿಂದ ದಲಿತ ಸಮುದಾಯ ಸುಸ್ಥಿತಿಯಲ್ಲಿದೆ. ಇದನ್ನು ದಲಿತ ಸಮುದಾಯದ ನೌಕರರು ಅರ್ಥ ಮಾಡಿಕೊಂಡು ಸಶಕ್ತ ಸಂಘಟನೆ ಕಟ್ಟಬೇಕು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಜಂಟಿ ನಿರ್ದೇಶಕ ಮಹಾಲಿಂಗಯ್ಯ ಹೇಳಿದರು. ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಪರಿಶಿಷ್ಟ ಜಾತಿ ಮತ್ತು ಪರಿಷ್ಟ ಪಂಗಡ ನೌಕರರ ಸಂಘದ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬುದ್ಧನಿಂದ ಮೊದಲುಗೊಂಡು ಫುಲೆ ದಂಪತಿ, ಶಾಹು ಮಹಾರಾಜ್ ಅವರಂತಹ ಮಹಾನ್ ಮಾನವತಾವಾದಿಗಳ ದೂರದೃಷ್ಟಿಯಿಂದ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಈ ದೇಶವನ್ನು ಬಲಿಷ್ಠವಾಗಿ ರೂಪಿಸುವ ಶಕ್ತಿ ಮತ್ತು ಅವಕಾಶ ಸಿಕ್ಕಿತು. ಹಾಗೆಯೇ ದಲಿತ ಸಮುದಾಯದ ಪ್ರತಿಭೆಗಳನ್ನು ಸಮುದಾಯದ ನೌಕರ ಬಂಧುಗಳು ಗುರುತಿಸಿ ಬೆಳೆಸಬೇಕು' ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ನಿವೃತ್ತಿಯಾದ ಹಾಗೂ ಪದೋನ್ನತಿ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರನ್ನು ಸನ್ಮಾನಿಸಲಾಯಿತು.

ಇಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಜಂಟಿ ನಿರ್ದೇಶಕ ಎನ್. ರಾಜು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು ಉತ್ತರ ಜಿಲ್ಲೆಯ ಉಪನಿರ್ದೇಶಕ ಪಾಲಾಕ್ಷ, ಇಲಾಖೆಯ ಉಪನಿರ್ದೇಶಕರಾದ ನರಸಿಂಹ ಮೂರ್ತಿ, ಪುಷ್ಪಾ, ಸಂಘದ ರಾಜ್ಯ ಘಟಕದ ಅಧ್ಯಕ್ಷ ಗೋಪಾಲಕೃಷ್ಣ, ಕಾರ್ಯದರ್ಶಿ ಜಯರಾಮ್, ಪ್ರಾಂಶುಪಾಲರ ಸಂಘದ ಅನುದಾನಿತ ಕಾಲೇಜುಗಳ ಸಂಘದ ಅಧ್ಯಕ್ಷ ಹರೀಶ್, ನೌಕರರ ಸಂಘದ ಬೆಂಗಳೂರು ವಿಭಾಗದ ಅಧ್ಯಕ್ಷ ಲಕ್ಷ್ಮಣಯ್ಯ ಉಪಸ್ಥಿತರಿದ್ದರು.

# ಊಟ ತಿಂಡಿ ಮಾತ್ರವಲ್ಲ, ಈ ತಪ್ಪುಗಳಿಂದಲೂ ಕೂಡ
## ಶುಗರ್ ಲೆವೆಲ್ ಹೆಚ್ಚು ಕಡಿಮೆ ಆಗುತ್ತದೆಯಂತೆ!

ಇತ್ತೀಚಿನ ದಿನಗಳಲ್ಲಿ ಮಧುಮೇಹದ ಸಮಸ್ಯೆ ತುಂಬಾ ಹೆಚ್ಚುತ್ತಿದೆ. ಭಾರತದಲ್ಲಿಯೂ ಸಹ ಮಧುಮೇಹ ಪ್ರಕರಣಗಳು ಬಹಳ ವೇಗವಾಗಿ ಹೆಚ್ಚುತ್ತಿವೆ. ಮಧುಮೇಹದಲ್ಲಿ ಜೀವನಶೈಲಿ ಮತ್ತು ಆಹಾರ ಪದ್ಧತಿಯನ್ನು ಗಮನದಲ್ಲಿಟ್ಟುಕೊಂಡು ನೀವು ಈ ಸಮಸ್ಯೆಯಿಂದ ಮುಕ್ತರಾಗಬಹುದು. ಮಧುಮೇಹವು ದೀರ್ಘಕಾಲದ ಕಾಯಿಲೆಯಾಗಿದ್ದು, ಇದನ್ನು ಮೂಲದಿಂದಲೇ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಆದರೆ ಜೀವನಶೈಲಿಯನ್ನು ಬದಲಾಯಿಸುವ ಮೂಲಕ ಅದನ್ನು ನಿಯಂತ್ರಣದಲ್ಲಿಡಬಹುದು.

ಮೇದೋಜ್ಜೀರಕ ಗ್ರಂಥಿಯು ಇನ್ಸುಲಿನ್ ಉತ್ಪಾದಿಸಲು ಸಾಧ್ಯವಾಗದಿದ್ದಾಗ ಅಥವಾ ದೇಹವು ಇನ್ಸುಲಿನ್ ಅನ್ನು ಸರಿಯಾಗಿ ಬಳಸಲು ಸಾಧ್ಯ ವಾಗದಿದ್ದಾಗ ಮಧುಮೇಹದ ಸಮಸ್ಯೆ ಎದುರಾಗುತ್ತದೆ. ದೇಹದಲ್ಲಿ ರಕ್ತದಲ್ಲಿನ ಸಕ್ಕರೆ ಮಟ್ಟ ಅಂದರೆ ಹೈಪರ್ಗ್ಲೈಸೀಮಿಯಾ ಹೆಚ್ಚಾಗಲು ಆಹಾರ ಪದ್ಧತಿ ಮಾತ್ರ ಕಾರಣವಲ್ಲ, ಆದರೆ ಅದಕ್ಕೆ ಇನ್ನೂ ಹಲವು ಕಾರಣಗಳಿವೆ. ಅವುಗಳ ಬಗ್ಗೆ ತಿಳಿದುಕೊಳ್ಳೋಣ....

**ನಿದ್ರೆ:** ನಿಮ್ಮ ನಿದ್ರೆಯ ಚಕ್ರವು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟದ ಜೊತೆಗೆ ಅನೇಕ ದೈಹಿಕ ಪ್ರಕ್ರಿಯೆಗಳ ಮೇಲೆ ಪರಿಣಾಮ ಬೀರುತ್ತದೆ. ಅಧ್ಯಯನದ ಪ್ರಕಾರ, ನಿದ್ರೆಯ ಕೊರತೆಯು ಮಧುಮೇಹ ಹೊಂದಿರುವ ಜನರಲ್ಲಿ ಗ್ಲೂಕೋಸ್ ನಿಯಂತ್ರಣ ಮತ್ತು ಇನ್ಸುಲಿನ್ ಪ್ರತಿರೋಧದ ಮೇಲೆ ಪರಿಣಾಮ ಬೀರುತ್ತದೆ. ನಿದ್ರೆಯ ಕೊರತೆಯಿಂದಾಗಿ, ನೀವು ಒತ್ತಡವನ್ನು ಎದುರಿಸ ಬೇಕಾಗಬಹುದು, ಇದು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ನೀವು ಕನಿಷ್ಠ 8 ಗಂಟೆಗಳ ನಿದ್ದೆ ಮಾಡುವುದು ಮುಖ್ಯ.

**ಒತ್ತಡದ ಮಟ್ಟ:** ಒತ್ತಡವು ನಿಮ್ಮ ಆರೋಗ್ಯಕ್ಕೆ ತುಂಬಾ ಹಾನಿಕಾರಕವಾಗಿದೆ. ಇದರಿಂದಾಗಿ ನೀವು ಅನೇಕ ರೀತಿಯ ಕಾಯಿಲೆಗಳನ್ನು ಎದುರಿಸಬೇಕಾಗಬಹುದು. ಒತ್ತಡವು ರಕ್ತದಲ್ಲಿನ ಸಕ್ಕರೆ ಮಟ್ಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಒತ್ತಡದಿಂದಾಗಿ, ನಮ್ಮ ದೇಹದಲ್ಲಿ ಕಾರ್ಟಿಸೋಲ್ ಹಾರ್ಮೋನ್ ಉತ್ಪತ್ತಿಯಾಗುತ್ತದೆ, ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೆಚ್ಚಿಸುತ್ತದೆ.

**ದೈಹಿಕ ಚಟುವಟಿಕೆಯ ಮಟ್ಟ :** ದೈಹಿಕ ಚಟುವಟಿಕೆಗಳನ್ನು ಮಾಡದಿರುವುದು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಹೆಚ್ಚಿಸಬಹುದು. ನಿಯಮಿತ ವ್ಯಾಯಾಮದಿಂದ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಣದಲ್ಲಿಡಬಹುದು ಎಂಬುದು ಇದಕ್ಕೆ ಕಾರಣ. ಆದರೆ ಮಧುಮೇಹದಲ್ಲಿ ವ್ಯಾಯಾಮ ಮಾಡುವಾಗ, ಕೆಲವು ವಿಷಯಗಳ ಬಗ್ಗೆ ಕಾಳಜಿ ವಹಿಸುವುದು ಬಹಳ ಮುಖ್ಯ. ಮಧುಮೇಹ ತಜ್ಞರಿಲ್ಲದೆ ಭಾರೀ ವ್ಯಾಯಾಮ ಮಾಡುವುದರಿಂದ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವು ಹಠಾತ್ತನೆ ಇಳಿಯಬಹುದು.

**ನಿರ್ಜಲೀಕರಣ :** ಕಡಿಮೆ ನೀರು ಕುಡಿಯುವುದರಿಂದ ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟಕ್ಕೆ ಹಾನಿಕಾರಕವಾಗಬಹುದು. ನೀವು ಕಡಿಮೆ ನೀರು ಕುಡಿದಾಗ, ಅದು ನಿಮ್ಮ ದೇಹದಲ್ಲಿ ಗ್ಲೂಕೋಸ್ ಪ್ರಮಾಣವನ್ನು ಹೆಚ್ಚಿಸಲು ಪ್ರಾರಂಭಿಸುತ್ತದೆ, ಇದನ್ನು ಹೈಪೊಗ್ಲಿಸಿಮಿಯಾ ಎಂದು ಕರೆಯಲಾಗುತ್ತದೆ.

ಅಂತಹ ಪರಿಸ್ಥಿತಿಯಲ್ಲಿ, ಮಧುಮೇಹ ರೋಗಿಗಳು ಸಾಧ್ಯವಾದಷ್ಟು ಹೆಚ್ಚು ನೀರು ಕುಡಿಯುವುದು ಮುಖ್ಯ.

**ಔಷಧಿ:** ಹಲವು ಬಾರಿ ಔಷಧಿಗಳು ನಿಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಮಧುಮೇಹ ರೋಗಿಗಳು ಯಾವುದೇ ಔಷಧಿಯನ್ನು ತೆಗೆದುಕೊಳ್ಳುವ ಮೊದಲು ಒಮ್ಮೆ ವೈದ್ಯರನ್ನು ಸಂಪರ್ಕಿಸುವುದು ಮುಖ್ಯ.

**ಬೆಳಗ್ಗೆ ಖಾಲಿ ಹೊಟ್ಟೆಗೆ ಟೀ-ಕಾಫಿ ಕುಡಿಯುವುದು**


ಬೆಳಗ್ಗೆ ಎದ್ದ ತಕ್ಷಣ ನೀರು ಕುಡಿಯದೆ ಚಹಾ ಅಥವಾ ಕಾಫಿ ಕುಡಿಯು ವುದು, ಉಪಾಹಾರವನ್ನು ಬಿಟ್ಟುಬಿಡುವುದು ಅಥವಾ ತಡವಾಗಿ ತಿನ್ನು ವುದು, ದೀರ್ಘಕಾಲ ಹಸಿವಿನಿಂದ ಇರುವುದು, ದೈಹಿಕ ಚಟುವಟಿಕೆ ಮಾಡದಿರುವುದು, ಈ ಎಲ್ಲಾ ಅಭ್ಯಾಸಗಳು ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಣದಲ್ಲಿಡುವುದಿಲ್ಲ.

**ಮಾನಸಿಕ ಒತ್ತಡವೂ ಒಂದು ದೊಡ್ಡ ಕಾರಣ!**

ಡಾ. ಕುಮಾರ್ ಹೇಳುವಂತೆ ಕೆಲಸದ ಒತ್ತಡ, ಮನೆಯ ಒತ್ತಡ ಸಾಮಾಜಿಕ ಮಾಧ್ಯಮದ ಪ್ರಭಾವದಿಂದಾಗಿ ಜನರ ಮಾನಸಿಕ ಆರೋಗ್ಯ ಕ್ಷೀಣಿಸುತ್ತಿದೆ. ಚಿಕ್ಕ ವಯಸ್ಸಿನಲ್ಲಿಯೇ ಸಕ್ಕರೆ ಮಟ್ಟ ಹೆಚ್ಚಾಗಲು ಮಾನಸಿಕ ಒತ್ತಡವೂ ಒಂದು ಪ್ರಮುಖ ಕಾರಣವಾಗಿದೆ.



# ರಷ್ಯಾದಲ್ಲಿ 7 ತೀವ್ರತೆಯ ಮತ್ತೊಂದು ಭಾರೀ ಭೂಕಂಪ




ಸುನಾಮಿ ಅಲೆ ಏಳುವ ಭೀತಿ

**ಮಾಸ್ಕೋ:** ರಷ್ಯಾದ ಕಮ್ಚಟ್ಕಾ ಪರ್ಯಾಯ ದ್ವೀಪದಲ್ಲಿ 8.8 ತೀವ್ರತೆಯ ಭೂಕಂಪ ಸಂಭವಿಸಿದ ಕೆಲವು ದಿನಗಳ ಅಂತರದಲ್ಲೇ ಮತ್ತೊಂದು ಭಾರೀ ಪ್ರಮಾಣದ ಭೂಕಂಪ ಸಂಭವಿಸಿದೆ. ಭಾನುವಾರ ಕಮ್ಚಟ್ಕಾ ಪ್ರದೇಶಕ್ಕೆ ಹತ್ತಿರದ ಕುರಿಲ್ ದ್ವೀಪಗಳಲ್ಲಿ 7 ತೀವ್ರತೆಯ ಭೂಕಂಪ ಸಂಭವಿಸಿದೆ. ಇದರಿಂದ ಮತ್ತೊಮ್ಮೆ ಸುನಾಮಿ ಅಲೆಗಳು ಏಳುವ ಅಪಾಯ ಎದುರಾಗಿದೆ. ಕುರಿಲ್ ದ್ವೀಪಗಳು ಕಮ್ಚಟ್ಕಾ ಪರ್ಯಾಯ ದ್ವೀಪದ ದಕ್ಷಿಣ ತುದಿಯಿಂದ ವ್ಯಾಪಿಸಿವೆ. ವರದಿಗಳ ಪ್ರಕಾರ ರಷ್ಯಾದ ದೂರದ ಪೂರ್ವದ ಕಮ್ಚಟ್ಕಾದ ಮೂರು ಪ್ರದೇಶಗಳಲ್ಲಿ ಸುನಾಮಿ ಅಲೆಗಳು ಸಾಧ್ಯ ಎಂದು ರಷ್ಯಾದ ತುರ್ತು ಸೇವೆಗಳ ಸಚಿವಾಲಯ ತಿಳಿಸಿದೆ.

ನಿರೀಕ್ಷಿತ ಅಲೆಗಳ ಎತ್ತರ ಕಡಿಮೆಯಾಗಿದೆ. ಆದರೆ ನೀವು ಇನ್ನೂ ತೀರದಿಂದ ದೂರ ಸರಿಯಬೇಕು ಎಂದು ಸಚಿವಾಲಯ ಭಾನುವಾರ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದೆ. ಭೂಕಂಪದ ತೀವ್ರತೆಯನ್ನು 7.0 ಎಂದು ಅಂದಾಜಿಸಿರುವ ಪೆಸಿಫಿಕ್ ಸುನಾಮಿ ಎಚ್ಚರಿಕೆ ವ್ಯವಸ್ಥೆಯು, ಭೂಕಂಪದ ನಂತರ ಯಾವುದೇ ಸುನಾಮಿ ಎಚ್ಚರಿಕೆ ನೀಡಲಾಗಿಲ್ಲ ಎಂದು ಹೇಳಿದೆ. ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ಕೂಡ ಭೂಕಂಪದ ತೀವ್ರತೆ 7 ರಷ್ಟಿದೆ ಎಂದು ಹೇಳಿದೆ. ಆದರೆ, ಸುನಾಮಿ ಅಲೆಗಳು ಏಳುವ ಸಾಧ್ಯತೆಯನ್ನು ತಳ್ಳಿಹಾಕಲಾಗಿಲ್ಲ.

### ಕಳೆದ ವಾರ 8.8 ತೀವ್ರತೆಯ ಭೂಕಂಪ

**ಕಳೆದ ವಾರ ಸಂಭವಿಸಿದ ಭೂಕಂಪದಿಂದ ಫ್ರೆಂಚ್ ಪಾಲಿನೇಷ್ಯಾ ಮತ್ತು ಚಿಲಿಯಷ್ಟು ದೂರದಲ್ಲಿ ಸುನಾಮಿ ಎಚ್ಚರಿಕೆಗಳನ್ನು ಪ್ರಚೋದಿಸಿತು. ಜುಲೈ 30 ರಂದು ಮೊದಲ ಬಾರಿಗೆ, ಈ ಪ್ರದೇಶದಲ್ಲಿ 8.8 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿತು, ನಂತರ ಹಲವಾರು ಬಲವಾದ ನಂತರದ ಕಂಪನಗಳು ಸಂಭವಿಸಿದ್ದವು. ಮುಂದಿನ ಹಲವಾರು ವಾರಗಳಲ್ಲಿ ಈ ಪ್ರದೇಶದಲ್ಲಿ ಬಲವಾದ ಭೂಕಂಪನಗಳು ಸಂಭವಿಸಬಹುದು ಎಂದು ರಷ್ಯಾದ ವಿಜ್ಞಾನಿಗಳು ಎಚ್ಚರಿಸಿದ್ದರು.**

**600 ವರ್ಷಗಳ ನಂತರ ಜ್ವಾಲಾಮುಖಿ ಸ್ಫೋಟ:** ಈ ಮಧ್ಯೆ, ಕಮ್ಚಟ್ಕಾದಲ್ಲಿನ ಕ್ರಷೆನಿನ್ನಿಕೋವ್ ಜ್ವಾಲಾಮುಖಿ 600 ವರ್ಷಗಳಲ್ಲಿ ಮೊದಲ ಬಾರಿಗೆ ಸ್ಫೋಟಗೊಂಡಿದೆ ಎಂದು ರಷ್ಯಾದ ಸುದ್ದಿ ಸಂಸ್ಥೆ ವಿಜ್ಞಾನಿಗಳು ಭಾನುವಾರ ವರದಿ ಮಾಡಿದ್ದಾರೆ.

ಎರಡೂ ಘಟನೆಗಳು ಕಳೆದ ವಾರ ರಷ್ಯಾದ ದೂರದ ಪೂರ್ವವನ್ನು ಬೆಚ್ಚಿ ಬೀಳಿಸಿದ ಬೃಹತ್ ಭೂಕಂಪಕ್ಕೆ ಸಂಬಂಧಿಸಿರಬಹುದು ಎಂದು ಊಹಿಸಲಾಗಿದೆ. 600 ವರ್ಷಗಳಲ್ಲಿ ಐತಿಹಾಸಿಕವಾಗಿ ದೃಢೀಕರಿಸಲ್ಪಟ್ಟ ಮೊದಲ ಕ್ರಾಶೆನ್ನಿನಿಕೋವ್ ಜ್ವಾಲಾಮುಖಿ ಸ್ಫೋಟ ಇದಾಗಿದೆ. ಕ್ರಾಶೆನ್ನಿನಿಕೋವ್‌ನಿಂದ ಕೊನೆಯದಾಗಿ 1463ರ ಆಸುಪಾಸಿನಲ್ಲಿ ಸಂಭವಿಸಿದ್ದರಬಹುದು ಎಂದು ಹೇಳಲಾಗುತ್ತಿದೆ. ಈ ಸ್ಫೋಟಕ್ಕೆ ಕಿತ್ತಳೆ ಬಣ್ಣದ ವಾಯುಯಾನ ಸಂಕೇತವನ್ನು ನೀಡಲಾಗಿದೆ, ಇದು ವಾಯು ಸಂಚಾರಕ್ಕೆ ಹೆಚ್ಚಿನ ಅಪಾಯವನ್ನು ಸೂಚಿಸುತ್ತದೆ.

# ಬಿಜೆಪಿ-ಎಐಎಡಿಎಂಕೆ ಮೈತ್ರಿಗೆ ಸ್ಟಾಲಿನ್ ಖಂಡನೆ

**ಚೆನ್ನೈ:** ಆಡಳಿತಾರೂಢ ಡಿಎಂಕೆ ಅಧ್ಯಕ್ಷ, ತಮಿಳುನಾಡು ಸಿಎಂ ಎಂ ಕೆ ಸ್ಟಾಲಿನ್ ಅವರು ತಮ್ಮ ಪಕ್ಷದ ಬದ್ಧವೈರಿ ಎಐಎಡಿಎಂಕೆಯನ್ನು ತೀವ್ರವಾಗಿ ಟೀಕಿಸಿದ್ದು, ಬಿಜೆಪಿ ಜೊತೆಗಿನ ಸಂಬಂಧವನ್ನು ನವೀಕರಿಸಿದ್ದಕ್ಕಾಗಿ ಪಕ್ಷದ ನಿಜವಾದ ಕಾರ್ಯಕರ್ತರು ಮೈತ್ರಿಯಿಂದ ತೃಪ್ತರಾಗಿಲ್ಲ ಎಂದು ಹೇಳಿದ್ದಾರೆ. ಕೇಂದ್ರದಲ್ಲಿ ಆಡಳಿತಾರೂಢ ಬಿಜೆಪಿ ತಮಿಳುನಾಡಿಗೆ ದ್ರೋಹ ಬಗೆದಿದೆ, ಮತ್ತು ಇದರ ಹೊರತಾಗಿಯೂ ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ ಪಳನಿಸ್ವಾಮಿ 2026 ರ ವಿಧಾನಸಭಾ ಚುನಾವಣೆಗಾಗಿ ಕೇಸರಿ ಪಕ್ಷದೊಂದಿಗೆ ಸಂಬಂಧ ಬೆಸೆದರು ಮತ್ತು ಈಗ ತಮ್ಮ ರಾಜ್ಯಾದ್ಯಂತ ನಡೆಯುತ್ತಿರುವ ಪ್ರಚಾರದ ಸಮಯದಲ್ಲಿ ಸುಳ್ಳುಗಳನ್ನು ಹರಡುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ತಮ್ಮ ತಂದೆ, ಮಾಜಿ ಸಿಎಂ ಎಂ ಕರುಣಾನಿಧಿ



ಅವರ ಏಳನೇ ಪುಣ್ಯತಿಥಿಗೆ ಮುಂಚಿತವಾಗಿ ಪಕ್ಷದ ಕಾರ್ಯಕರ್ತರಿಗೆ ಬರೆದ ಪತ್ರದಲ್ಲಿ, ಡಿಎಂಕೆ ಕಾರ್ಯಕರ್ತರು, ಬೆಂಬಲಿಗರು ದಿವಂಗತ ಡಿಎಂಕೆ ಮುಖ್ಯಸ್ಥರು ಪ್ರಚಾರ ಮಾಡಿದ ತಮಿಳು ಪರ, ತಮಿಳುನಾಡು ಪರ ಮೌಲ್ಯಗಳನ್ನು ಎತ್ತಿಹಿಡಿಯಬೇಕು, ಮುಂದಿನ ವರ್ಷ ಚುನಾವಣೆಯಲ್ಲಿ ಪಕ್ಷದ ಯಶಸ್ಸಿಗೆ ಶ್ರಮಿಸಬೇಕು ಎಂದು ಸ್ಟಾಲಿನ್ ಒತ್ತಾಯಿಸಿದರು.

ಇದು ಅದರ ಏಳನೇ ಅವಧಿಯನ್ನು ಖಚಿತಪಡಿಸುತ್ತದೆ. ಬಿಜೆಪಿಯೇತರ ಆಡಳಿತದ ರಾಜ್ಯಗಳಲ್ಲಿ ಮತ್ತು ಪಕ್ಷಕ್ಕೆ ಅಧಿಕಾರ ಹಿಡಿಯುವ ಅವಕಾಶವಿಲ್ಲದಿದ್ದಾಗ, ಬಿಜೆಪಿ ರಾಜ್ಯಪಾಲರ ಮೂಲಕ ಚುನಾಯಿತ ಸರ್ಕಾರಗಳ ವಿರುದ್ಧ ಚಟುವಟಿಕೆಗಳಲ್ಲಿ ತೊಡಗಿತ್ತು, ರಾಜ್ಯಪಾಲರು ರಾಜ್ಯ ಮಸೂದೆಗಳನ್ನು ಅನುಮೋದಿಸುವ ವಿಷಯದ ಬಗ್ಗೆ ಕಾನೂನು ಹೋರಾಟವನ್ನು ಕೈಗೊಂಡು ಯಶಸ್ವಿಯಾದದ್ದು ಡಿಎಂಕೆ ಸರ್ಕಾರ ಎಂದು ಅವರು ಹೇಳಿದರು.

ಇಂತಹ ಹೋರಾಟಗಳನ್ನು ಹೆಚ್ಚು ಹುರುಪಿನಿಂದ ಮುಂದುವರಿಸಬೇಕಾದ ಸಮಯದಲ್ಲಿ, ತಮಿಳುನಾಡಿನ ಬಗ್ಗೆ ಯಾವುದೇ ಕಾಳಜಿಯಿಲ್ಲದ ಎಐಎಡಿಎಂಕೆ, ರಾಜ್ಯಕ್ಕೆ ದ್ರೋಹ ಬಗೆದ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ. ಯಾವುದೇ ಮೂಲಭೂತ ತತ್ವಗಳಿಲ್ಲದ ವಿರೋಧ ಪಕ್ಷದ ನಾಯಕ ದೆಹಲಿಯವರೆಗೆ ಹೋಗಿ, ಬಿಜೆಪಿಯ ಮುಂದೆ ಮಂಡಿಯೂರಿ ಮೈತ್ರಿ ಮಾಡಿಕೊಂಡರು. ನಿಜವಾದ ಎಐಎಡಿಎಂಕೆ ಕಾರ್ಯಕರ್ತ ಕೂಡ ಇದರಿಂದ ಅತೃಪ್ತರಾಗಿದ್ದಾರೆ ಎಂದು ಸ್ಟಾಲಿನ್ ಆರೋಪಿಸಿದರು. ಆ. 7 ರಂದು ಕರುಣಾನಿಧಿಯವರ ಏಳನೇ ಪುಣ್ಯತಿಥಿಯ ಸಂದರ್ಭದಲ್ಲಿ, ಅವರ ಮರೀನಾ ಸ್ಮಾರಕದ ಕಡೆಗೆ ಶಾಂತಿ ಮೆರವಣಿಗೆ ನಡೆಸಲಾಗುವುದು ಎಂದು ಸ್ಟಾಲಿನ್ ಹೇಳಿದರು ಮತ್ತು ಪಕ್ಷದ ಕಾರ್ಯಕರ್ತರು ತಮ್ಮ ತಮ್ಮ ಜಿಲ್ಲೆಗಳಲ್ಲಿ ದ್ರಾವಿಡ ನಾಯಕನಿಗೆ ಗೌರವ ಸಲ್ಲಿಸುವಂತೆ ಒತ್ತಾಯಿಸಿದರು.

## ರಷ್ಯಾ ಸಮೀಪ 2 ಪರಮಾಣು ಜಲಾಂತರ್ಗಾಮಿ ನಿಯೋಜನೆಗೆ ಟ್ರಂಪ್ ಆದೇಶ

# ಅಪಾಯ ಹೆಚ್ಚಿಸಿದ ಮೆಡ್ವೆಡೆವ್ ಉಪದೇಶ

**ವಾಷಿಂಗ್ಟನ್:** ರಷ್ಯಾದ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ಅವರ ಎಚ್ಚರಿಕೆಯ ಹೇಳಿಕೆಗಳ ನಂತರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎರಡು ಪರಮಾಣು ಜಲಾಂತರ್ಗಾಮಿ ನೌಕೆಗಳನ್ನು ಸೂಕ್ತ ಪ್ರದೇಶಗಳಲ್ಲಿ ಇರಿಸುವಂತೆ ಆದೇಶಿಸಿದ್ದಾರೆ. ಈ ಕುರಿತು ತಮ್ಮ ಅಧಿಕೃತ ಟ್ರೂತ್ ಸೋಶಿಯಲ್ ಮಿಡಿಯಾದಲ್ಲಿ ಖುದ್ದು ಮಾಹಿತಿ ನೀಡಿರುವ ಟ್ರಂಪ್, ಈ ಮೂರ್ಖನ ಪ್ರಚೋದನಕಾರಿ ಹೇಳಿಕೆಗಳನ್ನು ಗಮನದಲ್ಲಿಕೊಂಡು, ನಾನು ಎರಡು ಪರಮಾಣು ಜಲಾಂತರ್ಗಾಮಿ ನೌಕೆಗಳನ್ನು ಸೂಕ್ತ ಪ್ರದೇಶಗಳಲ್ಲಿ ಇರಿಸಲು ಆದೇಶಿಸಿದ್ದೇನೆ ಎಂದು ಹೇಳಿದ್ದಾರೆ. ಪದಗಳು ಬಹಳ ಮುಖ್ಯ, ಪ್ರಚೋದನಕಾರಿ ಹೇಳಿಕೆಗಳು ಆಗಾಗ್ಗೆ ಅನಿರೀಕ್ಷಿತ ಪರಿಣಾಮಗಳಿಗೆ ಕಾರಣವಾಗಬಹುದು, ಇದು ಅಂತಹ ಸಂದರ್ಭಗಳಲ್ಲಿ ಒಂದಾಗಬಾರದು ಎಂದು ನಾನು ಆಶಿಸುತ್ತೇನೆ ಎಂದು ಅಮೆರಿಕ ಅಧ್ಯಕ್ಷರು ಮಾರ್ಮಿಕವಾಗಿ ಹೇಳಿದ್ದಾರೆ. ಡೊನಾಲ್ಡ್ ಟ್ರಂಪ್ ಅವರು ಇತ್ತೀಚಿಗೆ ಭಾರತ-ರಷ್ಯಾ ಆರ್ಥಿಕತೆಗಳು ಸತ್ತಿವೆ ಎಂದು ನೀಡಿದ್ದ ಹೇಳಿಕೆಗೆ, ಡಿಮಿಟ್ರಿ ಮೆಡ್ವೆಡೆವ್ ತೀವ್ರ ಆಕ್ರಮಣಕಾರಿ ಹೇಳಿಕೆಗಳನ್ನು ನೀಡಿದ್ದರು.

**ದಿಢೀರ್ ನಿರ್ಧಾರಕ್ಕೆ ಕಾರಣ?:** ರಷ್ಯಾದ ಭದ್ರತಾ ಮಂಡಳಿಯ ಉಪಾಧ್ಯಕ್ಷರಾಗಿ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಡಿಮಿಟ್ರಿ ಮೆಡ್ವೆಡೆವ್, ತಮ್ಮ ಟೆಲಿಗ್ರಾಮ್ ಪೋಸ್ಟ್‌ನಲ್ಲಿ ಭಾರತ ಮತ್ತು ರಷ್ಯಾದ ಸತ್ತ ಆರ್ಥಿಕತೆಗಳು ಮತ್ತು ಅಪಾಯಕಾರಿ ಪ್ರದೇಶವನ್ನು ಪ್ರವೇಶಿಸುವುದು ಎಂಬ ಚರ್ಚೆಗೆ ಸಂಬಂಧಿಸಿದಂತೆ, ಬಹುಶಃ ಡೊನಾಲ್ಡ್ ಟ್ರಂಪ್ ಅವರು ವಾಕಿಂಗ್ ಡೆಡ್ ಬಗ್ಗೆ ತಮ್ಮ ನೆಚ್ಚಿನ ಚಲನಚಿತ್ರಗಳನ್ನು ನೆನಪಿಸಿಕೊಳ್ಳಬೇಕು, ಸದ್ಯಕ್ಕೆ



- **ಡೊನಾಲ್ಡ್ ಟ್ರಂಪ್‌ಗೆ ಡೆಡ್ ಹ್ಯಾಂಡ್ ಬೆದರಿಕೆ ನೀಡಿರುವ ರಷ್ಯಾ ಮಾಜಿ ಅಧ್ಯಕ್ಷ.**
- **ಡಿಮಿಟ್ರಿ ಮೆಡ್ವೆಡೆವ್ ಪ್ರಚೋದನಕಾರಿ ಹೇಳಿಕೆಗಳಿಗೆ ತಿರುಗೇಟು ನೀಡಿದ ಅಮೆರಿಕದ ಅಧ್ಯಕ್ಷ.**
- **ರಷ್ಯಾ ಸಮೀಪ ಎರಡು ಪರಮಾಣು ಜಲಾಂತರ್ಗಾಮಿಗಳನ್ನು ನಿಯೋಜಿಸಲು ಟ್ರಂಪ್ ಆದೇಶ.**

ಅಸ್ತಿತ್ವದಲ್ಲಿಲ್ಲದ ಡೆಡ್ ಹ್ಯಾಂಡ್ ಅಸ್ತ್ರ ಎಷ್ಟು ಅಪಾಯಕಾರಿಯಾಗಿರಬಹುದು ಎಂಬುದನ್ನು ನೆನಪಿಸಿಕೊಳ್ಳಬೇಕು ಎಂದು ಎಚ್ಚರಿಸಿದ್ದರು. ಪೆರಿಮೀಟರ್ ಎಂದೂ ಕರೆಯಲ್ಪಡುವ ಡೆಡ್ ಹ್ಯಾಂಡ್, ಶೀತಲ ಸಮರದ ಯುಗದಲ್ಲಿ ಸೋವಿಯತ್ ರಷ್ಯಾದ ಸ್ವಯಂಚಾಲಿತ, ಅರೆ-ಸ್ವಯಂಚಾಲಿತ ಪರಮಾಣು ಶಸ್ತ್ರಾಸ್ತ್ರ ನಿಯಂತ್ರಣ ವ್ಯವಸ್ಥೆ ಆಗಿತು.

ಒಂದು ವೇಳೆ ಯುದ್ಧದಲ್ಲಿ ರಷ್ಯಾದ ಇಡೀ ನಾಯಕತ್ವ ನಾಶವಾದರೂ, ಈ ವ್ಯವಸ್ಥೆ ಪರಮಾಣು ಪ್ರತಿದಾಳಿಯನ್ನು ಪ್ರಾರಂಭಿಸುವ ಸಾಮರ್ಥ್ಯವನ್ನು ಹೊಂದಿತ್ತು. ಭಾರತ ಮತ್ತು ರಷ್ಯಾ ವಿರುದ್ಧ ಡೊನಾಲ್ಡ್ ಟ್ರಂಪ್ ವಾಗ್ದಾಳಿ ಹೆಚ್ಚಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿದ್ದ ಡಿಮಿಟ್ರಿ ಮೆಡ್ವೆಡೆವ್, ರಷ್ಯಾ ಯಾವ ಸಮಯದಲ್ಲಾದರೂ ತನ್ನ ಘಾತಕ ಪರಮಾನಣು ಅಸ್ತ್ರಗಳನ್ನು ಅಮೆರಿಕ ವಿರುದ್ಧ ಬಳಸಬಹುದು ಎಂದು ನೇರವಾಗಿ ಎಚ್ಚರಿಕೆ ನೀಡಿದ್ದರು. ಇದಕ್ಕೆ ಅಷ್ಟೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಡೊನಾಲ್ಡ್ ಟ್ರಂಪ್, ಪ್ರಚೋದನಕಾರಿ ಹೇಳಿಕೆಗಳಿಗೆ ಪ್ರತಿಯಾಗಿ ನಮ್ಮ ಎರಡು ಪರಮಾಣು ಜಲಾಂತರ್ಗಾಮಿಗಳನ್ನು ಸೂಕ್ತ ಪ್ರದೇಶದಲ್ಲಿ ನಿಯೋಜಿಸುವಂತೆ ಆದೇಶ ನೀಡಿದ್ದೇನೆ ಎಂದು ಹೇಳಿದ್ದಾರೆ. ಉಕ್ರೇನ್‌ನಲ್ಲಿ ಶಾಂತಿಗಾಗಿ ತನ್ನದೇ ಆದ ನಿಯಮಗಳನ್ನು ನಿಗದಿಪಡಿಸಿರುವ ಮಾಸ್ಕೋ, ಕದನ ವಿರಾಮ ಒಪ್ಪಂದಕ್ಕಾಗಿ ಡೊನಾಲ್ಡ್ ಟ್ರಂಪ್ ಅವರ ಗಡುವನ್ನು ಪಾಲಿಸುವ ಯಾವುದೇ ಸೂಚನೆಯನ್ನು ತೋರಿಸಿಲ್ಲ. ಇದರಿಂದ ಕುಪಿತರಾಗಿರುವ ಡೊನಾಲ್ಡ್ ಟ್ರಂಪ್, ರಷ್ಯಾ ಸಮೀಪ ಎರಡು ಪರಮಾಣು ಸಬ್‌ಮರೀನ್‌ಗಳನ್ನು ನಿಯೋಜಿಸುವ ಮೂಲಕ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ. ರಷ್ಯಾದ ಮಾಜಿ ಅಧ್ಯಕ್ಷರಾಗಿರುವ ಡಿಮಿಟ್ರಿ ಮೆಡ್ವೆಡೆವ್, ನಿರಂತರವಾಗಿ ಅಮೆರಿಕಕ್ಕೆ ಬೆದರಿಕೆ ಹಾಕುತ್ತಿದ್ದಾರೆ. ಡೊನಾಲ್ಡ್ ಟ್ರಂಪ್ ಅವರ ನೀತಿಗಳನ್ನು ಟೀಕಿಸುತ್ತಿರುವ ಮೆಡ್ವೆಡೆವ್, ರಷ್ಯಾವನ್ನು ಕೆಣಕಿದರೆ ಮೂರನೇ ವಿಶ್ವಯುದ್ಧ ಖಚಿತ ಎಂದು ಎಚ್ಚರಿಸಿದ್ದಾರೆ. ಮಧ್ಯಪ್ರಾಚ್ಯ ಬಿಕ್ಕಟ್ಟು ಸಂದರ್ಭದಲ್ಲೂ ಮೆಡ್ವೆಡೆವ್, ಇರಾನ್‌ಗೆ ಪರಮಾಣು ಸಿಡಿತಲೆ ಪೂರೈಕೆಗೆ ಅನೇಕ ರಾಷ್ಟ್ರಗಳು ಸಿದ್ಧವಾಗಿವೆ ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು.

### ಬೆದರಿಕೆಗಳಿಗೆ ಟ್ರಂಪ್ ತಿರುಗೇಟು

**ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ಅವರ ನಡುವಿನ ವಾಕ್ಸಮರ ತಾರಕಕ್ಕೇರಿದ್ದು, ಮೆಡ್ವೆಡೆವ್ ಅವರ ದಾಳಿಯ ಬೆದರಿಕೆಗಳಿಗೆ ಟ್ರಂಪ್ ತಿರುಗೇಟು ನೀಡಿದ್ದಾರೆ. ರಷ್ಯಾದ ಸಮೀಪ ಎರಡು ಪರಮಾಣಿ ಜಲಾಂತರ್ಗಾಮಿ ನೌಕೆಗಳನ್ನು ನಿಯೋಜಿಸುವಂತೆ ಆದೇಶ ನೀಡಿರುವ ಅವರು, ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವವರಿಗೆ ತಕ್ಕ ಶಾಸ್ತಿ ಕಾದಿದೆ ಎಂದು ಎಚ್ಚರಿಸಿದ್ದಾರೆ. ಟ್ರಂಪ್ ಅವರ ಈ ನಿರ್ಧಾರ ಮಾಸ್ಕೋ, ವಾಷಿಂಗ್ಟನ್ ಡಿಸಿ ನಡುವಿನ ಸಂಬಂಧಗಳನ್ನು ಮತ್ತಷ್ಟು ಸೂಕ್ಷ್ಮಗೊಳಿಸಿದೆ.**

# ಅಕ್ಕ, ತಮ್ಮನನ್ನು ಕೊಂದು ಸುಟ್ಟು ಹಾಕಿದ ಯುವಕ

**ಪಾಟ್ನಾ:** ತನ್ನೊಂದಿಗಿನ ಸಂಬಂಧ ಕಡಿದುಕೊಂಡು ಬೇರೊಬ್ಬನೊಂದಿಗೆ ಸಲುಗೆಯಿಂದ ಇದ್ದಾಳೆ ಎಂದು ಅನುಮಾನಿಸಿ ಯುವಕನೊಬ್ಬ ತನ್ನ ಗೆಳೆಯನೊಂದಿಗೆ ಸೇರಿ 14 ವರ್ಷದ ಬಾಲಕಿಯನ್ನು, ಆಕೆಯ ತಮ್ಮನನ್ನು ಕೊಲೆ ಮಾಡಿ ಬೆಂಕಿ ಹಚ್ಚಿ ಸುಟ್ಟುಹಾಕಿರುವ ಘಟನೆ ಪಾಟ್ನಾ ಜಿಲ್ಲೆಯ ನಾಗವಾನ್ ಗ್ರಾಮ ನಡೆದಿದೆ.

ಶುಭಂ ಅಲಿಯಾಸ್ ಸನ್ನಿ ಕುಮಾರ್, ರೋಷನ್ ಕುಮಾರ್ ಕೊಲೆ ಆರೋಪಿಗಳು. ಅಕ್ಕ-ತಮ ಇಬ್ಬರು ಶಾಲೆಯಿಂದ ಮನೆಗೆ ವಾಪಸ್ಸಾದ ಸಂದರ್ಭದಲ್ಲಿ ಶುಭಮ್ ಅಲಿಯಾಸ್ ಸನ್ನಿಕುಮಾರ್, ರೋಶನ್ ಕುಮಾರ್ ಅಲ್ಲಿಗೆ ಬಂದು ಏಕಾಏಕಿ ಬಾಲಕಿಯ ಕುತ್ತಿಗೆ ಹಿಸುಕಿ ಕೊಂದಿದ್ದಾರೆ. ಆಕೆಯ ತಮನನ್ನು ಇಟ್ಟಿಗೆಯಿಂದ ಹೊಡೆದು ಸಾಯಿಸಿದ್ದು, ನಂತರ ಮೃತದೇಹಗಳಿಗೆ ಬೆಂಕಿ ಹಚ್ಚಿದ್ದಾರೆ. ಬೆಂಕಿಯಿಂದ ಹೊಗೆ ಬರುತ್ತಿದ್ದದ್ದನ್ನು ಕಂಡುಕೊಂಡ ನೆರೆಹೊರೆಯವರು ಸಂತ್ರಸ್ತರ ತಾಯಿಯ ಗಮನಕ್ಕೆ ತಂದಾಗ ಮಕ್ಕಳನ್ನು ಸುಟ್ಟು ಹಾಕಿರುವುದು ಗೊತ್ತಾಗಿದೆ. ಸಂತ್ರಸ್ತ ಮಕ್ಕಳ ತಾಯಿ ಪಾಟ್ನಾದ ಏಮ್ಸ್‌ನ ಭದ್ರತಾ ಸಿಬ್ಬಂದಿಯಾಗಿದ್ದಾರೆ.

**ಘಟನೆ ವಿವರ:** ಆರೋಪಿಗಳು ಒಂದು ವಾರದ ಹಿಂದೆಯೇ ಕೊಲೆಗೆ ಯೋಜನೆ ರೂಪಿಸಿದ್ದರು. ಸುಭಮ್ ಕೊಲೆ ಮಾಡಿದ್ದು, ರೋಶನ್‌ಕುಮಾರ್ ಸಾಕ್ಷ್ಯ ನಾಶಮಾಡಲು ಸಹಾಯ ಮಾಡಿದ್ದಾನೆ ಎಂದು ಪಾಟ್ನಾದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕೇಯ್ ಕೆ.ಶರ್ಮಾ ತಿಳಿಸಿದ್ದಾರೆ. ಇಬ್ಬರೂ ಆರೋಪಿಗಳು ಬಲಿಪಶುಗಳ ಮನೆಗೆ ಹೋದರು. ಸುಭಮ್ ಮೊದಲು ಮಲಗಿದ್ದ ಸಹೋದರನ ಮೇಲೆ ಇಟ್ಟಿಗೆಯಿಂದ ದಾಳಿ ಮಾಡಿ, ನಂತರ ಬಾಲಕಿಯ ಮೇಲೆ ಹಲ್ಲೆ ನಡೆಸಿ ಕತ್ತು ಹಿಸುಕಿದರು ಎಂದು ಅವರು ಹೇಳಿದರು.

> **ಆರೋಪಿಗಳು ಅವರ ದೇಹದ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ. ಹುಡುಗಿ ಬೇರೊಬ್ಬ ಹುಡುಗನೊಂದಿಗೆ ಸಂಬಂಧ ಹೊಂದಿದ್ದಾಳೆಂದು ಸುಭಮ್ ಅನುಮಾನಿಸಿದ್ದ. ಈ ನಡುವೆ ಯುವತಿ ಆತನೊಂದಿಗೆ ಮಾತನಾಡಲು ಹಿಂದೇಟು ಹಾಕುತ್ತಿದ್ದಳು. ಇದರಿಂದ ಆತ ಇನ್ನಷ್ಟು ಕುಪಿತಗೊಂಡಿದ್ದ.** -ಎಸ್‌ಎಸ್‌ಪಿ

# ನಿತಿನ್ ಗಡ್ಕರಿ ನಿವಾಸಕ್ಕೆ ಬಾಂಬ್ ಬೆದರಿಕೆ

**ನಾಗ್ಪುರ:** ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ನಾಗುರದ ನಿವಾಸಕ್ಕೆ ಬಾಂಬ್ ಬೆದರಿಕೆ ಹಾಕಿದ್ದ ವ್ಯಕ್ತಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಭಾನುವಾರ ಬೆಳಿಗ್ಗೆ ನಗರ ಪೊಲೀಸ್ ನಿಯಂತ್ರಣ ಕೊಠಡಿಗೆ ತುರ್ತು ಸಂಖ್ಯೆ 112ಕ್ಕೆ ಕರೆ ಮಾಡಿದ್ದ ಆರೋಪಿ, ಸಚಿವರ ನಿವಾಸಕ್ಕೆ ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದ. ಇದರಿಂದ ಅಧಿಕಾರಿಗಳು ಆತಂಕಕ್ಕೆ ಒಳಗಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಕರೆ ಮಾಡಿದ ಮೊಬೈಲ್ ಸಂಖ್ಯೆಯನ್ನು ಪತ್ತೆಹಚ್ಚಿದ್ದು, ಕರೆ ಬಂದ ಸ್ಥಳದ ಆಧಾರದ ಮೇಲೆ ವಿಮಾ ದವಾಖಾನಾ ಎಂಬಲ್ಲಿ ರಾವುತ್ ಅವರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ ಈ ಬೆದರಿಕೆ ಕರೆ ಸುಳ್ಳು ಎಂದು ಖಚಿತವಾಗಿತ್ತು.




ಆದರೆ ಆರೋಪಿಯು ಈ ಹಿಂದೆ ಇದೇ ಮಾದರಿಯ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆಯೇ ಎಂಬುವುದನ್ನು ತಿಳಿದುಕೊಳ್ಳಲು ವಿಚಾರಣೆಯನ್ನು ಮುಂದುವರಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಸಂಬಂಧ ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

# ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿತ; ಆರು ಮಂದಿ ಸಾವು, ಮೂವರಿಗೆ ಗಾಯ

**ಹೈದರಾಬಾದ್:** ಆಂಧ್ರಪ್ರದೇಶದ ಬಾಪಟ್ಲಾ ಜಿಲ್ಲೆಯ ಕಲ್ಲು ಕ್ವಾರಿಯೊಂದರಲ್ಲಿ ಬೃಹತ್ ಗ್ರಾನೈಟ್ ಬಂಡೆ ಕುಸಿದ ಪರಿಣಾಮ ಆರು ಮಂದಿ ಕಾರ್ಮಿರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. 15 ಮಂದಿ ಕಾರ್ಮಿಕರು ಗಣಿಗಾರಿಕೆ ಕೆಲಸದಲ್ಲಿ ತೊಡಗಿದ್ದರು. ಭಾನುವಾರ ಮಧ್ಯಾಹ್ನ ಈ ಘಟನೆ ಸಂಭವಿಸಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಮೃತರು ಒಡಿಶಾ ಮೂಲವದವರು. ನೀರಿನ ಸೋರಿಕೆಯಿಂದಾಗಿ ಬಂಡೆ ಆಯಾತಪ್ಪಿ ಬಿದ್ದಿದೆ ಎಂದು ಶಂಕಿಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಯಾವುದೇ ಸ್ಫೋಟ, ಭೂಕಂಪ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ಸಂಬಂಧ ಸಿಎಂ ಎನ್. ಚಂದ್ರಬಾಬು ನಾಯ್ಡು, ಮೃತರಿಗೆ ಸಂತಾಪ ಸೂಚಿಸಿದ್ದಾರೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದಾರೆ. ಗಾಯಾಳುಗಳಿಗೆ ಉತ್ತಮ ವೈದ್ಯಕೀಯ ನೆರವು ಒದಗಿಸಬೇಕು ಮತ್ತು ಮೃತರ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು ವೈಎಸ್‌ಆರ್‌ಸಿಪಿ ಮುಖ್ಯಸ್ಥ ವೈಎಸ್ ಜಗನ್ ಮೋಹನ್ ರೆಡ್ಡಿ ಆಗ್ರಹಿಸಿದ್ದಾರೆ.

# ತನಿಖೆಗಾಗಿ ಮತದಾರರ ಗುರುತಿನ ಚೀಟಿಯನ್ನು ಹಿಂದಿರುಗಿಸಿ

**ಪಟ್ನಾ:** ಅಧಿಕೃತವಾಗಿ ನೀಡದಿದ್ದರೂ ತಾವು ಹೊಂದಿರುವುದಾಗಿ ಹೇಳಿಕೊಂಡಿರುವ ಮತದಾರರ ಗುರುತಿನ ಚೀಟಿಯನ್ನು ತನಿಖೆಗಾಗಿ ಹಿಂದಿರುಗಿಸುವಂತೆ ರಾಷ್ಟ್ರೀಯ ಜನತಾ ದಳದ ನಾಯಕ ತೇಜಸ್ವಿ ಯಾದವ್ ಅವರಿಗೆ ಚುನಾವಣಾ ಆಯೋಗವು ಸೂಚಿಸಿದೆ. ನೀವು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ... ಮತದಾರರ ಗುರುತಿನ ಚೀಟಿಯ ಸಂಖ್ಯೆಯನ್ನು ಅಧಿಕೃತವಾಗಿ ನೀಡಲಾಗಿಲ್ಲ ಎಂದು ಹೇಳಿದ್ದೀರಿ. ಈ ಕುರಿತು ವಿವರವಾದ ತನಿಖೆ ನಡೆಸುವ ಸಲುವಾಗಿ ಈಗ ನಿಮ್ಮ ಬಳಿ ಎಪಿಕ್ ಕಾರ್ಡ್ ಅನ್ನು ಕೂಡಲೇ ಹಿಂದಿರುಗಿಸಬೇಕು ಎಂದು ಚುನಾವಣಾ ಆಯೋಗವು ಪತ್ರದಲ್ಲಿ ಉಲ್ಲೇಖಿಸಿದೆ.



**ಏತನ್ಮಧ್ಯೆ, ಬಿಹಾರದ ಆಡಳಿತಾರೂಢ ಎನ್‌ಡಿಎ ಸರ್ಕಾರದ ವಕ್ತಾರರಾದ ಅಜಯ್ ಅಲೋಕ್, ನೀರಜ್ ಕುಮಾರ್, ರಾಜೇಶ್ ಭಟ್ ಇತರರು ಸುದ್ದಿಗೋಷ್ಠಿ ನಡೆಸಿದ್ದು, ಎರಡು ಎಪಿಕ್ ಕಾರ್ಡ್ ಹೊಂದಿದ್ದಕ್ಕಾಗಿ ತೇಜಸ್ವಿ ಯಾದವ್ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿದ್ದಾರೆ.**

2020ರ ವಿಧಾನಸಭಾ ಚುನಾವಣೆ ವೇಳೆ ತೇಜಸ್ವಿ ಯಾದವ್ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿನ ಸಂಖ್ಯೆ ಮತ್ತು ಈಗಿರುವ ಎಪಿಕ್ ಕಾರ್ಡ್ ಸಂಖ್ಯೆ ಎರಡು ಒಂದೇ ಆಗಿದೆ. ಒಂದು ವೇಳೆ ತೇಜಸ್ವಿ ಅವರು ಇನ್ನೊಂದು ಸಂಖ್ಯೆಯ ಎಪಿಕ್ ಕಾರ್ಡ್ ಹೊಂದಿದ್ದರೆ, ಅದು ತನಿಖೆಯ ವಿಷಯವಾಗುತ್ತದೆ ಎಂದು ಚುನಾವಣಾ ಆಯೋಗವು ತಿಳಿಸಿದೆ. ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಿ, ಚುನಾವಣಾ ಆಯೋಗವು ಪ್ರಕಟಿಸಿರುವ ಮತದಾರರ ಕರಡು ಪಟ್ಟಿಯಲ್ಲಿ ತನ್ನ ಹೆಸರು ಕಾಣೆಯಾಗಿದೆ ಎಂದು ತೇಜಸ್ವಿ ಯಾದವ್ ಆರೋಪಿಸಿದ್ದರು.

ಪತ್ರಿಕಾಗೋಷ್ಠಿಯೊಂದರಲ್ಲಿ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಇಪಿಐಸಿ ನಂಬರ್ ನಮೂದಿಸಿ ಯಾದವ್ ತಮ್ಮ ವಿವರಗಳನ್ನು ಪರಿಶೀಲಿಸಲು ಮುಂದಾಗಿದ್ದರು. ಆದರೆ, ವೆಬ್‌ಸೈಟ್‌ನಲ್ಲಿ ಯಾವುದೇ ವಿವರ ಲಭ್ಯವಾಗಿರಲಿಲ್ಲ. ಈ ಹಿನ್ನಲೆಯಲ್ಲಿ ಪ್ರತಿಕ್ರಿಯಿಸಿದ್ದ ಅವರು, ನೋಡಿ ನನ್ನ ಹೆಸರು, ವಿವರವೇ ಸಿಗುತ್ತಿಲ್ಲ. ಮತದಾರರ ಗುರುತಿನ ಚೀಟಿಯ ಸಂಖ್ಯೆಯನ್ನು ಬದಲಾಯಿಸಲಾಗಿದೆ. ನಾನು ಚುನಾವಣೆಯಲ್ಲಿ ಹೇಗೆ ಸ್ಪರ್ಧಿಸಲಿ ಎಂದು ಆರೋಪಿಸಿದ್ದರು.

# ಸಿದ್ದು, ಡಿಕೆಶಿ ನಿಲುವು ವಿವಾದವನ್ನು ಹುಟ್ಟುಹಾಕುವ ಸಾಧ್ಯತೆ

## ಭಾರತದ ಆರ್ಥಿಕತೆ ಸತ್ತಿದೆ' ಎಂದ ಟ್ರಂಪ್ ಹೇಳಿಕೆ ಸಮರ್ಥಿಸಿದ ರಾಹುಲ್ ಗಾಂಧಿಗೆ ಸಿದ್ದು, ಡಿಕೆಶಿ ಬೆಂಬಲ

**ನವದೆಹಲಿ:** ಭಾರತದ ಆರ್ಥಿಕತೆಯು ಸತ್ತುಹೋಗಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿದ ಸಮರ್ಥನೆಯನ್ನು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಬೆಂಬಲಸಿದ್ದಾರೆ. ಸಿದ್ದು ಹಾಗೂ ಡಿಕೆಶಿ ಅವರ ಈ ನಿಲುವು ವಿವಾದವನ್ನು ಹುಟ್ಟುಹಾಕುವ ಸಾಧ್ಯತೆ ಇದೆ.

**ರಾಹುಲ್‌ಗೆ ಸಿದ್ದರಾಮಯ್ಯ ಬೆಂಬಲ:** ನವೆಂಬರ್‌ನಲಿ ನಿಗದಿಯಾಗಿರುವ ಬೆಂಗಳೂರು ಟೆಕ್ ಶೃಂಗಸಭೆಗೆ ಪೂರ್ವಭಾವಿಯಾಗಿ ಆಯೋಜಿಸಿರುವ ರಾಜತಾಂತ್ರಿಕ ಕಾರ್ಯಕ್ರಮವೊಂದರಲ್ಲಿ ಸಿದ್ದರಾಮಯ್ಯ, ಡಿಕೆಶಿ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕಾರ್ಯಕ್ರಮದ ವೇಳೆ, ಗಾಂಧಿಯವರ ನಿಲುವು ಮತ್ತು ಕರ್ನಾಟಕದ ಹೂಡಿಕೆಯ ನಿಲುವಿನ ನಡುವಿನ ಸ್ಪಷ್ಟ ವೈರುಧ್ಯದ ಬಗ್ಗೆ ಕೇಳಿದಾಗ, ರಾಹುಲ್ ಗಾಂಧಿ ಹೇಳಿದ್ದು ನನ್ನ ಅಭಿಪ್ರಾಯವಾಗಿದೆ. ಭಾರತೀಯ ಆರ್ಥಿಕತೆಯು ನಿರ್ಜೀವ ಆರ್ಥಿಕತೆಯಾಗಿದೆ. ಆದರೆ, ಕರ್ನಾಟಕದ ಆರ್ಥಿಕತೆಯು ಭಾರತದ ಆರ್ಥಿಕತೆಯಿಂದ ಭಿನ್ನವಾಗಿದೆ. ನಾವು ತಂತ್ರಜ್ಞಾನದಲ್ಲಿ ಹೂಡಿಕೆಯನ್ನು ನಿರೀಕ್ಷಿಸುತ್ತಿದ್ದೇವೆ ಎಂದು ಸಿದ್ದರಾಮಯ್ಯ ಅವರು ಸುದ್ದಿಗಾರರಿಗೆ ತಿಳಿಸಿದರು. ಇದಕ್ಕೆ ಪೂರಕವಾಗಿ ಅಭಿಪ್ರಾಯವನ್ನು ಹಂಚಿಕೊಂಡಿರುವ ಶಿವಕುಮಾರ್, ಇದು ರಾಹುಲ್ ಗಾಂಧಿಯವರ ಹೇಳಿಕೆಯಲ್ಲ, ಇದು ಅಮೆರಿಕದ ಅಧ್ಯಕ್ಷರ ಹೇಳಿಕೆಯಾಗಿದೆ. ನಮ್ಮ ನಾಯಕರು ಏನೇ ಹೇಳಿದ್ದರೂ, ಅದನ್ನು ಟ್ರಂಪ್ ಅವರೇ ಹೇಳಿದ್ದಾರೆ ಎಂದು ಹೇಳಿದ್ದಾರೆ.




ಟ್ರಂಪ್ ಅವರೇ ಹೇಳಿದ್ದಾರೆ

**ಕರ್ನಾಟಕದಲ್ಲಿ ಹೂಡಿಕೆಗೆ ಡಿಕೆಶಿ ಮನವಿ:** ಇದೇ ವೇಳೆ ಆರ್ಥಿಕ ಟೀಕೆಗಳ ಹೊರತಾಗಿಯೂ ಕರ್ನಾಟಕದ ಹೂಡಿಕೆ ಮನವಿಯನ್ನು ಸಮರ್ಥಿಸಿಕೊಂಡಿರುವ ಡಿಕೆಶಿ, ಕರ್ನಾಟಕ ಬೇರೆ. ಭಾರತವನ್ನು ಬೆಂಗಳೂರಿನ ಮೂಲಕ ಕಾಣಬಹುದಾಗಿದೆ. ಅದನ್ನೇ (ದಿವಂಗತ ಬಿಜೆಪಿ ನಾಯಕ ಮತ್ತು ಮಾಜಿ ಪ್ರಧಾನಿ ಅಟಲ್ ಬಿಹಾರಿ) ವಾಜಪೇಯಿ ಅವರು ಒಮ್ಮೆ ಬೆಂಗಳೂರಿನಲ್ಲಿ ಹೇಳಿದ್ದರು.

ಪ್ರತಿಯೊಬ್ಬರೂ ಬೆಂಗಳೂರಿನ ಮೂಲಕ ಭಾರತಕ್ಕೆ ಬರಲು ಬಯಸುತ್ತಾರೆ. ನೀವು ಜಗತ್ತಿನ ಎಲ್ಲಿಯಾದರೂ ಹೋದರೆ, ಭಾರತವನ್ನು ಬೆಂಗಳೂರಿನ ಮೂಲಕ ನೋಡಲಾಗುತ್ತದೆ. ತಂತ್ರಜ್ಞಾನ ಎಲ್ಲೆಲ್ಲಿ ಇದೆಯೋ, ಅದು ಕರ್ನಾಟಕದಿಂದ ಕಾಣಿಸುತ್ತದೆ. ಇದು ದೇಶದ ಶಕ್ತಿಯಾಗಿದೆ ಎಂದು ಅವರು ಹೇಳಿದರು.

**ಬ್ರಿಡ್ಜ್ ಟು ಬೆಂಗಳೂರು ರಾಜತಾಂತ್ರಿಕ ಮಾತುಕತೆ:** ಇದೇವೇಳೆ ಬ್ರಿಡ್ಜ್ ಟು ಬೆಂಗಳೂರು ರಾಜತಾಂತ್ರಿಕ ಮಾತುಕತೆಯಲ್ಲಿ ಸಿದ್ದರಾಮಯ್ಯ ಅವರು ಕರ್ನಾಟಕದ ಆರ್ಥಿಕ ಸಾಮರ್ಥ್ಯವನ್ನು ಪ್ರಚುರ ಪಡಿಸಿದರು. ಕರ್ನಾಟಕ ಕೇವಲ ಸಾಂಸ್ಕೃತಿಕ ಕೇಂದ್ರವಲ್ಲ, ಅದು ಆರ್ಥಿಕ ಶಕ್ತಿಯಾಗಿದೆ. 337 ಬಿಲಿಯನ್ ಯುಎಸ್ ಡಾಲರ್ GSDP (ಒಟ್ಟು ರಾಜ್ಯ ದೇಶೀಯ ಉತ್ಪನ್ನ) ಯೊಂದಿಗೆ, ನಾವು ಭಾರತದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದ್ದು, ರಾಷ್ಟ್ರೀಯ ಜಿಡಿಪಿಗೆ ಶೇಕಡಾ ಒಂಬತ್ತು ಕೊಡುಗೆ ನೀಡುತ್ತಿದ್ದೇವೆ ಎಂದು ಅವರು ಹೇಳಿದರು. ರಾಜ್ಯವು 2024ರಲ್ಲಿ 64 ಶತಕೋಟಿ ಅಮೆರಿಕನ್ ಡಾಲರ್‌ಗಳ ಕೊಡುಗೆಯೊಂದಿಗೆ ಭಾರತದ ಮಾಹಿತಿ ತಂತ್ರಜ್ಞಾನ ರಫ್ತುಗಳಲ್ಲಿ ಮುಂಚೂಣಿಯಲ್ಲಿದೆ. ಇದು ರಾಷ್ಟ್ರದ ಒಟ್ಟು ಮಾಹಿತಿ ತಂತ್ರಜ್ಞಾನ ರಫ್ತಿನ ಮೂರನೇ ಒಂದು ಭಾಗವಾಗಿದೆ. ಸಿದ್ದರಾಮಯ್ಯ ಅವರು ಅಮೆರಿಕದ ಸಂಭಾವ್ಯ ವ್ಯಾಪಾರ ನೀತಿಗಳ ಬಗ್ಗೆಯೂ ಕಳವಳ ವ್ಯಕ್ತಪಡಿಸಿದರು. ಇದು ಕೇವಲ ಕರ್ನಾಟಕದ ಮೇಲೆ ಮಾತ್ರವಲ್ಲದೆ ಇಡೀ ದೇಶದ ಮೇಲೆ ಪರಿಣಾಮ ಬೀರುತ್ತದೆ. ಈ ಬಗ್ಗೆ ಸಂಬಂಧಿಸಿದ ಇಲಾಖೆಯೊಂದಿಗೆ ಚರ್ಚಿಸುತ್ತೇನೆ ಎಂದು ಅವರು ಹೇಳಿದರು.

### ಟೆಕ್ ಶೃಂಗ ಸಭೆಯ ಮೇಲೆ ಪರಿಣಾಮ

**ಭಾರತದ ಆರ್ಥಿಕತೆಯ ಕುರಿತು ಟ್ರಂಪ್ ಹೇಳಿಕೆಗೆ ರಾಹುಲ್ ಗಾಂಧಿ ನೀಡಿದ ಸಮರ್ಥನೆಯನ್ನು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಬೆಂಬಲಿಸಿದ್ದಾರೆ. ಕರ್ನಾಟಕದ ಆರ್ಥಿಕತೆಯು ಭಾರತದ ಆರ್ಥಿಕತೆಯಿಂದ ಭಿನ್ನವಾಗಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ, ತಂತ್ರಜ್ಞಾನದಲ್ಲಿ ಹೂಡಿಕೆಯನ್ನು ನಿರೀಕ್ಷಿಸುತ್ತಿದ್ದೇವೆ ಎಂದಿದ್ದಾರೆ. ಕರ್ನಾಟಕವು ಭಾರತದ ಮಾಹಿತಿ ತಂತ್ರಜ್ಞಾನ ರಫ್ತಿನಲ್ಲಿ ಮುಂಚೂಣಿಯಲ್ಲಿದೆ ಎಂದು ಅವರು ಸಮರ್ಥಿಸಿಕೊಂಡಿದ್ದಾರೆ. ಇವರ ಈ ಹೇಳಿಕೆ ವಿವಾದವನ್ನು ಹುಟ್ಟುಹಾಕುವ ಹಾಗೂ ಮುಂಬರುವ ಟೆಕ್ ಶೃಂಗ ಸಭೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.**

- **ಭಾರತದ ಆರ್ಥಿಕತೆಯು ಸತ್ತುಹೋಗಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆ ಸಮರ್ಥಿಸಿದ ಕೈ ನಾಯಕ ರಾಹುಲ್ ಗಾಂಧಿಗೆ ಕರ್ನಾಟಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಬೆಂಬಲ**
- **ಕರ್ನಾಟಕದ ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಅವರು ಕರ್ನಾಟಕದ ಆರ್ಥಿಕತೆಯು ಭಾರತದಿಂದ ವಿಭಿನ್ನವಾಗಿದೆ ಎಂದು ಹೇಳಿದ್ದು, ರಾಜ್ಯವು 337 ಬಿಲಿಯನ್ ಯುಎಸ್ ಡಾಲರ್ GSDPಗೆ ತಲುಪಿದೆ ಎಂದು ಹೇಳಿದ್ದಾರೆ.**
- **ಕರ್ನಾಟಕದ ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ ಟ್ರಂಪ್ ಅವರ ಹೇಳಿಕೆಗಳ ಕುರಿತು ಚರ್ಚೆ ಮಾಡುವುದಾಗಿ ತಿಳಿಸಿದರು.**

## ಮಿನಿ ನ್ಯೂಸ್

### ಉತ್ತರ ಪ್ರದೇಶ : ಕಾಲುವೆಗೆ ವಾಹನ ಉರುಳಿ ಬಿದ್ದು 11 ಮಂದಿ ಸಾವು

**ಗೊಂಡಾ:** ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಬೆಲ್ವಾ ಬಹುತಾ ಬಳಿ ಸರಯು ನೀರಿನ ಕಾಲುವೆಗೆ ವಾಹನ ಉರುಳಿ ಬಿದ್ದು 11 ಜನರು ಸಾವನ್ನಪ್ಪಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ ಮೃತರು ಸಿಹಗಾಂವ್ ಗ್ರಾಮದಿಂದ ಖಾರ್ಗುಪುರದ ಪೃಥ್ವಿನಾಥ ದೇವಸ್ಥಾನದಲ್ಲಿ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಇಟಿಯಾಥೋಕ್ ಪೊಲೀಸ್ ಠಾಣೆಯ ಅಧಿಕಾರಿ ಕೃಷ್ಣ ಗೋಪಾಲ್ ರೈ ಹೇಳಿದ್ದಾರೆ. ವಾಹನದಲ್ಲಿ ಚಾಲಕ ಸೇರಿದಂತೆ 15 ಜನರು ಇದ್ದರು ಎಂದು ತಿಳಿದುಬಂದಿದ್ದು, ಅಪಘಾತದ ವೇಳೆ ಗ್ರಾಮಸ್ಥರು ಮತ್ತು ರಕ್ಷಣಾ ತಂಡಗಳ ಸಹಾಯದಿಂದ, ಮುಳುಗಿದ ವಾಹನದಿಂದ 11 ಶವಗಳನ್ನು ಹೊರತೆಗೆಯಲಾಯಿತು ಎಂದು ತಿಳಿಸಿದರು.

ಗಂಭೀರ ಸ್ಥಿತಿಯಲ್ಲಿದ್ದ ಇತರ ನಾಲ್ವರು ಪ್ರಯಾಣಿಕರನ್ನು ರಕ್ಷಿಸಿ ಹತ್ತಿರದ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ ಮತ್ತು ಘಟನೆಯ ತನಿಖೆಯನ್ನು ಪ್ರಾರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಪಘಾತದಲ್ಲಿ ಸಾವನ್ನಪ್ಪಿದವರಿಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಂತಾಪ ಸೂಚಿಸಿದ್ದಾರೆ ಮತ್ತು ಮೃತರ ಕುಟುಂಬಗಳಿಗೆ 5 ಲಕ್ಷ ರೂಪಾಯಿಗಳ ಆರ್ಥಿಕ ನೆರವು ಘೋಷಿಸಿದ್ದಾರೆ.

### ಪತ್ನಿಯೊಂದಿಗೆ ಮಾತನಾಡಿದ ವ್ಯಕ್ತಿಯನ್ನು ಇರಿದುಕೊಂದ ಲಿವ್ ಇನ್ ಪಾರ್ಟನರ್

**ಗುರುಗ್ರಾಮ:** ತನ್ನ ಪತ್ನಿಯೊಂದಿಗೆ ಮಾತನಾಡಿದ ವ್ಯಕ್ತಿಯನ್ನು ಆತನ ಲಿವ್ ಇನ್ ಪಾರ್ಟನರ್ ಚಾಕುವಿನಿಂದ ಎದೆಗೆ ಇರಿದು ಕೊಲೆ ಮಾಡಿರುವ ಘಟನೆ ಇಲ್ಲಿನ ಡಿಎಲ್‌ಎಫ್ ಫೇಸ್ 3 ಪ್ರದೇಶದಲ್ಲಿ ನಡೆದಿದೆ. 40 ವರ್ಷದ ಸ್ಕ್ರ್ಯಾಪ್ ವ್ಯಾಪಾರಿಯೊಬ್ಬ ತನ್ನ ಪತ್ನಿಯೊಂದಿಗೆ ಮಾತನಾಡುತ್ತಿದ್ದ ಕಾರಣಕ್ಕೆ ನಡೆದ ವಾಗ್ವಾದದ ನಂತರ ಆತನ ಲಿವ್-ಇನ್ ಪಾರ್ಟನರ್ ಆತನನ್ನು ಇರಿದು ಕೊಂದಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಗುರುಗ್ರಾಮದ ಬಲಿಯಾವಾಸ್ ಗ್ರಾಮದ ನಿವಾಸಿ ಹರೀಶ್ ಶರ್ಮಾ, 27 ವರ್ಷದ ಆರೋಪಿ ಯಶ್ಮೀತ್ ಕೌರ್ ಜೊತೆ ಒಂದು ವರ್ಷಕ್ಕೂ ಹೆಚ್ಚು ಕಾಲ ಲಿವ್-ಇನ್ ಸಂಬಂಧದಲ್ಲಿದ್ದರು. ಅವರು ಬಾಡಿಗೆ ಫ್ಲಾಟ್‌ನಲ್ಲಿ ವಾಸಿಸುತ್ತಿದ್ದರು.

ಶರ್ಮಾ ವಿವಾಹಿತರಾಗಿದ್ದರು, ಇಬ್ಬರು ಹೆಣ್ಣುಮಕ್ಕಳಿದ್ದರು, ಅವರು ತಮ್ಮ ಪತ್ನಿಯೊಂದಿಗೆ ಗುರುಗ್ರಾಮದಲ್ಲಿ ವಾಸಿಸುತ್ತಿದ್ದರು. ಅವರ ಪತ್ನಿ ಸ್ವಲ್ಪ ಸಮಯದಿಂದ ಆರೋಗ್ಯವಾಗಿರಲಿಲ್ಲ, ಮತ್ತು ಶರ್ಮಾ ಆಗಾಗ್ಗೆ ಅವಳೊಂದಿಗೆ ಮಾತನಾಡುತ್ತಿದ್ದರು, ಇದು ಕೌರ್ ಅವರನ್ನು ಕೆರಳಿಸಿತು ಎಂದು ಪೊಲೀಸರು ತಿಳಿಸಿದ್ದಾರೆ. ತಡರಾತ್ರಿ, ಕೌರ್ ಶರ್ಮಾ ತನ್ನ ಪತ್ನಿಯೊಂದಿಗೆ ಮಾತನಾಡುತ್ತಾ ಒಳಗೆ ಬಂದರು, ಈ ಸಂದರ್ಭದಲ್ಲಿ ಇಬ್ಬರ ನಡುವೆ ಜಗಳವಾಯಿತು. ಈ ಸಂದರ್ಭದಲ್ಲಿ ಕೋಪದ ಭರದಲ್ಲಿ, ಕೌರ್ ಶರ್ಮಾ ಆತನ ಎದೆಗೆ ಅಡುಗೆಮನೆಯ ಚಾಕುವಿನಿಂದ ಇರಿದಳು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು ಆದರೆ ಅಲ್ಲಿಗೆ ಬರುವಷ್ಟರಲ್ಲಿ ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು. ಬಲಿಪಶುವಿನ ಸ್ನೇಹಿತ ವಿಜಯ್ ಅಲಿಯಾಸ್ ಸೇಥಿ, ಮತ್ತೊಂದು ಕೋಣೆಯಲ್ಲಿದ್ದರು ಎಂದು ವರದಿಯಾಗಿದೆ. ಕೌರ್, ವಿಜಯ್ ಇಬ್ಬರೂ ಕೊಲೆಯನ್ನು ಯೋಜಿಸಿದ್ದಾರೆ ಎಂದು ಬಲಿಪಶುವಿನ ಸೋದರಳಿಯ ದೂರಿನಲ್ಲಿ ಆರೋಪಿಸಿದ್ದಾರೆ. ದೆಹಲಿಯ ಅಶೋಕ್ ನಗರದ ನಿವಾಸಿ ಕೌರ್ ಅವರನ್ನು ಬಂಧಿಸಲಾಗಿದ್ದು, ಅಪರಾಧವನ್ನು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ, ಕೊಲೆಗೆ ಬಳಸಿದ್ದ ಆಯುಧ, ರಕ್ತದ ಕಲೆಯ ಟಿ-ಶರ್ಟ್ ಅನ್ನು ಫ್ಲಾಟ್‌ನಿಂದ ವಶಪಡಿಸಿಕೊಳ್ಳಲಾಗಿದೆ ಎಂದರು.

### ಜಮ್ಮು, ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಪ್ರಾಚೀನ ಹಿಂದೂ ವಿಗ್ರಹಗಳ ಪತ್ತೆ

**ಅನಂತನಾಗ್:** ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯ ಬುಗ್ಗೆಯೊಂದರ ನವೀಕರಣಕ್ಕಾಗಿ ಉತ್ಖನನ ಕಾರ್ಯದ ಸಮಯದಲ್ಲಿ ಪ್ರಾಚೀನ ಹಿಂದೂ ವಿಗ್ರಹಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದಕ್ಷಿಣ ಕಾಶ್ಮೀರ ಜಿಲ್ಲೆಯ ಐಶುಖಮ್‌ನ ಸಲಿಯಾ ಪ್ರದೇಶದ ಕಾರ್ಕೂಟ್ ನಾಗ್‌ನಲ್ಲಿ ವಿಗ್ರಹಗಳು ಮತ್ತು ಶಿವಲಿಂಗಗಳು ಪತ್ತೆಯಾಗಿವೆ. ಈ ಸ್ಥಳವು ಕಾಶ್ಮೀರವನ್ನು 625 ರಿಂದ 855 ರವರೆಗೆ ಆಳಿದ ಕಾರ್ಕೂಟ ರಾಜವಂಶದೊಂದಿಗೆ ಸಂಬಂಧ ಹೊಂದಿರುವ ಕಾಶ್ಮೀರಿ ಪಂಡಿತರಿಗೆ ಮಹತ್ವದ್ದಾಗಿದೆ. ಲೋಕೋಪಯೋಗಿ ಇಲಾಖೆಯು ವಸಂತಕಾಲದಲ್ಲಿ ಪುನರುಜ್ಜೀವನ, ಪುನಃಸ್ಥಾಪನೆ ಕಾರ್ಯಗಳನ್ನು ಕೈಗೊಳ್ಳುತ್ತಿದೆ, ಕಾರ್ಮಿಕರು ಉತ್ಖನನ ಕಾರ್ಯದ ಸಮಯದಲ್ಲಿ ವಿಗ್ರಹಗಳನ್ನು ವಶಪಡಿಸಿಕೊಂಡರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಜಮ್ಮು, ಕಾಶ್ಮೀರದ ಆರ್ಕೈವ್ಸ್, ಪುರಾತತ್ವ, ವಸ್ತು ಸಂಗ್ರಹಾಲಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ವಿಗ್ರಹಗಳ ವಯಸ್ಸು ಮತ್ತು ಮೂಲವನ್ನು ನಿರ್ಧರಿಸಲು ವಸ್ತು, ಡೇಟಿಂಗ್ ಪರೀಕ್ಷೆಗಾಗಿ ಶ್ರೀನಗರಕ್ಕೆ ಕಳುಹಿಸಲಾಗುವುದು ಎಂದು ಅವರು ಹೇಳಿದರು. ನಾವು ಅವುಗಳನ್ನು ಎಸ್‌ಪಿಎಸ್ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರಿಸುತ್ತೇವೆ, ಅಲ್ಲಿ ಅವುಗಳನ್ನು ಸಂಶೋಧನಾ ವಿದ್ವಾಂಸರು, ಇಲಾಖೆ ಅಧ್ಯಯನ ಮಾಡುತ್ತದೆ ಎಂದು ಅವರು ಹೇಳಿದರು. ಕಾಶ್ಮೀರಿ ಪಂಡಿತರೊಬ್ಬರ ಪ್ರಕಾರ, ಈ ಪ್ರದೇಶದಲ್ಲಿ ಕಾರ್ಕೂಟ ರಾಜವಂಶದ ಪ್ರಭಾವವಿದೆ, ಆದ್ದರಿಂದ ಅಲ್ಲಿ ಒಂದು ದೇವಾಲಯ ಇದ್ದಿರಬಹುದು, ಸಂರಕ್ಷಣೆಗಾಗಿ ಯಾರಾದರೂ ಅವುಗಳನ್ನು ಅಲ್ಲಿ ಇರಿಸಿರಬಹುದು.

ಜಿಲ್ಲಾ ಕೇಂದ್ರದಿಂದ ಸುಮಾರು 16 ಕಿ.ಮೀ ದೂರದಲ್ಲಿರುವ ಈ ಸ್ಥಳವು ಯಾತ್ರಾ ಕೇಂದ್ರವಾಗಿತ್ತು ಎಂದು ಅವರು ಹೇಳಿದರು. ಇವುಗಳನ್ನು ಪವಿತ್ರ ಕೊಳದಿಂದ ಹೊರತೆಗೆಯಲಾಗಿದೆ. ಕೆಲವು ಶಿವಲಿಂಗಗಳು, ಶಿಲ್ಪ, ಇತರ ವಸ್ತುಗಳನ್ನು ಹೊರತೆಗೆಯಲಾಗಿದೆ. ಅವುಗಳನ್ನು ರಕ್ಷಿಸಬೇಕೆಂದು ನಾವು ಬಯಸುತ್ತೇವೆ. ಇಲ್ಲಿ ಹಿಂದೆ ಒಂದು ದೇವಾಲಯವಿತ್ತು ಎಂದು ನಾವು ಕೇಳಿದ್ದೇವೆ, ಆದ್ದರಿಂದ ಇಲ್ಲಿ ಹೊಸ ದೇವಾಲಯವನ್ನು ನಿರ್ಮಿಸಿ ಈ ಶಿವಲಿಂಗಗಳನ್ನು ಅಲ್ಲಿ ಇಡಬೇಕು ಎಂದು ಅವರು ಹೇಳಿದರು.

### ಕಳ್ಳಸಾಗಣೆ; 350 ಕೋಟಿ ಮೌಲ್ಯದ ಮಾದಕವಸ್ತು ಜಪ್ತಿ, ಬಂಧನ

**ಐಜ್ವಾಲ್:** ಮಿಜೋರಾಂನಲ್ಲಿ ಅತಿದೊಡ್ಡ ಮಾದಕವಸ್ತು ಕಳ್ಳಸಾಗಣೆ ಜಾಲವನ್ನು ಭೇದಿಸಿದ ಪೊಲೀಸರು ಸುಮಾರು 350 ಕೋಟಿ ಮೌಲ್ಯದ ಕ್ರಿಸ್ಟಲ್ ಮೆಥಾಂಫೆಟಮೈನ್ ಮತ್ತು ಹೆರಾಯಿನ್ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ. ಖಚಿತ ಮಾಹಿತಿ ಆಧರಿಸಿ ಅಪರಾಧ ತನಿಖಾ ಇಲಾಖೆ, ಐಜ್ವಾಲ್‌ನ ವಿಶೇಷ ಮಾದಕವಸ್ತು ಪೊಲೀಸ್ ಠಾಣೆಯ ಅಧಿಕಾರಿಗಳು ಈ ಕಾರ್ಯಾಚರಣೆ ನಡೆಸಿದ್ದಾರೆ. ಜೆಮಾಬಾಕ್ ಎಂಬಲ್ಲಿ ಮಾದಕವಸ್ತುಗಳನ್ನು ಒಳಗೊಂಡ ಟ್ರಕ್‌ವೊಂದನ್ನು ವಶಪಡಿಸಿಕೊಂಡ ಅಧಿಕಾರಿಗಳು, ಒಬ್ಬನನ್ನು ಬಂಧಿಸಿದ್ದಾರೆ. ಈ ವೇಳೆ ಸುಮಾರು 300 ಕೋಟಿ ಮೌಲ್ಯದ 20 ಕೆ.ಜಿ ಕ್ರಿಸ್ಟಲ್ ಮೆಥಾಂಫೆಟಮೈನ್, 1.652 ಕೆ.ಜಿ ಹೆರಾಯಿನ್‌ನನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆರೋಪಿಯನ್ನು ಐಜ್ವಾಲ್ ನಿವಾಸಿ ಲಾಲ್ತಜುವಾಲಾ (45) ಎಂದು ಗುರುತಿಸಲಾಗಿದೆ.

ಈಗ ಎಲ್ಲೆಲ್ಲೂ ಈ ಸ್ಟಾರ್ ನಿರೂಪಕಿಯ ಮದುವೆಯದ್ದೇ ಮಾತುಕತೆ. ಮದುವೆ ಯಾವಾಗ ಎನ್ನುತ್ತಿದ್ದ ಅಭಿಮಾನಿಗಳಿಗೆ ಈ ತಿಂಗಳ ಕೊನೆಯಲ್ಲಿ ಉತ್ತರ ಸಿಗಲಿದೆ. ಹೌದು, ಕನ್ನಡದ ಸ್ಟಾರ್ ನಿರೂಪಕಿ ಅನುಶ್ರೀ ಅವರು ಈ ತಿಂಗಳು ಅಂದರೆ, ಆಗಸ್ಟ್ 28ಕ್ಕೆ ಅದ್ದೂರಿಯಾಗಿ ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ. ಈಗ ಎಲ್ಲೆಲ್ಲೂ ಈ ಸ್ಟಾರ್ ನಿರೂಪಕಿಯ ಮದುವೆಯದ್ದೇ ಮಾತುಕತೆ. ಮದುವೆ ಯಾವಾಗ ಎನ್ನುತ್ತಿದ್ದ ಅಭಿಮಾನಿಗಳಿಗೆ ಈ



## ವೇದಿಕೆ ಮೇಲೆ ಭಾವಿ ಪತಿಗೆ ಪ್ರಪೋಸ್ ಮಾಡಿದ್ರು ಅನುಶ್ರೀ

ತಿಂಗಳ ಕೊನೆಯಲ್ಲಿ ಉತ್ತರ ಸಿಗಲಿದೆ. ಹೌದು, ಕನ್ನಡದ ಸ್ಟಾರ್ ನಿರೂಪಕಿ ಅನುಶ್ರೀ ಅವರು ಈ ತಿಂಗಳು ಅಂದರೆ, ಆಗಸ್ಟ್ 28ಕ್ಕೆ ಅದ್ದೂರಿಯಾಗಿ ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ. ಬೆಂಗಳೂರು ಮೂಲದ ಕಾರ್ಪೊರೇಟ್ ಉದ್ಯೋಗಿಯನ್ನು ಅನುಶ್ರೀ ವಿವಾಹ ಆಗಲಿದ್ದಾರೆ. ಕುಟುಂಬಸ್ಥರು ನೋಡಿದ ಹುಡುಗನ ಜೊತೆ ಸಪ್ತಪದಿ ತುಳಿಯಲಿದ್ದಾರೆ. ಮಾಹಿತಿಗಳ ಪ್ರಕಾರ ಬೆಂಗಳೂರಿನಲ್ಲಿಯೇ ಗ್ರ್ಯಾಂಡ್ ಆಗಿ ಮದುವೆ ನಡೆಯಲಿದೆ ಎನ್ನಲಾಗಿದೆ. ಇನ್ನೂ, ಇದರ ಮಧ್ಯೆ ವೇದಿಕೆ ಮೇಲೆ ಭಾವಿ ಪತಿಗೆ I LOVE YOU ಹೇಳಿ ನಾಚಿ ನೀರಾಗಿದ್ದಾರೆ. ಹೌದು, ಜೀ ಕನ್ನಡ ರಿಲೀಸ್ ಮಾಡಿರೋ ಪ್ರೋಮೋದಲ್ಲಿ ಮಹಾನಟಿ ವೇದಿಕೆ ಮೇಲೆ ನಿಶ್ವಿಕಾ ನಾಯ್ಡು, ಅನು ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಬೇಕು ಅಂದ್ರೆ ಹೇಗೆ ಹೇಳ್ತೀರಾ ಅಂತಾರೆ. ಆಗ ಅನುಶ್ರೀ, ನನ್ನ ಜೀವನದಲ್ಲಿ ಪೂರ್ಣಚಂದ್ರನಾಗಿ ನೀ ಬೇಗ ಬಾ I LOVE YOU ಎಂದು ಹೇಳುತ್ತಲೇ ನಾಚಿಕೊಂಡಿದ್ದಾರೆ. ಆಗ ಅನುಶ್ರೀ ಅವರು ಭಾವಿ ಪತಿಗೆ ವೇದಿಕೆ ಮೇಲೆ ಪ್ರಪೋಸ್ ಮಾಡಿದ್ದನ್ನು ಕೇಳಿ ಎಲ್ಲರೂ ಫುಲ್ ಖುಷ್ ಆಗಿದ್ದಾರೆ. ಮಂಗಳೂರಿನ ಸೂರತ್ಕಲ್ ಮೂಲದ ಅನುಶ್ರೀ, ತಮ್ಮ ಚುರುಕಾದ ನಿರೂಪಣೆಯಿಂದ ಅಪಾರ ಅಭಿಮಾನಿಗಳ ಬಳಗ ಹೊಂದಿದ್ದಾರೆ.



## ವಾಸುಕಿ ವೈಭವ್ ಮನೆಯಲ್ಲಿ ಡಬಲ್ ಸಂಭ್ರಮ..

ಏನಿರಬಹುದು ಗೆಸ್ ಮಾಡಿ



ಸ್ಯಾಂಡಲ್‌ವುಡ್‌ನ ಯಂಗ್ ಅಂಡ್ ಟ್ಯಾಲೆಂಟೆಡ್ ಮ್ಯೂಸಿಕ್ ಡೈರೆಕ್ಟರ್ ವಾಸುಕಿ ವೈಭವ್ ಮನೆಯಲ್ಲಿ ಡಬಲ್ ಸಂಭ್ರಮ ಮನೆ ಮಾಡಿದೆ. ತಾಯಂದಿರ ದಿನದಂದೇ ಗಾಯಕ ವಾಸುಕಿ ವೈಭವ್ ಅವರು ಗುಡ್‌ನ್ಯೂಸ್ ಕೊಟ್ಟಿದ್ದರು.

ಸ್ಯಾಂಡಲ್‌ವುಡ್‌ನ ಯಂಗ್ ಅಂಡ್ ಟ್ಯಾಲೆಂಟೆಡ್ ಮ್ಯೂಸಿಕ್ ಡೈರೆಕ್ಟರ್ ವಾಸುಕಿ ವೈಭವ್ ಮನೆಯಲ್ಲಿ ಡಬಲ್ ಸಂಭ್ರಮ ಮನೆ ಮಾಡಿದೆ. ತಾಯಂದಿರ ದಿನದಂದೇ ಗಾಯಕ ವಾಸುಕಿ ವೈಭವ್ ಅವರು ಗುಡ್‌ನ್ಯೂಸ್ ಕೊಟ್ಟಿದ್ದರು. ಇದೀಗ ಸಿಂಗರ್ ವಾಸುಕಿ ವೈಭವ್ ಮನೆಯಲ್ಲಿ ಇಂದು ಎರಡೆರಡು ಸಂಭ್ರಮ ಮನೆ ಮಾಡಿದೆ. ವಾಸುಕಿ ವೈಭವ್ ಹಾಗೂ ಬೃಂದಾ ವಿಕ್ರಮ್ ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ. ಇದೇ ವಿಚಾರವನ್ನು ವಾಸುಕಿ ವೈಭವ್ ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿಕೊಂಡಿದ್ದರು. ವಿಶೇಷ ಎಂದರೆ ತಾಯಂದಿರ ದಿನದಂದೇ ಗಾಯಕ ವಾಸುಕಿ ವೈಭವ್ ಅವರು ಗುಡ್ ನ್ಯೂಸ್ ಕೊಟ್ಟಿದ್ದರು.

ಇನ್ನೂ, ಇಂದು ವಾಸುಕಿ ವೈಭವ್ ಅವರ ಪತ್ನಿ ಬೃಂದಾ ವಿಕ್ರಮ್ ಅವರ ಹುಟ್ಟುಹಬ್ಬ. ಮತ್ತು ಇಂದು ಸ್ನೇಹಿತರ ದಿನಾಚರಣೆ ಇದೆ. ಹೀಗಾಗಿ ಸ್ಟಾರ್ ದಂಪತಿ ಮನೆಯಲ್ಲಿ ಸಂಭ್ರಮ ಮನೆ ಮಾಡಿದೆ. ಅಲ್ಲದೇ ಪತ್ನಿ ಹುಟ್ಟುಹಬ್ಬದ ನಿಮಿತ್ತ ವಾಸುಕಿ ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಪತ್ನಿಯ ಬೇಬಿ ಬಂಪ್ ಫೋಟೋ ಶೇರ್ ಮಾಡಿಕೊಂಡಿದ್ದಾರೆ. ಅದರ ಜೊತೆಗೆ ''ಹುಟ್ಟುಹಬ್ಬದ ಶುಭಾಶಯಗಳು ಹೆಂಡ್ತಿ.. ಇಂದು ಸ್ನೇಹಿತರ ದಿನವೂ ಹೌದು. ಈ ಹುಟ್ಟುಹಬ್ಬವು ವಿಶೇಷವಾದದ್ದು'' ಅಂತ ಬರೆದುಕೊಂಡಿದ್ದಾರೆ. ವಾಸುಕಿ ವೈಭವ್ ಹಾಗೂ ಬೃಂದಾ ವಿಕ್ರಮ್ ಮೊದಲು ಸ್ನೇಹಿತರಾಗಿದ್ದರು. ವಾಸುಕಿ ಮತ್ತು ಬೃಂದಾ ಪರಿಚಯ ಬೆಳೆದಿದ್ದು ಸಹ ಇದೇ ರಂಗಭೂಮಿಯಲ್ಲಿ. ವಾಸುಕಿ ವೈಭವ್ ತಮ್ಮ ಜರ್ನಿ ಆರಂಭಿಸಿದ್ದೇ ರಂಗಭೂಮಿಯಲ್ಲಿ.

## ಕಾರ್ತಿಕ್ ಆರ್ಯನ್‌ಗೆ ಎಚ್ಚರಿಕೆ

ಪಾಕಿಸ್ತಾನ ಆಯೋಜಿತ ಕಾರ್ಯಕ್ರಮದಲ್ಲಿ ಭಾಗಿ



ಕಾರ್ತಿಕ್ ಆರ್ಯನ್ ಬಾಲಿವುಡ್‌ನ ಬಲು ಜನಪ್ರಿಯ ನಟ. ಆದರೆ ಇದೀಗ ಬಾಲಿವುಡ್‌ನ ಸಿನಿಮಾ ಕಾರ್ಮಿಕರ ಸಂಘ ಕಾರ್ತಿಕ್ ಆರ್ಯನ್‌ಗೆ ಎಚ್ಚರಿಕೆ ನೀಡಿದೆ. ಕಾರ್ತಿಕ್ ಆರ್ಯನ್ ಕಾರ್ಯಕ್ರಮವೊಂದರ ಅತಿಥಿಯಾಗಿ ಅಮೆರಿಕಕ್ಕೆ ಹೋಗಲಿದ್ದು, ಆ ಕಾರ್ಯಕ್ರಮದಲ್ಲಿ ಭಾಗಿ ಆಗಬಾರದೆಂದು ಸಂಘಟನೆ ಆಗ್ರಹಿಸಿದೆ. ಕಾರ್ತಿಕ್ ಆರ್ಯನ್ ಬಾಲಿವುಡ್‌ನ ಬಲು ಜನಪ್ರಿಯ ಯುವನಟ. ಕಾರ್ತಿಕ್ ನಟಿಸಿರುವ ಕಳೆದ ಎರಡು ಸಿನಿಮಾಗಳು ಸೂಪರ್ ಹಿಟ್ ಎನಿಸಿಕೊಂಡಿವೆ.

ಇದೀಗ ಅವರು 'ಆಶಿಖಿ 3' ಸಿನಿಮಾನಲ್ಲಿ ಶ್ರೀಲೀಲಾ ಜೊತೆಗೆ ನಟಿಸುತ್ತಿದ್ದಾರೆ. ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದೆ ಚಿತ್ರರಂಗಕ್ಕೆ ಬಂದು ಈಗ ಸ್ಟಾರ್ ಆಗಿ ಮೆರೆಯುತ್ತಿರುವ ಕಾರ್ತಿಕ್‌ಗೆ ಇದೀಗ ಬಾಲಿವುಡ್ ಚಿತ್ರರಂಗವೇ ಎಚ್ಚರಿಕೆ ನೀಡಿದೆ. ಅದೂ ಒಂದು ಗಂಭೀರ ವಿಷಯಕ್ಕಾಗಿ. ಅಮೆರಿಕದ ಹ್ಯೂಸ್ಟನ್‌ನಲ್ಲಿ ಆಗಸ್ಟ್ 15 ರಂದು ನಡೆಯಲಿರುವ 'ಆಜಾದಿ ಉತ್ಸವ್' ಕಾರ್ಯಕ್ರಮದಲ್ಲಿ ಕಾರ್ತಿಕ್ ಆರ್ಯನ್ ಭಾಗವಹಿಸಲಿದ್ದಾರೆ. ಈಗಾಗಲೇ 'ಆಜಾದಿ ಉತ್ಸವ್' ಕಾರ್ಯಕ್ರಮದ ಸಾಮಾಜಿಕ ಜಾಲತಾಣ ಪೋಸ್ಟ್ ಹರಿದಾಡುತ್ತಿವೆ. ಕಾರ್ಯಕ್ರಮದಲ್ಲಿ ಕಾರ್ತಿಕ್ ಆರ್ಯನ್ ಭಾಗವಹಿಸುತ್ತಿದ್ದಾರೆಂದು ಜೋರು ಪ್ರಚಾರ ಸಹ ಮಾಡಲಾಗಿದೆ. ಆದರೆ ಇದೀಗ ಈ ಕಾರ್ಯಕ್ರಮದ ವಿಷಯವಾಗಿ ಸಿನಿಮಾ ಕಾರ್ಮಿಕರ ಸಂಘವಾಗಿರುವ (ಎಫ್‌ಡಬ್ಲ್ಯುಐಸಿಇ) ಪತ್ರ ಬರೆದು ಕಾರ್ತಿಕ್ ಆರ್ಯನ್‌ಗೆ ಎಚ್ಚರಿಕೆ ನೀಡಿದೆ.

## ಮಹಿಳೆಯರ ಮೇಲಿನ ಅಪರಾಧಗಳಿಗೆ ಕಠಿಣ ಶಿಕ್ಷೆ..

ಪ್ರಜ್ವಲ್ ರೇವಣ್ಣ ತೀರ್ಪಿನ ಬಗ್ಗೆ ರಮ್ಯಾ ಪ್ರತಿಕ್ರಿಯೆ

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ತೀರ್ಪಿನಂತೆ ಪ್ರಜ್ವಲ್ ರೇವಣ್ಣ ಅವರು ಜೀವನ ಪರ್ಯಂತ ಜೈಲಿನಲ್ಲೇ ಇರಬೇಕು. ಸದ್ಯ ಈ ಸಂಬಂಧ ರಮ್ಯಾ ಅವರು ಪ್ರತಿಕ್ರಿಯಿಸಿದ್ದಾರೆ. ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ ಪ್ರಕಟವಾಗಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ತೀರ್ಪಿನಂತೆ ಪ್ರಜ್ವಲ್ ರೇವಣ್ಣ ಅವರು ಜೀವನ ಪರ್ಯಂತ ಜೈಲಿನಲ್ಲೇ ಇರಬೇಕು. ಸದ್ಯ ಈ ಸಂಬಂಧ ಕನ್ನಡ ಚಿತ್ರರಂಗದ ನಟಿ ರಮ್ಯಾ ಅವರು ಪ್ರತಿಕ್ರಿಯಿಸಿದ್ದಾರೆ. ನ್ಯಾಯಾಲಯದಿಂದ ಆದೇಶ ಬರುತ್ತಿದ್ದಂತೆ ರಮ್ಯಾ ಅವರು ಎಕ್ಸ್ ಅಕೌಂಟ್ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ. ಕಾನೂನು ಎಲ್ಲರಿಗೂ ಒಂದೇ. ಮಹಿಳೆಯರ ಮೇಲಿನ ಅಪರಾಧಗಳಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ರಮ್ಯಾ ಅವರು ಬರೆದು ಪೋಸ್ಟ್ ಮಾಡಿದ್ದಾರೆ. ಈ ಹಿಂದೆಯೂ ತಪ್ಪಿಸ್ಥರಿಗೆ ಶಿಕ್ಷೆಯಾಗಬೇಕು ಎಂದು ರಮ್ಯಾ ಅವರು ಹೇಳಿದ್ದರು. ಕೆ.ಆರ್ ನಗರದ ಮನೆಗೆಲಸದ ಮಹಿಳೆ ಮೇಲೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರು ಅತ್ಯಾಚಾರ ಎಸಗಿದ್ದರು. ಈ ಸಂಬಂಧ ಫೋಟೋ, ವಿಡಿಯೋ ಕೂಡ ಇಟ್ಟುಕೊಂಡಿದ್ದರು. ಸಾಕಷ್ಟು ವಿಡಿಯೋಗಳು ಕೂಡ ಪೆನ್‌ಡ್ರೈವ್‌ನಲ್ಲಿದ್ದವು. ಜಿಲ್ಲೆಯಲ್ಲಿ ಹಂಚಿಕೆ ಮಾಡಲಾಗಿತ್ತು. ಹೀಗಾಗಿ ರಾಜ್ಯ ಸರ್ಕಾರ ಈ ಪ್ರಕರಣವನ್ನು ಎಸ್ ಐಟಿಗೆ ಒಪ್ಪಿಸಿತ್ತು. ತನಿಖೆ ನಡೆಸಿದ್ದ ಎಸ್‌ಐಟಿ ವರದಿ ಹಾಗೂ ಸಾಕ್ಷಿ ಸಮೇತ ಕೋರ್ಟ್‌ಗೆ ಸಲ್ಲಿಕೆ ಮಾಡಿತ್ತು. ಎರಡು ಕಡೆಯ ವಾದ, ಪ್ರತಿವಾದ ಆಲಿಸಿ ಪ್ರಜ್ವಲ್ ರೇವಣ್ಣಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.



ಸ್ಯಾಂಡಲ್‌ವುಡ್ ನಟ ಲವ್ಲಿ ಸ್ಟಾರ್ ಪ್ರೇಮ್ ದಂಪತಿಗಳು ಸಖತ್ ಸಂಭ್ರಮದಲ್ಲಿದ್ದಾರೆ. 'ನೆನಪಿರಲಿ' ಪ್ರೇಮ್ – ಜ್ಯೋತಿ ಮದುವೆಯಾಗಿ ನಿನ್ನೆಗೆ 25 ವರ್ಷಗಳು ತುಂಬಿವೆ. ತಮ್ಮ 25ನೇ ವಿವಾಹ ವಾರ್ಷಿಕೋತ್ಸವವನ್ನು ಪ್ರೇಮ್, ಜ್ಯೋತಿ ದಂಪತಿ ವಿಶೇಷವಾಗಿ ಆಚರಿಸಿಕೊಂಡಿದ್ದಾರೆ. ಸ್ಯಾಂಡಲ್‌ವುಡ್ ನಟ ಲವ್ಲಿ ಸ್ಟಾರ್ ಪ್ರೇಮ್ ದಂಪತಿ ಸಖತ್ ಸಂಭ್ರಮದಲ್ಲಿದ್ದಾರೆ. 'ನೆನಪಿರಲಿ' ಪ್ರೇಮ್ – ಜ್ಯೋತಿ ಮದುವೆಯಾಗಿ ನಿನ್ನೆಗೆ 25 ವರ್ಷಗಳು ತುಂಬಿವೆ. ತಮ್ಮ 25ನೇ ವಿವಾಹ ವಾರ್ಷಿಕೋತ್ಸವವನ್ನು ಪ್ರೇಮ್, ಜ್ಯೋತಿ ದಂಪತಿ ವಿಶೇಷವಾಗಿ ಆಚರಿಸಿಕೊಂಡಿದ್ದಾರೆ. ಅಲ್ಲದೇ ಮ್ಯಾರೇಜ್ ಆನಿವರ್ಸರಿ ಪ್ರಯುಕ್ತ ಪತ್ನಿ ಜ್ಯೋತಿಗೆ ಪ್ರೇಮ್ ರಕ್ತದಲ್ಲಿ ಪತ್ರ ಬರೆದು ವಿಶ್ ಮಾಡಿದ್ದಾರೆ. ಜೊತೆಗೆ ದೇವಸ್ಥಾನಕ್ಕೂ ಭೇಟಿ ಕೊಟ್ಟಿದ್ದಾರೆ. ಪ್ರೇಮ್ ಹಾಗೂ ಜ್ಯೋತಿ ದಂಪತಿ ಒಬ್ಬರಿಗೊಬ್ಬರು ಪ್ರೀತಿಸಿ ಮದುವೆ ಆದವರು. ಪ್ರೇಮ್ ಚಿತ್ರರಂಗಕ್ಕೆ ಕಾಲಿಡುವ ಮುನ್ನವೇ ವೈವಾಹಿಕ

## 25ನೇ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿ ಪ್ರೇಮ್ ದಂಪತಿ


ಬದುಕಿಗೆ ನಾಂದಿ ಹಾಡಿದ್ದರು. ಕಷ್ಟ– ಸುಖ, ಏಳು –ಬೀಳನ್ನ ಸಮನಾಗಿ ಸ್ವೀಕರಿಸಿರುವ ಪ್ರೇಮ್ ಹಾಗೂ ಜ್ಯೋತಿ ದಂಪತಿ ಹಲವರಿಗೆ ಸ್ಫೂರ್ತಿಯಾಗಿದ್ದಾರೆ.

ಇನ್ನೂ, 25ನೇ ವಿವಾಹ ವಾರ್ಷಿಕೋತ್ಸವವನ್ನು ಕ್ಯೂಟ್ ಆಗಿ ಆಚರಿಸಿಕೊಂಡ ವಿಡಿಯೋವನ್ನು ದಂಪತಿಗೆ ಸೋಷಿಯಲ್ ಮೀಡಿಯಾದಲ್ಲಿ ಶೇರ್ ಮಾಡೊಕೊಂಡಿದ್ದಾರೆ. ಇದೇ ವಿಡಿಯೋ ನೋಡಿದ ಅಭಿಮಾನಿಗಳು ಕ್ಯೂಟ್ ದಂಪತಿಗೆ ಶುಭ ಹಾರೈಸುತ್ತಿದ್ದಾರೆ.

## ಇನ್ಮುಂದೆ ಪಾಕಿಸ್ತಾನ ಟೂರ್ನಿಯಲ್ಲಿ ಆಡುವಂತಿಲ್ಲ

2025ರ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್‌ನಲ್ಲಿ ದಕ್ಷಿಣ ಆಫ್ರಿಕಾ ಚಾಂಪಿಯನ್ ಆಗಿದೆ. ಪಾಕಿಸ್ತಾನ ತಂಡ ಭಾರತ ತಂಡದ ಪಂದ್ಯವನ್ನು ಆಡಲು ನಿರಾಕರಿಸಿದ್ದಕ್ಕೆ ಪ್ರತಿಕ್ರಿಯೆಯಾಗಿ ಇನ್ನು ಮುಂದೆ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಲೀಗ್‌ನಲ್ಲಿ ಭಾಗವಹಿಸದಿರಲು ನಿರ್ಧರಿಸಿದೆ. ಭಾರತದ ನಿರ್ಧಾರದಿಂದಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಈ ನಿರ್ಧಾರ ಕೈಗೊಂಡಿದೆ ಎಂದು ಹೇಳಿದೆ.

2025ರ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್‌ನ ಫೈನಲ್ ಪಂದ್ಯವು ಪಾಕಿಸ್ತಾನ ಚಾಂಪಿಯನ್ಸ್ ಮತ್ತು ದಕ್ಷಿಣ ಆಫ್ರಿಕಾ ಚಾಂಪಿಯನ್ಸ್ ನಡುವೆ ಇಂಗ್ಲೆಂಡ್‌ನಲ್ಲಿ ನಡೆಯಿತು. ಈ ಪ್ರಶಸ್ತಿ ಪಂದ್ಯದಲ್ಲಿ, ದಕ್ಷಿಣ ಆಫ್ರಿಕಾ ಚಾಂಪಿಯನ್ಸ್ ಪಾಕಿಸ್ತಾನ ತಂಡವನ್ನು ಏಕಪಕ್ಷೀಯವಾಗಿ ಮಣಿಸಿ ಚಾಂಪಿಯನ್ ಪಟ್ಟವನ್ನು ಅಲಂಕರಿಸಿತು. ಇದೀಗ ಈ ಪಂದ್ಯಾವಳಿಯ ಅಂತ್ಯದ ನಂತರ, ಪಾಕಿಸ್ತಾನ ಕ್ರಿಕೆಟ್ ಮಂಡಳಿ ಒಂದು ದೊಡ್ಡ ನಿರ್ಧಾರವನ್ನು



ತೆಗೆದುಕೊಂಡಿದ್ದು, ಈ ಪಂದ್ಯಾವಳಿಯಲ್ಲಿ ಮತ್ತೆ ಎಂದಿಗೂ ಭಾಗವಹಿಸದಿರಲು ತೀರ್ಮಾನಿಸಿದೆ. ಅಂದರೆ ಇನ್ನು ಮುಂದೆ ಈ ಪಂದ್ಯಾವಳಿಯಲ್ಲಿ ಪಾಕಿಸ್ತಾನ ತಂಡ ಆಡುವುದುನ್ನು ನಾವು ಕಾಣಲಾಗುವುದಿಲ್ಲ.

ಪಿಸಿಬಿ ಈ ನಿರ್ಧಾರಕ್ಕೆ ಕಾರಣವೇನು

ವಾಸ್ತವವಾಗಿ ಈ ಪಂದ್ಯಾವಳಿಯಲ್ಲಿ ಇಂಡಿಯಾ ಚಾಂಪಿಯನ್ಸ್ ತಂಡ, ಪಾಕಿಸ್ತಾನ ಚಾಂಪಿಯನ್ಸ್ ಜೊತೆ ಆಡಲು ನಿರಾಕರಿಸಿದ್ದರಿಂದ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಈ ನಿರ್ಧಾರ ತೆಗೆದುಕೊಂಡಿದೆ. ಮೊದಲ ಗುಂಪು ಹಂತದಲ್ಲಿ ಈ ಎರಡೂ ತಂಡಗಳ ನಡುವೆ ಪಂದ್ಯ ನಡೆಯಬೇಕಿತ್ತು ಆದರೆ ಭಾರತೀಯ ಆಟಗಾರರು ಪಾಕಿಸ್ತಾನ ವಿರುದ್ಧದ ಪಂದ್ಯವನ್ನು

ಲೀಗ್‌ನಲ್ಲಿ ಆಡುವುದಕ್ಕೆ ಸಂಪೂರ್ಣ ನಿಷೇಧ

ಆಡಲು ನಿರಾಕರಿಸಿದರು. ಆ ಬಳಿಕ ಸೆಮಿಫೈನಲ್‌ನಲ್ಲಿಯೂ ಪಾಕಿಸ್ತಾನದ ವಿರುದ್ಧ ಆಡಲು ನಿರಾಕರಿಸಿದ ಭಾರತ ತಂಡ ಡಬ್ಲ್ಯೂಸಿಎಲ್ ಟೂರ್ನಿಯಿಂದಲೇ ತನ್ನ ಹೆಸರನ್ನು ಹಿಂಪಡೆದುಕೊಂಡಿತು.

ಆದಾಗ್ಯೂ ಲೀಗ್ ಪಂದ್ಯ ರದ್ದಾದರೂ ಭಾರತ ತಂಡಕ್ಕೆ ಅಂಕಗಳನ್ನು ನೀಡಲಾಯಿತು. ಹೀಗಾಗಿ ಆಯೋಜಕರು ಭಾರತವನ್ನು ಬೆಂಬಲಿಸುತ್ತಿದ್ದಾರೆ ಎಂದು ಪಿಸಿಬಿ ಆರೋಪಿಸಿದ್ದು, ಈ ಲೀಗ್‌ನಲ್ಲಿ ಆಡುವುದಕ್ಕೆ ಸಂಪೂರ್ಣ ನಿಷೇಧ ಹೇರಿದೆ.

ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿ, ಟೂರ್ನಮೆಂಟ್‌ನಲ್ಲಿ ನಮ್ಮ ತಂಡ ಆಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇನ್ನು ಮುಂದೆ ಯಾವುದೇ ಆಟಗಾರನು ಈ ಟೂರ್ನಮೆಂಟ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಪಿಸಿಬಿ ತಿಳಿಸಿದೆ.

**ಫೈನಲ್ ಗೆದ್ದ ದಕ್ಷಿಣ ಆಫ್ರಿಕಾ**

ಡಬ್ಲ್ಯೂಸಿಎಲ್ 2025 ರ ಫೈನಲ್ ಪಂದ್ಯದಲ್ಲಿ, ಪಾಕಿಸ್ತಾನ ಚಾಂಪಿಯನ್ಸ್ ಮೊದಲು ಬ್ಯಾಟ್ ಮಾಡಿ 20 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 195 ರನ್ ಗಳಿಸಿತು. ತಂಡದ ಪರ ಅನುಭವಿ ಆರಂಭಿಕ ಆಟಗಾರ ಶಾರ್ಜೀಲ್ ಖಾನ್ 76 ರನ್ ಗಳಿಸಿದರೆ, ಉಮರ್ ಅಮೀನ್ ಔಟಾಗದೆ 36 ರನ್ ಗಳಿಸಿದರು. ಆಸಿಫ್ ಅಲಿ 28 ರನ್‌ಗಳ ಕಾಣಿಕೆ ನೀಡಿದರು. ಇದಕ್ಕೆ ಉತ್ತರವಾಗಿ, ದಕ್ಷಿಣ ಆಫ್ರಿಕಾ ಚಾಂಪಿಯನ್ಸ್ ಒಂದು ವಿಕೆಟ್ ಕಳೆದುಕೊಂಡು ಗೆಲುವಿನ ದಡ ಸೇರಿತು. ದಕ್ಷಿಣ ಆಫ್ರಿಕಾ ಚಾಂಪಿಯನ್ಸ್ ಪರ ನಾಯಕ ಎಬಿ ಡಿವಿಲಿಯರ್ಸ್ 120 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

## 46 ವರ್ಷಗಳ ಬಳಿಕ ಶತಕಗಳ ದಾಖಲೆ


ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಟೀಮ್ ಇಂಡಿಯಾ ಬ್ಯಾಟರ್‌ಗಳು ಭರ್ಜರಿ ಪ್ರದರ್ಶನ ನೀಡಿದ್ದಾರೆ. ಈ ಭರ್ಜರಿ ಪ್ರದರ್ಶನದೊಂದಿಗೆ ಭಾರತೀಯ ದಾಂಡಿಗರು ಟೀಮ್ ಇಂಡಿಯಾದ ಬ್ಯಾಟರ್‌ಗಳ ಹಳೆಯ ದಾಖಲೆಯನ್ನು ಅಳಿಸಿ ಹಾಕಿದ್ದಾರೆ. ಅಂದರೆ ಬರೋಬ್ಬರಿ 46 ವರ್ಷಗಳ ಬಳಿಕ ಭಾರತೀಯ ಬ್ಯಾಟರ್‌ಗಳು ಒಂದೇ ಸರಣಿಯಲ್ಲಿ ಅತ್ಯಧಿಕ ಸೆಂಚುರಿ ಸಿಡಿಸಿದ್ದಾರೆ.

ಲೀಡ್ಸ್‌ನ ಹೆಡಿಂಗ್ಲೆ ಮೈದಾನದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಪ್ರಥಮ ಇನಿಂಗ್ಸ್‌ನಲ್ಲಿ ಯಶಸ್ವಿ ಜೈಸ್ವಾಲ್ (101), ಶುಭ್‌ಮನ್ (147) ಹಾಗೂ ರಿಷಭ್ ಪಂತ್ (134) ಶತಕ ಸಿಡಿಸಿದ್ದರು. ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಕೆಎಲ್ ರಾಹುಲ್ (137) ಹಾಗೂ ರಿಷಭ್ ಪಂತ್ (118) ಶತಕ ಬಾರಿಸಿದ್ದರು.

ಇನ್ನು ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬಾಸ್ಟನ್ ಮೈದಾನದಲ್ಲಿ ನಡೆದ ದ್ವಿತೀಯ ಟೆಸ್ಟ್ ಮೊದಲ ಇನಿಂಗ್ಸ್‌ನಲ್ಲಿ ಶುಭ್‌ಮನ್ ಗಿಲ್ (269) ದ್ವಿಶತಕ ಸಿಡಿಸಿದ್ದರು. ಆ ಬಳಿಕ ದ್ವಿತೀಯ ಇನಿಂಗ್ಸ್‌ನಲ್ಲಿ 161 ರನ್ ಬಾರಿಸಿ ಹೊಸ ಇತಿಹಾಸ ನಿರ್ಮಿಸಿದ್ದರು.

ಹಾಗೆಯೇ ಲಂಡನ್‌ನ ಲಾರ್ಡ್ಸ್ ಮೈದಾನದಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಟೀಮ್ ಇಂಡಿಯಾ ಪರ ಕೆಎಲ್ ರಾಹುಲ್ (100) ಶತಕ ಬಾರಿಸಿದ್ದರು. ಹಾಗೆಯೇ ಮ್ಯಾಂಚೆಸ್ಟರ್‌ನಲ್ಲಿ ನಡೆದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಶುಭ್‌ಮನ್ ಗಿಲ್ (103), ರವೀಂದ್ರ ಜಡೇಜಾ (107) ಹಾಗೂ ವಾಷಿಂಗ್ಟನ್ ಸುಂದರ್ (101) ಶತಕ ಸಿಡಿಸಿದ್ದಾರೆ. ಇದೀಗ ಕೆನ್ನಿಂಗ್ಟನ್ ಓವಲ್ ಮೈದಾನದಲ್ಲಿ ನಡೆದ ಐದನೇ ಟೆಸ್ಟ್‌ನಲ್ಲಿ ಯಶಸ್ವಿ ಜೈಸ್ವಾಲ್ (118) ಶತಕ ಸಿಡಿಸಿದ್ದಾರೆ. ಈ ಶತಕಗಳೊಂದಿಗೆ ಭಾರತೀಯ ಬ್ಯಾಟರ್‌ಗಳು ಹೊಸ ಇತಿಹಾಸ ನಿರ್ಮಿಸಿದ್ದಾರೆ. ಅಂದರೆ 1978–79 ರಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಸರಣಿಯಲ್ಲಿ ಟೀಮ್ ಇಂಡಿಯಾ ಬ್ಯಾಟರ್‌ಗಳು ಒಟ್ಟು 11 ಶತಕ ಸಿಡಿಸಿ ದಾಖಲೆ ನಿರ್ಮಿಸಿದ್ದರು. ಇದೀಗ 5 ಪಂದ್ಯಗಳ ಮೂಲಕ ಭಾರತದ ಯಂಗ್ ಬ್ಯಾಟರ್‌ಗಳು ಒಟ್ಟು 12 ಶತಕ ಸಿಡಿಸಿದ್ದಾರೆ. ಈ ಮೂಲಕ 46 ವರ್ಷಗಳ ದಾಖಲೆಯನ್ನು ಮುರಿದಿದ್ದಾರೆ. ಅಲ್ಲದೆ 93 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸರಣಿಯೊಂದರಲ್ಲಿ 12 ಶತಕಗಳ ಸಾಧನೆ ಮಾಡಿದ್ದಾರೆ.





## ಪ್ರಪೋಸ್ ಮಾಡ್ತೀನಿ; ಲೈವ್‌ನಲ್ಲೇ ನಿರೂಪಕಿಗೆ ಶಾಕ್

ವಿಶ್ವ ಚಾಂಪಿಯನ್ ಶಿಪ್ ಆಫ್ ಲೆಜೆಂಡ್ಸ್ (ಡಬ್ಲ್ಯೂಸಿಎಲ್) ನ ಎರಡನೇ ಸೀಸನ್‌ಗೆ ಅದ್ಧೂರಿ ತೆರೆ ಬಿದ್ದಿದೆ. ಭಾರತ–ಪಾಕಿಸ್ತಾನ ಪಂದ್ಯದ ವಿವಾದಗಳ ನಡುವೆಯೇ ಇಂಗ್ಲೆಂಡ್‌ನಲ್ಲಿ ನಡೆದ ಈ ಪಂದ್ಯಾವಳಿಯಲ್ಲಿ ದಕ್ಷಿಣ ಆಫ್ರಿಕಾ ಚಾಂಪಿಯನ್ಸ್ ಪ್ರಶಸ್ತಿಯನ್ನು ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. ಎಬಿ ಡಿವಿಲಿಯರ್ಸ್ ನಾಯಕತ್ವದ ಆಫ್ರಿಕಾ ತಂಡವು ಪಾಕಿಸ್ತಾನ ಚಾಂಪಿಯನ್ಸ್ ತಂಡವನ್ನು ಸೋಲಿಸಿ ಟ್ರೋಫಿಯನ್ನು ಎತ್ತಿಹಿಡಿಯಿತು. ಇದರೊಂದಿಗೆ 2ನೇ ಸೀಸನ್‌ಗೆ ತೆರೆಬಿದ್ದಿದ್ದು, ಇದೀಗ ಡಬ್ಲ್ಯೂಸಿಎಲ್‌ನ ಮಾಲೀಕರ ವಿಡಿಯೋವೊಂದು ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗುತ್ತಿದೆ. ಈ ವಿಡಿಯೋದಲ್ಲಿ ಅವರು ಲೀಗ್‌ನ ನಿರೂಪಕಿಗೆ ಲೈವ್ ಕಾರ್ಯಕ್ರಮದಲಿಯೇ ಪ್ರಪೋಸ್ ಮಾಡುವುದಾಗಿ ಹೇಳಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದಾರೆ.

ಆಗಸ್ಟ್ 2 ರ ಶನಿವಾರ ಡಬ್ಲ್ಯೂಸಿಎಲ್ ಫೈನಲ್ ಪಂದ್ಯ ನಡೆದಿತ್ತು. ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ನಡುವಿನ ಪ್ರಶಸ್ತಿ ಪಂದ್ಯ ಪ್ರಾರಂಭವಾಗುವ ಮೊದಲು, ಪ್ರಸಿದ್ಧ ನಿರೂಪಕಿ ಕರಿಷ್ಮಾ ಕೊಟಕ್ ಕಾರ್ಯಕ್ರಮದ ಸಮಯದಲ್ಲಿ ಮೈದಾನದಲ್ಲಿ ಹಾಜರಿದ್ದರು. ಈ ಸಮಯದಲ್ಲಿ, ಅವರು ಡಬ್ಲ್ಯೂಸಿಎಲ್ ಮಾಲೀಕ ಮತ್ತು ಸಿಇಒ ಹರ್ಷಿತ್ ತೋಮರ್ ಅವರೊಂದಿಗೆ ಲೀಗ್ ಬಗ್ಗೆ ಚರ್ಚಿಸುತ್ತಿದ್ದರು. ಕೊನೆಯಲ್ಲಿ, ಕರಿಷ್ಮಾ ಫೈನಲ್ ಮುಗಿದ ನಂತರ ತೋಮರ್ ಅವರನ್ನು ಹೇಗೆ ಆಚರಿಸುತ್ತೀರಿ ಎಂದು ಕೇಳಿದರು. ತೋಮರ್ ನೀಡಿದ ಉತ್ತರ ಎಲ್ಲರನ್ನೂ ಬೆಚ್ಚಿಬೀಳಿಸಿತು. ತೋಮರ್, ''ಇದೆಲ್ಲ ಮುಗಿದ ನಂತರ, ಬಹುಶಃ ನಾನು ನಿಮಗೆ ಪ್ರಪೋಸ್ ಮಾಡುತ್ತೇನೆ'' ಎಂದು ಹೇಳಿದರು. ಇದನ್ನು ಹೇಳಿದ ನಂತರ, ಡಬ್ಲ್ಯೂಸಿಎಲ್ ಮಾಲೀಕರು ನಗಲು ಪ್ರಾರಂಭಿಸಿ, ಅಲ್ಲಿಂದ ಹೊರಟುಹೋದರು. ಇತ್ತ ನಿರೂಪಕಿ ಕರಿಷ್ಮಾ ಅವರಿಗೆ ಏನು ಮಾತನಾಡಬೇಕು ಎಂಬುದೇ ಮರೆತು ಹೋಯಿತು. ಹೀಗಾಗಿ ಅವರು 'ಓ ದೇವರೇ' ಎಂದು ಮಾತ್ರ ಹೇಳಿ ನಗಲು ಪ್ರಾರಂಭಿಸಿದರು. ವಾಸ್ತವವಾಗಿ ಹರ್ಷಿತ್ ತೋಮರ್ ಮತ್ತು ಕರಿಷ್ಮಾ ಕೊಟಕ್ ಯಾವುದೇ ರೀತಿಯ ಸಂಬಂಧದಲ್ಲಿದ್ದಾರೆಯೇ ಅಥವಾ ಇಲ್ಲವೇ ಎಂಬುದು ಈಗ ಸ್ಪಷ್ಟವಾಗಿಲ್ಲ.

ಪ್ಯಾನ್ ಇಂಡಿಯಾ ಸಿನಿಮಾ





ಆಂಡರ್ಸನ್–ತೆಂಡೂಲ್ಕರ್ ಸರಣಿಯ ಮೊದಲ ಮ್ಯಾಚ್‌ನಲ್ಲಿ ಇಂಗ್ಲೆಂಡ್ ತಂಡ 5 ವಿಕೆಟ್‌ಗಳ ಜಯ ಸಾಧಿಸಿತ್ತು. ಇನ್ನು ದ್ವಿತೀಯ ಪಂದ್ಯದಲ್ಲಿ 336 ರನ್‌ಗಳಿಂದ ಟೀಮ್ ಇಂಡಿಯಾ ಗೆಲುವು ದಾಖಲಿಸಿತ್ತು. ಮೂರನೇ ಮ್ಯಾಚ್‌ನಲ್ಲಿ 22 ರನ್‌ಗಳ ಜಯ ಸಾಧಿಸುವಲ್ಲಿ ಇಂಗ್ಲೆಂಡ್ ಯಶಸ್ವಿಯಾಗಿತ್ತು. ಹಾಗೆಯೇ ನಾಲ್ಕನೇ ಪಂದ್ಯವನ್ನು ಟೀಮ್ ಇಂಡಿಯಾ ಡ್ರಾನಲ್ಲಿ ಕೊನೆಗೊಳಿಸಿದೆ. ಇದೀಗ ಐದನೇ ಪಂದ್ಯದಲ್ಲಿ ಗೆಲ್ಲುವ ಮೂಲಕ ಭಾರತ ತಂಡವು ಸರಣಿಯನ್ನು 2–2 ಅಂತರದಿಂದ ಡ್ರಾನಲ್ಲಿ ಕೊನೆ ಮಾಡಬಹುದು. ಭಾರತ ಮತ್ತು ಇಂಗ್ಲೆಂಡ್ ನಡುವಣ 5ನೇ ಟೆಸ್ಟ್ ಪಂದ್ಯವು ನಾಲ್ಕನೇ ದಿನದಾಟಕ್ಕೆ ಕಾಲಿಟ್ಟಿದೆ. ಲಂಡನ್‌ನ ಕೆನ್ನಿಂಗ್ಟನ್ ಓವಲ್ ಮೈದಾನದಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಮೊದಲ ಇನಿಂಗ್ಸ್‌ನಲ್ಲಿ 224 ರನ್ ಕಲೆಹಾಕಿದ್ದರು. ಇದಕ್ಕುತ್ತರವಾಗಿ ಪ್ರಥಮ ಇನಿಂಗ್ಸ್ ಆಡಿದ ಇಂಗ್ಲೆಂಡ್ 247 ರನ್‌ಗಳಿಸಿ ಆಲೌಟ್ ಆಗಿತ್ತು.

## ಕೇವಲ 8 ವಿಕೆಟ್ ಕಬಳಿಸಿದರೆ ಭಾರತಕ್ಕೆ ಜಯ

23 ರನ್‌ಗಳ ಹಿನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಶುರು ಮಾಡಿದ ಟೀಮ್ ಇಂಡಿಯಾ ಪರ ಯಶಸ್ವಿ ಜೈಸ್ವಾಲ್ (118) ಭರ್ಜರಿ ಶತಕ ಸಿಡಿಸಿದರು. ಆ ಬಳಿಕ ರವೀಂದ್ರ ಜಡೇಜಾ (53) ಹಾಗೂ ವಾಷಿಂಗ್ಟನ್ ಸುಂದರ್ (53) ಹಾಫ್ ಸೆಂಚುರಿಗಳನ್ನು ಬಾರಿಸಿದ್ದಾರೆ. ಈ ಮೂಲಕ ಭಾರತ ತಂಡವು ದ್ವಿತೀಯ ಇನಿಂಗ್ಸ್‌ನಲ್ಲಿ ಬರೋಬ್ಬರಿ 396 ರನ್ ಕಲೆಹಾಕಿದೆ.

ಅತ್ತ ಮೊದಲ ಇನಿಂಗ್ಸ್‌ನಲ್ಲಿ 23 ರನ್‌ಗಳ ಮುನ್ನಡೆ ಹೊಂದಿದ್ದ ಇಂಗ್ಲೆಂಡ್ ತಂಡವು ದ್ವಿತೀಯ ಇನಿಂಗ್ಸ್‌ನಲ್ಲಿ 374 ರನ್‌ಗಳ ಗುರಿ ಪಡೆದುಕೊಂಡಿದೆ. ಈ ಗುರಿಯನ್ನು ಬೆನ್ನತ್ತಲು ಆರಂಭಿಸಿರುವ ಇಂಗ್ಲೆಂಡ್ ತಂಡವು ಮೊದಲ ದಿನದಾಟದ ಮುಕ್ತಾಯದ ವೇಳೆಗೆ 1 ವಿಕೆಟ್ ಕಳೆದುಕೊಂಡು 50 ರನ್ ಕಲೆಹಾಕಿದೆ. ಇನ್ನು ಎರಡು ದಿನದಾಟಗಳು ಬಾಕಿಯಿದ್ದು, ಇದರ ನಡುವೆ ಇಂಗ್ಲೆಂಡ್ 324 ರನ್‌ಗಳಿಸಿದರೆ ಪಂದ್ಯವನ್ನು ಗೆಲ್ಲಬಹುದು. ಅದರೊಳಗೆ ಟೀಮ್ ಇಂಡಿಯಾ ಕೇವಲ 8 ವಿಕೆಟ್ ಕಬಳಿಸಿದರೆ ಸಾಕು ಜಯಭೇರಿ ಬಾರಿಸಬಹುದು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com, epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966